ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ


ಯೋಗಿಯ 'ಎನ್‌ಕೌಂಟರ್ ರಾಜ್'ಗೆ ಹೊಸ ಬಲಿ

ವಿವೇಕ ತಿವಾರಿ



ಸಂಪುಟ 12 | ಸಂಚಿಕೆ 41 | ಅಕ್ಟೋಬರ್ 8–14, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ಜಲಿಯನ್ ವಾಲಾಬಾಗ್ ನೆನಪು 100



ಮಹಿಳಾ ಸಮಾನತೆಯತ್ತ ... ಸರಣಿ ತೀರ್ಪುಗಳು

ಒಳಮೀಸಲಾತಿ ಜಾರಿಯಾಗಬೇಕು!



ದಲಿತ ಐಕ್ಯತೆ ಕಾಪಾಡಬೇಕು!



BBMP ವಿಭಜನೆಯಲ್ಲ ಪುನರ್ರಚನೆ

'ಆಯುಷ್ಮಾನ್ ಭವ'ದ ಕ್ರೂರ ವ್ಯಂಗ್ಯ



ತ್ರಿಪುರಾ: 'ದೇಶೇರ್ ಕಥಾ' ದಮನ



ರಫೇಲ್ ಹಗರಣ–ಜೆಪಿಸಿ ತನಿಖೆ ನಡೆಯಲೇ ಬೇಕು:ಎಡಪಕ್ಷಗಳ ಆಗ್ರಹ

ಜನಾಧಿಕಾರ ಆಂದೋಲನದ ಭ್ರಷ್ಟಾಚಾರ–ವಿರೋಧಿ ವಾರಾಚರಣೆಗೆ ಬೆಂಬಲ

ರಫೇಲ್ ಯುದ್ಧ ವಿಮಾನಗಳ ಖರೀದಿಯಲ್ಲಿ ಸಂದೇಹದ ಮುಳ್ಳು ಪ್ರಧಾನ ಮಂತ್ರಿಗಳತ್ತವೇ ಬೊಟ್ಟು ಮಾಡುತ್ತಿದೆ. ಈ ಮಹಾ ಹಗರಣವನ್ನು ಒಂದು ಜಂಟಿ ಸಂಸದೀಯ ಸಮಿತಿಯ ವಿಚಾರಣೆಗೆ ಒಪ್ಪಿಸಬೇಕು ಎಂದು ಸಿಪಿಐ(ಎಂ), ಸಿಪಿಐ ಮತ್ತು ಸಿಪಿಐ(ಎಂಎಲ್)–ಲಿಬರೇಶನ್ ಈ ಮೂರು ಎಡಪಕ್ಷಗಳು ಅಕ್ಟೋಬರ್ 2 ರಂದು ನೀಡಿರುವ ಒಂದು ಜಂಟಿ ಹೇಳಿಕೆಯಲ್ಲಿ ಆಗ್ರಹಿಸಿವೆ.

ಜನ ಏಕತಾ ಜನ ಅಧಿಕಾರ್ ಆಂದೋಲನ (ಜೆಇಜೆಎಎ) ಅಕ್ಟೋಬರ್ 22 ರಿಂದ 27 ರ ವರೆಗೆ ಈ ಮೋದಿ ಸರಕಾರದ ಭ್ರಷ್ಟಾಚಾರದ ವಿರುದ್ಧ ವಾರಾಚರಣೆ ನಡೆಸಲು ನಿರ್ಧರಿಸಿದ್ದು ಎಡಪಕ್ಷಗಳು ಅದಕ್ಕೆ ಬೆಂಬಲ ವ್ಯಕ್ತಪಡಿಸಿವೆ.

ಇತರ ಎಡಪಕ್ಷಗಳೊಂದಿಗೆ ಸಮಾಲೋಚಿಸಿ ಈ ಮಹಾ ಹಗರಣವನ್ನು ಬಯಲುಗೊಳಿಸಲು ಮತ್ತು ತಪ್ಪಿತಸ್ಥರನ್ನು ಶಿಕ್ಷಿಸಲು ಒಂದು ರಾಷ್ಟ್ರವ್ಯಾಪಿ ಪ್ರತಿಭಟನಾ ಕಾರ್ಯಾಚರಣೆಗೆ ಕರೆ ನೀಡಲಾಗುವುದು ಎಂದು ಈ ಹೇಳಿಕೆ ತಿಳಿಸಿದೆ.

ರೈತರ ವಿರುದ್ಧ ಪೋಲಿಸ್ ಕಾರ್ಯಾಚರಣೆಗೆ ಖಂಡನೆ

ದಿಲ್ಲಿಯ ಹೊರವಲಯದಲ್ಲಿ ಅಕ್ಟೋಬರ್ 2 ರಂದು ರೈತರ ಮೇಲೆ ಅಮಾನುಷ ದಾಳಿಯನ್ನು ಎಡಪಕ್ಷಗಳು ಖಂಡಿಸಿವೆ. ಇದು ಮೋದಿ ಸರಕಾರದ ರೈತ–ವಿರೋಧಿ ನಿಲುವನ್ನು ಮತ್ತೊಮ್ಮೆ ಪ್ರದರ್ಶಿಸಿದೆ ಎಂದು ಅವು ಹೇಳಿವೆ. ಪ್ರಧಾನ ಮಂತ್ರಿ ಮೋದಿಯವರು 2014 ರ ಚುನಾವಣೆಗಳ ವೇಳೆಯಲ್ಲಿ ನೀಡಿದ ಆಶ್ವಾಸನೆಗಳೆಲ್ಲದರಲ್ಲೂ ವಿಶ್ವಾಸಘಾತ ಮಾಡಿದ್ದಾರೆ. ತದ್ವಿರುದ್ಧವಾಗಿ ಅವರ ಧೋರಣೆಗಳು ಕರ್ಷಕ ಸಂಕಟವನ್ನು ಇನ್ನಷ್ಟು ಆಳಗೊಳಿಸಿವೆ, ಸಾವಿರಾರು ರೈತರು ಸಾಲ ಹೊರೆಯಿಂದಾಗಿ ಆತ್ಮಹತ್ಯೆಗಳಿಯುವಂತೆ ಮಾಡಿವೆ ಎಂದು ಎಡಪಕ್ಷಗಳು ಟೀಕಿಸಿವೆ.

ಉತ್ತರಪ್ರದೇಶದಲ್ಲಿ ಕಗ್ಗೊಲೆ –ಕಠಿಣ ಕಾರ್ಯಾಚರಣೆಗೆ ಆಗ್ರಹ

ಉತ್ತರಪ್ರದೇಶದಲ್ಲಿ ಲಖನೌನಲ್ಲಿ 38 ವರ್ಷದ ಆಪಲ್ ಕಂಪನಿಯ ಅಧಿಕಾರಿ ವಿವೇಕ ತಿವಾರಿಯ ಕಗ್ಗೊಲೆಯನ್ನು ಎಡಪಕ್ಷಗಳು ಬಲವಾಗಿ ಖಂಡಿಸಿವೆ. ಇಂತಹ ಕಾನೂನುಹೀನತೆಯನ್ನು ಹರಡುತ್ತಿರುವ, ಜನಗಳನ್ನು ಸಾಯಿಸುತ್ತಿರುವ ಪೋಲೀಸ್ ಸಿಬ್ಬಂದಿಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಅವು ಆಗ್ರಹಿಸಿವೆ. ಅಲಿಗಡ್‌ನಲ್ಲಿ ಇಬ್ಬರು ಅಮಾಯಕರ 'ಎನ್‌ಕೌಂಟರ್' ಕೊಲೆಯ ಬೆನ್ನಲ್ಲೇ ಈ ಕೊಲೆ ನಡೆದಿದೆ. ಈ 'ಎನ್‌ಕೌಂಟರ್ ರಾಜ್ಯಭಾರ'ದ ಘಟನೆಯನ್ನು ವೀಕ್ಷಿಸಲು ಮಾಧ್ಯಮಗಳನ್ನು ಆಹ್ವಾನಿಸಲಾಗಿತ್ತು ಎಂಬ ಸಂಗತಿಯತ್ತವೂ ಈ ಹೇಳಿಕೆ ಗಮನ ಸೆಳೆದಿದೆ.

ಭೀಮಾ–ಕೋರೆಗಾಂವ್: ಸುಳ್ಳು ಆಪಾದನೆಗಳು ಬಯಲಿಗೆ

ಭೀಮಾ–ಕೋರೆಗಾಂವ್ ಹಿಂಸಾಚಾರ ಕುರಿತ ಮೊಕದ್ದಮೆಗೆ ಸಂಬಂಧಪಟ್ಟಂತೆ ಬಂಧಿಸಲ್ಪಟ್ಟ ಐವರಲ್ಲಿ ಒಬ್ಬರಾದ ಗೌತಮ್ ನವ್ಲಖ ರವರನ್ನು ಪುಣೆಗೆ ಒಯ್ಯಲು ಪುಣೆ ಪೋಲೀಸರು ಪಡೆದ ವರ್ಗಾವಣೆ ರಿಮಾಂಡನ್ನು ದಿಲ್ಲಿ ಹೈಕೋರ್ಟ್ ರದ್ದು ಮಾಡಿರುವುದನ್ನು, ಮತ್ತು ಅವರ ಗೃಹಬಂಧನವನ್ನು ಕೊನೆಗೊಳಿಸಿರುವುದನ್ನು ಎಡಪಕ್ಷಗಳು ಸ್ವಾಗತಿಸಿವೆ. ಬಂಧನ ಅಸಮರ್ಥನೀಯ ಮತ್ತು ಸಂವಿಧಾನದ ಮೂಲ ಅಂಶಗಳಿಗೆ ಅನುಗುಣವಾಗಿಲ್ಲ ಎಂಬ ನ್ಯಾಯಾಲಯದ ವೀಕ್ಷಣೆಯ ಹಿನ್ನೆಲೆಯಲ್ಲಿ ಇದು ಬಂದಿದೆ. ಇದು ಆರೆಸ್ಸೆಸ್–ಬಿಜೆಪಿ ಈ ಐವರು ಕಾರ್ಯಕರ್ತರು "ನಗರ ನಕ್ಸಲ್" ಗಳು ಎಂಬ ಹುಸಿ ನೆವದ ಆಧಾರದಲ್ಲಿ ಆರಂಭಿಸಿರುವ ಸುಳ್ಳಿನ ಪ್ರಚಾರದ ಹೂರಣವನ್ನು ಬಯಲಿಗೆಳೆದಿದೆ ಎಂದು ಎಡಪಕ್ಷಗಳು ಹೇಳಿವೆ.

ಶಬರಿಮಲೆ ಪ್ರವೇಶ ತೀರ್ಪು

ಜನವಾದಿ ಮಹಿಳಾ ಸಂಘಟನೆ ಸ್ವಾಗತ

ಶಬರಿಮಲೆ ದೇವಸ್ಥಾನಕ್ಕೆ ಎಲ್ಲ ವಯಸ್ಸಿನ ಮಹಿಳೆಯರಿಗೆ ಪ್ರವೇಶಕ್ಕೆ ಅವಕಾಶ ನೀಡಿರುವ ಸುಪ್ರಿಂ ಕೋರ್ಟಿನ ತೀರ್ಪನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ) ಸ್ವಾಗತಿಸಿದೆ. ಇದಕ್ಕೆ ಮೊದಲು, ಶಬರಿಮಲೆ ದೇವಸ್ಥಾನದ ನಿಯಮ 10 ರಿಂದ 50 ವರ್ಷದ ವರೆಗಿನ ಮಹಿಳೆಯರಿಗೆ ದೇವಸ್ಥಾನ ಪ್ರವೇಶವನ್ನು ನಿಷಿದ್ಧಗೊಳಿಸಿತ್ತು. ಮುಟ್ಟಿನ ಸಮಯದಲ್ಲಿ ಮಹಿಳೆಯರು ಅಶುದ್ಧರಾಗಿರುತ್ತಾರೆ ಮತ್ತು ಇಂತಹ ಇತರ ನಂಬಿಕೆಗಳಿಂದಾಗಿ ಹೀಗೆ ಮಾಡಲಾಗಿತ್ತು.

ದೈಹಿಕ ಕಾರಣಗಳ ಆಧಾರದಲ್ಲಿ ಮಹಿಳೆಯರು ತಮ್ಮ ಪೂಜಾ ಹಕ್ಕುಗಳನ್ನು ಚಲಾಯಿಸದಂತೆ ಮಿತಿ ಹಾಕುವುದು ಅಸಂವೈಧಾನಿಕ ಮತ್ತು ಮಹಿಳೆಯರನ್ನು ಹೊರಗಿಡುವುದು ಅವರ ಘನತೆಗೆ ವಿರುದ್ಧವಾದದ್ದು ಎಂದು ನ್ಯಾಯಾಲಯ ಹೇಳಿದೆ. ಸಾಂಪ್ರದಾಯಿಕ ಆಚರಣೆಗಳು ಮತ್ತು ಹಳೆಯ ಧಾರ್ಮಿಕ ನಂಬಿಕೆಗಳಿಗಾಗಿ ಭಾರತೀಯ ಸಂವಿಧಾನವನ್ನು ಬುಡಮೇಲು ಮಾಡಲು ಸಾಧ್ಯವಿಲ್ಲ, ಸಂವಿಧಾನದ ಅಡಿಯಲ್ಲಿ ಎಲ್ಲ ಕ್ರಿಯೆಗಳನ್ನು ಸ್ವಾತಂತ್ರ್ಯ ಮತ್ತು ಸಮಾನತೆಯ ಒರೆಗಲ್ಲಲ್ಲಿ ಪರೀಕ್ಷಿಸಬೇಕು ಎಂದೂ ಈ ತೀರ್ಪು ಹೇಳಿದೆ. ಮುಖ್ಯ ನ್ಯಾಯಾಧೀಶರು ಕೂಡ ಮಹಿಳೆಯರಿಗೆ ದೇವಸ್ಥಾನ ಪ್ರವೇಶವನ್ನು ನಿಷಿದ್ಧಗೊಳಿಸುವುದು ಧಾರ್ಮಿಕ ಆಚರಣೆಗಳ ಒಂದು ಅನಿವಾರ್ಯ ಭಾಗ ಅಲ್ಲ ಎಂದು ಹೇಳಿರುವತ್ತ ಎಐಡಿಡಬ್ಲ್ಯುಎ ಗಮನ ಸೆಳೆದಿದೆ.

ಭಾರತದ ಸಂವಿಧಾನದ 25ನೇ ವಿಧಿಯ ಅಡಿಯಲ್ಲಿ ಮಹಿಳೆಯರಿಗೂ ಒಂದು ಸಾರ್ವಜನಿಕ ಸ್ಥಳದಲ್ಲಿ ಸಮಾನ ಪೂಜಾ ಹಕ್ಕು ಇದ್ದು, ಶಬರಿಮಲೆ ದೇವಸ್ಥಾನದ ಪ್ರವೇಶ ನಿಯಮಗಳು ಈ ಹಕ್ಕಿನ ಒಂದು ಸ್ಪಷ್ಟ ಉಲ್ಲಂಘನೆ ಎಂದು ಸುಪ್ರಿಂ ಕೋರ್ಟ್ ಸರಿಯಾಗಿಯೇ ಹೇಳಿದೆ ಎಂದು ಎಐಡಿಡಬ್ಲ್ಯುಎ ಅಭಿಪ್ರಾಯ ಪಟ್ಟಿದೆ.

ಮಹಿಳೆಯರ ಸಮಾನ ಹಕ್ಕುಗಳನ್ನು ನಿರಾಕರಿಸಲು ಧರ್ಮವನ್ನು ಒಂದು ಕತ್ತಿಯಾಗಿ ಬಳಸಲು ಸಾಧ್ಯವಿಲ್ಲೆಂಬುದನ್ನು ಒಪ್ಪಿರುವ ಎಐಡಿಡಬ್ಲ್ಯುಎ ಎಲ್ಲ ಪೂಜಾಸ್ಥಳಗಳಲ್ಲಿ ಧಾರ್ಮಿಕ ಆಚರಣೆಗಳಿಗೆ ಮಹಿಳೆಯರಿಗೆ ಸಮಾನ ಹಕ್ಕುಗಳಿರಬೇಕು ಎಂದು ಪ್ರಚಾರಾಂದೋಲನ ನಡೆಸಿಕೊಂಡು ಬಂದಿದೆ. ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನಿರಾಕರಿಸಲು ಮತ್ತು ಅವರನ್ನು ಅಡಿಯಾಳುಗಳಾಗಿ ಮಾಡಲು ಸಂಪ್ರದಾಯ, ಪರಂಪರೆಗಳ ಬಳಕೆ ಮುಂದುವರೆದಿದೆ ಎಂದು ಖಂಡಿಸಿರುವ ಎಐಡಿಡಬ್ಲ್ಯುಎ ಸುಪ್ರಿಂ ಕೋರ್ಟಿನ ಬಹುಮತದ ತೀರ್ಪು ಹಳೆಯ ಕಾಲದ ನಂಬಿಕೆಗಳು, ಆಚರಣೆಗಳು, ಸಂಪ್ರದಾಯಗಳಿಗಿಂತ ಸಂವಿಧಾನದಲ್ಲಿ ಭರವಸೆ ನೀಡಿರುವ ಮೂಲಭೂತ ಹಕ್ಕುಗಳಿಗೇ ಆದ್ಯತೆ ಎಂಬುದನ್ನು ಮಾನ್ಯ ಮಾಡಿರುವುದು ಸಮಾನತೆಯ ಕಾನೂನು ಹೋರಾಟಕ್ಕೆ ಬಹಳಷ್ಟು ನೆರವಾಗಲಿದೆ ಎಂದು ಹೇಳಿದೆ.

"ಸ್ವತಂತ್ರ ಭಾರತದ ಅತ್ಯಂತ ರೈತ–ವಿರೋಧಿ ಸರಕಾರದ ನಿಜಮುಖವನ್ನು ಬಯಲಿಗೆಳೆಯಿರಿ"

ಪ್ರತಿಭಟಿಸುತ್ತಿದ್ದ ರೈತರ ಮೇಲೆ ದಿಲ್ಲಿಯ ಗಡಿಯಲ್ಲಿ ಪೋಲೀಸ್ ದಮನ ಕ್ರಮಗಳಿಗೆ ಎಐಕೆಎಸ್ ಖಂಡನೆ

ಪ್ರತಿಭಟಿಸುತ್ತಿದ್ದ ರೈತರ ಮೇಲೆ ದಿಲ್ಲಿ ಪ್ರವೇಶಿಸುವ ಗಡಿಯಲ್ಲಿ ಬರ್ಬರ ಪೋಲೀಸ್ ಕಾರ್ಯಾಚರಣೆಯನ್ನು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಖಂಡಿಸಿದೆ. ಭಾರತೀಯ ಕಿಸಾನ್ ಯೂನಿಯನ್(ಬಿಕೆಯು) ಸಂಘಟಿಸಿದ್ದ ರೈತರು ತಮ್ಮ ನ್ಯಾಜ ಬೇಡಿಕೆಗಳನ್ನು ಮುಂದಿಟ್ಟು 23 ಸಪ್ಟಂಬರ್‌ನಿಂದ ಹರಿದ್ವಾರದಿಂದ ಕಿಸಾನ್ ಕ್ರಾಂತಿ ಯಾತ್ರಾದಲ್ಲಿ ಬರುತ್ತಿದ್ದು ಅಕ್ಟೋಬರ್ 2 ರಂದು ಅವರು ದಿಲ್ಲಿಯ ಕಿಸಾನ್ ಘಾಟ್ ತಲುಪುವವರಿದ್ದರು. ಅವರನ್ನು ದಿಲ್ಲಿ ರಾಜಧಾನಿ ಪ್ರದೇಶವನ್ನು ಪ್ರವೇಶಿಸಲು ಬಿಡದ ನರೇಂದ್ರ ಮೋದಿ ನೇತೃತ್ವದ ಸಂವೇದನಾ ಶೂನ್ಯ ಬಿಜೆಪಿ ಸರಕಾರ ಸೆಕ್ಷನ್ 144 ಹಾಕಿ ಘಾಝೀಪುರ ಗಡಿಯಲ್ಲೇ(ಉತ್ತರಪ್ರದೇಶ–ದಿಲ್ಲಿ ಗಡಿ) ತಡೆದು ನಿಲ್ಲಿಸಲು ಬಲಪ್ರಯೋಗ ನಡೆಸಿತು. ಪೋಲೀಸರು ಲಾಠೀ ಚಾರ್ಜ್, ಅಶ್ರುವಾಯು, ಜಲಫಿರಂಗಿಗಳನ್ನು ರೈತರ ಮೇಲೆ ಪ್ರಯೋಗಿಸಿದರು.

ದಿಲ್ಲಿ ದೇಶದ ರೈತರಿಗೂ ಸೇರಿದೆ. ಅವರನ್ನು ರಾಷ್ಟ್ರೀಯ ರಾಜಧಾನಿಗೆ ಬಂದು ತಮ್ಮ ದೂರುಗಳ ಬಗ್ಗೆ ದನಿಯೆತ್ತದಂತೆ ತಡೆದಿರುವುದು ಅತ್ಯಂತ ಪ್ರಜಾಪ್ರಭುತ್ವ–ವಿರೋಧಿ ವರ್ತನೆ ಎಂದು ಎಐಕೆಎಸ್ ಹೇಳಿದೆ.

ಒಂದೆಡೆಯಲ್ಲಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ಪ್ರಚಾರದ ಮೇಲೆ ಕೋಟ್ಯಂತರ ರೂಪಾಯಿಗಳನ್ನು ಸುರಿದು ತಾನು ರೈತ–ಪರ ಎಂದು ಬಿಂಬಿಸಲು ಪ್ರಯತ್ನಿಸುತ್ತಿದೆ. ಇನ್ನೊಂದೆಡೆಯಲ್ಲಿ ರೈತರ ಪ್ರತಿಭಟನೆಗಳನ್ನು, ಅವರ ನ್ಯಾಜ ಬೇಡಿಕೆಗಳನ್ನು ಅತ್ಯಂತ ಸಂವೇದನಾಶೂನ್ಯತೆಯಿಂದ ಬದಿಗೊತ್ತುತ್ತಿದೆ.ಬಿಜೆಪಿ ನೇತೃತ್ವದ ರಾಜ್ಯ ಸರಕಾರಗಳೂ ರೈತರ ಪ್ರತಿಭಟನೆಗಳನ್ನು ಅಮಾನುಷ ರೀತಿಯಲ್ಲಿ ದಮನ ಮಾಡುತ್ತಿವೆ. ಮಧ್ಯಪ್ರದೇಶದ ಬಿಜೆಪಿ ಸರಕಾರ 2017ರಲ್ಲಿ ಮಂದಸೌರ್‌ನಲ್ಲಿ ಪೋಲೀಸ್ ಗೋಳೀಬಾರ್ ನಡೆಸಿ 7 ರೈತರನ್ನು ಕೊಂದಿತು. ಅದರ ಮೊದಲು ಅಸ್ಸಾಂ ಮತ್ತು ಝಾರ್ಖಂಡ್‌ನಲ್ಲಿ ಪೋಲೀಸ್ ಗೋಳೀಬಾರ್‌ಗಳಲ್ಲಿ ರೈತರನ್ನು ಸಾಯಿಸಲಾಗಿತ್ತು. ಇವೆರಡೂ ಕೂಡ ಬಿಜೆಪಿ ಆಳ್ವಿಕೆಯಲ್ಲಿವೆ. **ಬರ್ಬರ ಬಲಪ್ರಯೋಗ ಮತ್ತು ದಮನದಿಂದ ರೈತರ ಪ್ರತಿಭಟನೆಗಳನ್ನು ಅಡಗಿಸಲು ಸಾಧ್ಯ ಎಂದು ಬಿಜೆಪಿ ಸರಕಾರ ಭಾವಿಸಿದ್ದರೆ ಅದು ತಪ್ಪು ಮಾಡುತ್ತಿದೆ ಎಂದು ಎಐಕೆಎಸ್ ಎಚ್ಚರಿಸಿದೆ.**

ಲಕ್ಷಾಂತರ ರೈತರು ಮತ್ತು ಕಾರ್ಮಿಕರು ಸಪ್ಟಂಬರ್ 5 ರಂದು ದಿಲ್ಲಿಯಲ್ಲಿ ಎಐಕೆಎಸ್, ಸಿಐಟಿಯು ಮತ್ತು ಎಐಎಡಬ್ಲ್ಯುಯು ಕರೆಗೆ ಓಗೊಟ್ಟು ರೈತ–ಕಾರ್ಮಿಕ ಸಂಘರ್ಷ ರ್‍ಯಾಲಿಯಲ್ಲಿ ನೆರೆದಿದ್ದಾರೆ. ನವಂಬರ್ 28ರಿಂದ 200ಕ್ಕೂ ಹೆಚ್ಚು ರೈತ ಸಂಘಟನೆಗಳ ಪ್ರಶ್ನಾಧರಿತ ಐಕ್ಯ ವೇದಿಕೆಯಾದ ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿಯ ಬಾವುಟದ ಅಡಿಯಲ್ಲಿ ದಿಲ್ಲಿಯ ಮೂರು ಮೂಲೆಗಳಿಂದ ಸಂಸತ್ತಿನತ್ತ ಕಿಸಾನ್ ಮುಕ್ತಿ ಮೋರ್ಚಾ ನಡೆಸಲಿದ್ದಾರೆ ಎಂದು ಎಐಕೆಎಸ್ ಹೇಳಿದೆ.

ಬಿಜೆಪಿ ಸರಕಾರದ ಜನ–ವಿರೋಧಿ ಧೋರಣೆಗಳಿಂದ, ಬೆಲೆಯೇರಿಕೆ, ನೋಟುರದ್ಧತಿ, ಜಿಎಸ್‌ಟಿ ಮತ್ತು ಭ್ರಷ್ಟಾಚಾರಗಳಿಂದ ಸಮಾಜದ ಎಲ್ಲ ಜನವಿಭಾಗಗಳ ಮೇಲೂ ಪ್ರತಿಕೂಲ ಹೊಡೆತಗಳು ಬಿದ್ದಿವೆ. ದೇಶ ರೈತರ ಹೋರಾಟಗಳಿಗೆ ಬೆಂಬಲ ನೀಡುತ್ತದೆ, ಅವರೊಂದಿಗೆ ಸೌಹಾರ್ದ ವ್ಯಕ್ತಪಡಿಸುತ್ತದೆ ಎಂದಿರುವ ಎಐಕೆಎಸ್ ಬಿಜೆಪಿ ಸರಕಾರ ತನ್ನ ರೈತ–ವಿರೋಧಿ, ಜನ–ವಿರೋಧಿ ಧೋರಣೆಗಳನ್ನು ಮುಂದುವರೆಸಿದ್ದೇ ಆದರೆ, ಮುಂಬರುವ ದಿನಗಳಲ್ಲಿ ಪ್ರತಿಭಟನೆಗಳನ್ನು ತೀವ್ರಗೊಳಿಸುತ್ತೇವೆ ಮತ್ತು ಅವರ ಸೋಲಿಗೆ ಒಂದು ವಾತಾವರಣವನ್ನು ನಿರ್ಮಿಸುತ್ತೇವೆ ಎಂದು ಎಚ್ಚರಿಸಿದೆ.

ತ್ರಿಪುರಾ ಬಿಜೆಪಿ ಸರಕಾರದಿಂದ ದಿನಪತ್ರಿಕೆಯ ದಮನ – ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ತ್ರಿಪುರಾದ ಬಿಜೆಪಿ ರಾಜ್ಯ ಸರಕಾರ ರಾಜ್ಯದ ಪ್ರಮುಖ, ಪ್ರಗತಿಶೀಲ ಪತ್ರಿಕೆ 'ದೈನಿಕ ದೇಶೇರ್ ಕಥಾ'ದ ನೋಂದಾವಣಿ ರದ್ದು ಮಾಡಿದೆ. ಇದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. 'ದೇಶೇರ್ ಕಥಾ' ತ್ರಿಪುರಾದಲ್ಲಿ ಕಳೆದ 40 ವರ್ಷಗಳಿಂದ ಪ್ರಕಟವಾಗುತ್ತಿರುವ, ರಾಜ್ಯದಲ್ಲಿ ಎರಡನೇ ಅತಿ ಹೆಚ್ಚು ಪ್ರಸಾರ ಹೊಂದಿರುವ ದಿನಪತ್ರಿಕೆ.

ಪಶ್ಚಿಮ ತ್ರಿಪುರಾ ಜಿಲ್ಲಾ ಮ್ಯಾಜಿಸ್ಟ್ರೇಟ್ ಕ್ಷುಲ್ಲಕ ಮತ್ತು ಸಂದೇಹಾಸ್ಪದ ಕಾರಣಗಳನ್ನು ಕೊಟ್ಟು ಈ ಪತ್ರಿಕೆಯ ನೋಂದಾವಣಿಯನ್ನು ರದ್ದು ಮಾಡಿದ್ದಾರೆ. ಅದರಿಂದಾಗಿ ಭಾರತದ ಪತ್ರಿಕಾ ರಿಜಿಸ್ಟ್ರಾರ್ (ಆರ್‌ಎನ್‌ಐ) ಕೂಡ ಪ್ರತಿಕೆಯ ಪ್ರಮಾಣ ಪತ್ರವನ್ನು ಹಿಂದಕ್ಕೆ ಪಡೆದಿದ್ದಾರೆ. ಇದು ಪತ್ರಿಕಾ ಸ್ವಾತಂತ್ರ್ಯದ ಮೇಲೆ ಒಂದು ನಗ್ನ ಹಲ್ಲೆ, ಅಕ್ಟೋಬರ್ 2, ಗಾಂಧೀಜಯಂತಿಯಂದು ಪತ್ರಿಕೆಯ ಪ್ರಕಟಣೆಯನ್ನು ನಿಲ್ಲಿಸಿರುವುದು ಅದನ್ನೊಂದು ಬೇಸರದ ದಿನವಾಗಿ ಮಾಡಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಇದು ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಮೂಲಭೂತ ಹಕ್ಕುಗಳ ಮೇಲೆ ಒಂದು ಗಂಭೀರ ಹಲ್ಲೆ ಎಂದಿದೆ. ಎಲ್ಲ ಪ್ರಜಾಪ್ರಭುತ್ವವಾದಿ ಜನವಿಭಾಗಗಳು ಇದನ್ನು ಪ್ರತಿಭಟಿಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಮನವಿ ಮಾಡಿದೆ. (ವಿವರಗಳಿಗೆ ಪುಟ 14 ನೋಡಿ)

ಎಡಿಟರ್ಸ್ ಗಿಲ್ಡ್ ಖಂಡನೆ

ಮಾಧ್ಯಮ ರಂಗದ ಹಿರಿಯ ಸಂಪಾದಕರ ನೇತೃತ್ವದ ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ ಆರ್‌ಎನ್‌ಐನ ಕ್ರಮವನ್ನು ಖಂಡಿಸಿದೆ. ಒಂದು ಸಣ್ಣ ಕಾರಣಕ್ಕಾಗಿ ನೋಂದಾವಣಿಯನ್ನೇ ರದ್ದು ಮಾಡುವುದು ವಿಪರೀತ ಕ್ರಮವಷ್ಟೇ ಅಲ್ಲ, ಮಾಧ್ಯಮ ಸ್ವಾತಂತ್ರ್ಯವನ್ನು ದಮನ ಮಾಡುವ ಕರಾಳ ಕ್ರಮ ಎಂದಿರುವ ಅದು ಇದರ ಹಿಂದೆ ರಾಜಕೀಯ ದುರುದ್ದೇಶ ಇದೆಯೆ ಎಂಬ ಬಗ್ಗೆ ಆಮೂಲಾಗ್ರ ತನಿಖೆ ನಡೆಸಬೇಕು ಎಂದು ಆಗ್ರಹಿಸಿದೆ.

ಭೀಮಾ–ಕೊರೆಗಾಂವ್ ಹಿಂಸಾಚಾರ: ನ್ಯಾಯ ಒದಗಿಸಿ –ಸಿಪಿಐ(ಎಂ) ಪೊಲಿಟ್‌ಬ್ಯುರೊ

ಭೀಮಾ–ಕೊರೆಗಾಂವ್ ಘಟನೆಗಳಲ್ಲಿ ದಲಿತರ ಮೇಲೆ ಹಿಂಸಾಚಾರ ಹರಿಯು ಬಿಟ್ಟವರನ್ನು ಶಿಕ್ಷಿಸಬೇಕು ಎಂಬ ತನ್ನ ಆಗ್ರಹವನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಪುನರುಚ್ಚರಿಸಿದೆ.

ಇದರ ಬದಲು, ಮಹಾರಾಷ್ಟ್ರದ ಬಿಜೆಪಿ–ಶಿವಸೇನೆ ಸರಕಾರ ಬಲಪಂಥೀಯ ಕಾರ್ಯಕರ್ತ ಸಂಭಾಜಿ ಭಿಡೆಯ ಮೇಲಿನ ಕನಿಷ್ಟ ಆರು ಗಲಭೆ ಮೊಕದ್ದಮೆಗಳನ್ನು ಹಿಂತೆಗೆದುಕೊಂಡಿದೆ ಎಂದು ವರದಿಯಾಗಿದೆ. ಬಿಜೆಪಿ ರಾಜ್ಯಸರಕಾರ ನೂರಾರು ಬಿಜೆಪಿ–ಶಿವಸೇನಾ ಕಾರ್ಯಕರ್ತರ ಮೇಲಿನ ಕೇಸುಗಳನ್ನೂ ಹಿಂತೆಗೆದುಕೊಂಡಿದೆ. ಬಿಜೆಪಿ ಸರಕಾರದ ನಡೆ ಜನವರಿ 1ರಂದು ನಡೆದ ಹಿಂಸಾಚಾರವನ್ನು ಸಂಯೋಜಿಸಿದ್ದು ಸಂಭಾಜಿ ಭಿಡೆ ಮತ್ತು ಮಿಲಿಂದ್ ಏಕ್‌ಬೋಟೆ ಎಂಬ ಪುಣೆ ಪೋಲೀಸ್ ನೇಮಿಸಿದ ಹತ್ತು ಸದಸ್ಯರ ಸಮಿತಿಯ ವರದಿಗೆ ಸಂಪೂರ್ಣ ವಿರುದ್ಧವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. **ಇದಕ್ಕೆ ತೀರಾ ವಿರುದ್ಧವಾಗಿ, ದಲಿತ ಕಾರ್ಯಕರ್ತರ ಮೇಲೆ ಹಾಕಿರುವ ಕೇಸುಗಳು ಹಾಗೆಯೇ ಇವೆ. ಅವರಿಗೆ ಅನಗತ್ಯ ಕಿರುಕುಳ ಮುಂದುವರೆಯುತ್ತಿದೆ. ಇದು ಬಿಜೆಪಿಯ ದಲಿತ–ವಿರೋಧಿ ನಿಲುವನ್ನು ಸಂಪೂರ್ಣವಾಗಿ ಬಯಲಿಗೆಳೆದಿದೆ, ಇದು ಖಂಡನಾರ್ಹ ಎಂದು ಪೊಲಿಟ್‌ಬ್ಯುರೊ ಹೇಳಿದೆ.**

ಭೀಮಾ–ಕೊರೆಗಾಂವ್ ಹಿಂಸಾಚಾರದ ಅಪರಾಧಿಗಳ ಮತ್ತು ದೇಶದ ಹಲವು ಭಾಗಗಳಲ್ಲಿ ದಲಿತ–ವಿರೋಧಿ ಗಲಭೆಗಳನ್ನು ಸೃಷ್ಟಿಸಿರುವ ಆರೋಪಿಗಳ ವಿರುದ್ಧ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅವರನ್ನು ದೋಷಮುಕ್ತರಾಗಿಸಲು ಸಾಧ್ಯವಿಲ್ಲ ಎಂದು ಹೇಳಿದೆ.

ಸಂಪಾದಕೀಯ

ಒಳ ಮೀಸಲಾತಿ ಜಾರಿಯಾಗಬೇಕು! ದಲಿತರ ಐಕ್ಯತೆ ಕಾಪಾಡಬೇಕು!!

ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ವರದಿ ಜಾರಿ ಸಂಬಂಧ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವಂತೆ ಆಗ್ರಹಿಸಿ ರಾಜ್ಯ ಮಾದಿಗ ಸಂಘಟನೆಗಳ ಮಹಾಸಭಾವು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅಕ್ಟೋಬರ್ 3 ರಂದು 'ಮಾದಿಗರ ಮಹಾಯುದ್ಧ' ಹೆಸರಿನಲ್ಲಿ ಬೃಹತ್ ಸಮಾವೇಶ ನಡೆಸಿತು. ವಿವಿಧ ಜಿಲ್ಲೆಗಳಿಂದ ಪಾಲ್ಗೊಂಡಿದ್ದ ಕಾರ್ಯಕರ್ತರು, 'ಕೇಂದ್ರ ಹಾಗೂ ರಾಜ್ಯದ ಜನಪ್ರತಿನಿಧಿಗಳೇ, ಮಾದಿಗ ಸಮುದಾಯವನ್ನು ನಿರ್ಲಕ್ಷಿಸಬೇಡಿ. 2019ರ ಲೋಕಸಭೆ ಹಾಗೂ ರಾಜ್ಯದಲ್ಲಿ ನಡೆಯಲಿರುವ ಇತರೆ ಚುನಾವಣೆಗಳಲ್ಲಿ ಅತಂತ್ರ ಫಲಿತಾಂಶ ಸೃಷ್ಟಿಸುವ ತಾಕತ್ತು ನಮ್ಮ ಸಮುದಾಯಕ್ಕೂ ಇದೆ ಎಂಬುದನ್ನು ನೆನಪಿಟ್ಟುಕೊಳ್ಳಿ' ಎಂದು ಎಚ್ಚರಿಸಿದರು. 'ಅಕ್ಟೋಬರ್ 12ರಂದು ಪ್ರತಿ ಜಿಲ್ಲೆಗಳಲ್ಲೂ ಜಿಲ್ಲಾ ಉಸ್ತುವಾರಿ ಸಚಿವರ ಮನೆಗಳ ಮುಂದೆ ಹಾಗೂ ಅಕ್ಟೋಬರ್ 17ರಂದು ಮುಖ್ಯಮಂತ್ರಿ ಕುಮಾರಸ್ವಾಮಿ ಅವರ ಮನೆ ಮುಂದೆ ಧರಣಿ ಕೂರುತ್ತೇವೆ. ಅಷ್ಟಕ್ಕೂ ಬಗ್ಗದಿದ್ದರೆ ಅಕ್ಟೋಬರ್ 22ರಂದು ಭಾರತ್ ಬಂದ್ ಮಾಡಿ, ಮರುದಿನದಿಂದಲೇ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸುತ್ತೇವೆ' ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು ಎಂದು ವರದಿಯಾಗಿದೆ.

ಬೆಂಗಳೂರಿನ ಅಂಬೇಡ್ಕರ್ ಭವನದಲ್ಲಿ ಅಕ್ಟೋಬರ್ 4ರಂದು ಆಯೋಜನೆಗೊಂಡಿದ್ದ ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮದ ಉದ್ಘಾಟನೆ ಕುರಿತ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ್ದ ವಿವಿಧ ಜಿಲ್ಲೆಯ ಪ್ರತಿನಿಧಿಗಳು ನಿಗಮದ ಸ್ಥಾಪನೆಗೆ ವಿರೋಧ ವ್ಯಕ್ತಪಡಿಸಿದರು. 'ನಿಗಮದಿಂದ ನಮ್ಮ ಜನಾಂಗದ ಅಭಿವೃದ್ಧಿ ಆಗುವುದಿಲ್ಲ. ಕೆಲವರ ಹಿತಾಸಕ್ತಿಗಾಗಿ ಇದನ್ನು ರಚಿಸಲಾಗಿದೆ. ಸದಾಶಿವ ಆಯೋಗದ ವರದಿಯನ್ನು ಜಾರಿಗೆ ತರಲು ಹೋರಾಡಿ. ಜನಾಂಗದಲ್ಲಿ ಇಬ್ಬರಿಗೆ ಸಚಿವ ಸ್ಥಾನ ಕೊಡಲು ಬೇಡಿಕೆ ಇಡಿ' ಎಂದು ಆಗ್ರಹಿಸಿ ಕೆಲವು ಮುಖಂಡರು ಸಭೆಯನ್ನು ಬಿಟ್ಟು ಹೊರನಡೆದರು. ಭವನದ ಹಿಂದೆ ಹೋಗಿ ನಿಂತ ಸಮುದಾಯದ ಮುಖಂಡರು ಘೋಷಣೆ ಕೂಗಲು ಆರಂಭಿಸಿದರು. 'ಸಮ್ಮಿಶ್ರ ಸರ್ಕಾರಕ್ಕೆ ನಾಚಿಕೆ ಆಗಬೇಕು, ನಮ್ಮ ಜನಾಂಗಕ್ಕೆ ಸಚಿವ ಸ್ಥಾನ ಕೊಟ್ಟಿಲ್ಲ. ಸದಾಶಿವ ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತರಲು ಸಾಧ್ಯವಾಗಿಲ್ಲ' ಎಂದು ಕೂಗು ಹಾಕಿದರು.

ಇತ್ತೀಚಿನ ಚಳುವಳಿ ಆರಂಭದ ಸಂದರ್ಭದಲ್ಲಿ ಮಾದಿಗ ಸಂಘಟನೆ ವತಿಯಿಂದ ಪತ್ರಿಕೆಗಳಿಗೆ ನೀಡಲಾದ ಪೂರ್ಣ–ಪುಟದ ಜಾಹೀರಾತಿನಲ್ಲಿ 'ಬ್ರಾಹ್ಮಣ–ವಾದಿ ಮಾದಿಗ–ವಿರೋಧಿ ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಪಕ್ಷಗಳಿಗೆ ಚಾಲೆಂಜ್' ಎಂದು ಹೇಳಲಾಗಿದ್ದು, ಈ ಮೂರು ಇತ್ತೀಚಿನ ಘಟನೆಗಳಿಂದ ಮಾದಿಗ ಸಮುದಾಯ ತಾಳ್ಮೆ ಕಳೆದುಕೊಳ್ಳುತ್ತಿರುವುದು ಹಾಗೂ ಮೂರೂ ಪಕ್ಷಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗಿರುವುದು ಕಂಡು ಬರುತ್ತದೆ. ಈ ಚಳುವಳಿ ಸದ್ಯಕ್ಕೆ ಆಗಲಿರುವ ಸಂಪುಟ ವಿಸ್ತರಣೆ ಮತ್ತು ಮುಂಬರುವ ಲೋಕಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ ತೀವ್ರತೆ ಪಡೆದುಕೊಂಡಿದೆ ಎಂಬುದೂ ಸ್ಪಷ್ಟ.

ಈ ಆಕ್ರೋಶಕ್ಕೆ ಸಕಾರಣಗಳೂ ಇವೆ. ಪರಿಶಿಷ್ಟ ಜಾತಿ ಸಮುದಾಯಗಳಿಗೆ ಶಿಕ್ಷಣ ಉದ್ಯೋಗಗಳಲ್ಲಿ ಇರುವ ಮೀಸಲಾತಿಯ ಸಿಂಹಪಾಲು ಬಲಗೈ (ಹೊಲೆಯ) ಎಂದು ಕರೆಯಲಾಗುವ ಕೆಲವು ಜಾತಿಗಳ ಹಾಗೂ ಕೆಲವು (ಲಂಬಾಣಿ, ಬೋವಿ ಇತ್ಯಾದಿ) ಸ್ಪೃಶ್ಯ ಜಾತಿಗಳ ಪಾಲಾಗುತ್ತಿದೆ. ಮಾದಿಗ (ಎಡಗೈ) ಸಮುದಾಯದ ಮತ್ತು ಇತರ ಶೈಕ್ಷಣಿಕವಾಗಿಯೂ ಆರ್ಥಿಕವಾಗಿಯೂ ದುರ್ಬಲವಾಗಿರುವ ಜಾತಿಗಳಿಗೆ ಮೀಸಲಾತಿಯ ಪ್ರಯೋಜನ ಅತ್ಯಂತ ಕಡಿಮೆ ಪ್ರಮಾಣದಲ್ಲಿ ದಕ್ಕಿದೆ. ಇದು ರಾಜಕೀಯ ಪ್ರಾತಿನಿಧ್ಯದ ಬಗೆಗೂ ನಿಜ. ಆದ್ದರಿಂದ ಪರಿಶಿಷ್ಟ ಸಮುದಾಯಕ್ಕೆ ಸೇರಿದ ಉಪಜಾತಿಗಳಿಗೆ ಒಳಮೀಸಲಾತಿ, ಸಾಮಾಜಿಕ ನ್ಯಾಯದ ಅರ್ಥಪೂರ್ಣ ಜಾರಿಯ ಪರವಾಗಿರುವ ಎಲ್ಲರೂ ತಾತ್ವಿಕವಾಗಿ ಒಪ್ಪಬೇಕಾದ ವಿಷಯ.

ಸಂವಿಧಾನದ ಪ್ರಕಾರ ಪರಿಶಿಷ್ಟ ಜಾತಿಗಳಿಗೆ ಈಗ ನೀಡಲಾಗುತ್ತಿರುವ ಮೀಸಲಾತಿಯನ್ನು ವಿವಿಧ ಪರಿಶಿಷ್ಟ ಉಪಜಾತಿಗಳ ನಡುವೆ ಹೇಗೆ ಮರುಹಂಚಿಕೆ ಮಾಡಬಹುದು ಎಂಬುದನ್ನು ಸರಕಾರಕ್ಕೆ ಶಿಫಾರಸು ಮಾಡಲು 2005ರಲ್ಲಿ ನ್ಯಾಯಮೂರ್ತಿ ಸದಾಶಿವ ಆಯೋಗ ರಚನೆಯಾಗಿತ್ತು. 7 ವರ್ಷಗಳ ನಂತರ 2012ರಲ್ಲಿ ಆಯೋಗ ಸರಕಾರಕ್ಕೆ ವರದಿ ಸಲ್ಲಿಸಿತು. ಒಳಮೀಸಲಾತಿ ಜಾರಿಮಾಡುವ ಅಧಿಕಾರ ರಾಜ್ಯ ಸರಕಾರಕ್ಕೆ ಇಲ್ಲ. ಒಳಮೀಸಲಾತಿ ವರ್ಗೀಕರಣ ಮಾಡುವಂತೆ ಕೇಂದ್ರ ಸರಕಾರಕ್ಕೆ ಪಾರ್ಲಿಮೆಂಟಿಗೆ ಶಿಫಾರಸು ಮಾಡಬೇಕಾಗುತ್ತದೆ. ಇದಕ್ಕಾಗಿ ರಾಜ್ಯ ಸರಕಾರ ಅದನ್ನು ಅಂಗೀಕರಿಸಿ ವರದಿಯನ್ನು ಸದನದಲ್ಲಿ ಮಂಡಿಸಬೇಕು. ಚರ್ಚೆಯಾಗಿ ಅದು ಸದನದಲ್ಲಿ ಅಂಗೀಕಾರವಾಗಬೇಕು. ಇದುವರೆಗೆ ಈ ಅವಧಿಯಲ್ಲಿ ಆಳಿದ ಮೂರೂ ಪಕ್ಷಗಳ – ಕಾಂಗ್ರೆಸ್, ಜೆಡಿ(ಎಸ್), ಬಿಜೆಪಿ – ಏಕ–ಪಕ್ಷೀಯ ಅಥವಾ ಸಮ್ಮಿಶ್ರ ಸರಕಾರಗಳು ಈ ಮೊದಲ ಹೆಜ್ಜೆಯನ್ನೂ ಇಟ್ಟಿಲ್ಲ. ವರದಿಯನ್ನು ಗಂಭೀರವಾಗಿ ಅಧ್ಯಯನ ಮಾಡೂ ಇಲ್ಲ. ತಕ್ಕ ತಿದ್ದುಪಡಿಗಳೊಂದಿಗೆ ಇದುವರೆಗೂ ಸದನದಲ್ಲಿ ಮಂಡಿಸಿಯೂ ಇಲ್ಲ. ವರದಿಯ ಕೆಲವು ಅಂಶಗಳು ಸೋರಿಕೆಯಾಗಿ ಚರ್ಚೆಯಾಗುತ್ತಿವೆ ಅಷ್ಟೇ.

ನ್ಯಾ. ಸದಾಶಿವ ಆಯೋಗದ ವರದಿಯಲ್ಲಿ ಏನಿದೆ ಎನ್ನುವ ಬಗ್ಗೆ ಅಧಿಕೃತ ವರದಿ ಇನ್ನೂ ಪ್ರಕಟವಾಗಿಲ್ಲ. ಸಿಕ್ಕಿರುವ ಮಾಹಿತಿಗಳ ಪ್ರಕಾರ ಆಯೋಗ ಪರಿಶಿಷ್ಟ ಜಾತಿಗಳನ್ನು 1.ಎಡಗೈ(ಮಾದಿಗ ಜನಾಂಗ), 2.. ಬಲಗೈ(ಹೊಲೆಯ ಜನಾಂಗ), 3. ಇತರೆ ಜಾತಿ (ಕೊರಮ, ಕೊರಚ ಇತ್ಯಾದಿ) 4. ಸ್ಪೃಶ್ಯ ಜಾತಿಗಳು (ಲಂಬಾಣಿ, ಭೋವಿ, ಇತ್ಯಾದಿ) ಎಂಬ ನಾಲ್ಕು ಉಪ ವಿಭಾಗಗಳಾಗಿ ವಿಂಗಡಿಸಿದೆ. ಮೀಸಲಾತಿಯನ್ನು ಈ ವಿಭಾಗಗಳ ನಡುವೆ ಹಂಚಿಕೆ ಮಾಡಲಾಗಿದೆ. ಶೇ. 33.47 ರಷ್ಟಿರುವ ಎಡಗೈ ಜನಾಂಗಕ್ಕೆ ಶೇಕಡಾ 6, ಶೇ.32ರಷ್ಟಿರುವ ಬಲಗೈ ಜನಾಂಗಕ್ಕೆ ಶೇ.5, ಶೇ.4.65 ರಷ್ಟಿರುವ ಇತರೆ ಜಾತಿಗಳಿಗೆ ಶೇ.3 ಮತ್ತು ಶೇ. 23.4 ರಷ್ಟಿರುವ ಸ್ಪೃಶ್ಯ ಜಾತಿಗಳಿಗೆ ಶೇ.1 ರಷ್ಟು ಮೀಸಲಾತಿಯನ್ನು ಹಂಚಿಕೆ ಮಾಡಬೇಕೆಂದು ಆಯೋಗದ ಶಿಫಾರಸ್ಸು ಎನ್ನಲಾಗಿದೆ.

ಒಳಮೀಸಲಾತಿಯನ್ನು ಕಲ್ಪಿಸುವಾಗ ಉಪಜಾತಿಗಳ ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಅದರೆ ಜನಸಂಖ್ಯೆಯನ್ನು ನಿಖರವಾಗಿ ಕಂಡುಕೊಳ್ಳಲು ಸರಿಯಾದ ವಿಧಾನವನ್ನು ಅನುಸರಿಸ ಬೇಕಾಗುತ್ತದೆ. ಜನಸಂಖ್ಯೆಯೊಂದನ್ನೇ ಮಾನದಂಡವಾಗಿ ಪರಿಗಣಿಸಲಾಗದು. ಪ್ರತಿಯೊಂದು ಉಪಜಾತಿಯ ಜನಗಳ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಹಿಂದುಳಿಯುವಿಕೆಯನ್ನು ವೈಜ್ಞಾನಿಕವಾಗಿ ಪರಿಗಣಿಸಿ ಒಳಮೀಸಲಾತಿಯ ಮರುವಿಂಗಡನೆ ಮಾಡಬೇಕಾಗಿದೆ. ಇಲ್ಲಿ ಬಳಸಲಾಗುವ ಅಂಕೆ–ಸಂಖ್ಯೆಗಳ ನಿಖರತೆಯ ಸಮಸ್ಯೆಯೂ ಬರುವ ಸಾಧ್ಯತೆಯೂ ಇದೆ.

ಸೋರಿಕೆಯಾಗಿರುವ ನ್ಯಾ. ಸದಾಶಿವ ಆಯೋಗದ ವರದಿಯ ಅಂಶಗಳ ಆಧಾರದ ಮೇಲೆ ಅದಕ್ಕೆ ಪರ–ವಿರೋಧ ಚರ್ಚೆಗಳಾಗಿವೆ. ಮಾದಿಗ ಸಮುದಾಯ ಮತ್ತು ಅದರ ಪ್ರತಿನಿಧಿಗಳು ಈ ವರದಿ ಮೇಲೆ ಕಾಣಿಸಲಾದ ಎಲ್ಲಾ ಅಂಶಗಳನ್ನು ಸಮರ್ಥವಾಗಿ ನಿಭಾಯಿಸಿ ವೈಜ್ಞಾನಿಕ ವರದಿ ಕೊಟ್ಟಿದೆ. ಅದು ತಕ್ಷಣವೇ ಜಾರಿಯಾಗಬೇಕು ಎಂದು ಒತ್ತಾಯಿಸುತ್ತಿದೆ. ಹೊಲೆಯ ಮತ್ತು ಸ್ಪೃಶ್ಯ ಸಮುದಾಯದ ಜಾತಿಗಳ ಮತ್ತು ಅದರ ಪ್ರಭಾವಿ ಪ್ರತಿನಿಧಿಗಳು ಅದು ವೈಜ್ಞಾನಿಕವಲ್ಲ. ಅದು ದಲಿತರ ಐಕ್ಯತೆಯನ್ನು ಒಡೆಯುವ ದಲಿತ–ವಿರೋಧಿ ಪ್ರಬಲ ಜಾತಿಗಳ ಹುನ್ನಾರ ಎಂದು ವರದಿಯ ಅಂಗೀಕಾರವನ್ನು ತಡೆ ಹಿಡಿದಿವೆ. ಈ ಸಂಘರ್ಷ ಮೂರು ಪಕ್ಷಗಳಲ್ಲೂ ಮತ್ತು ಪಕ್ಷಾತೀತವಾಗಿಯೂ ನಡೆದಿದೆ.

ಈ ಮೂರೂ ಪಕ್ಷಗಳು ನ್ಯಾ. ಸದಾಶಿವ ಆಯೋಗದ ವರದಿಯ ಜಾರಿಗೆ ಬದ್ಧವಾಗಿವೆ ಎಂದು ಹೇಳಿಕೊಳ್ಳುತ್ತವೆ. ಪ್ರತಿ ಚುನಾವಣಾ ಪ್ರಣಾಳಿಕೆಯಲ್ಲಿ ಅದನ್ನು ಸೇರಿಸುತ್ತವೆ. ಚುನಾವಣಾ–ಪೂರ್ವ ವಿರೋಧ ಪಕ್ಷವಾಗಿರುವ ಪಕ್ಷ ಇದನ್ನು ಪ್ರಧಾನವಾಗಿ ಎತ್ತುತ್ತದೆ. ಅದೇ ಪಕ್ಷ ಆಡಳಿತ ಪಕ್ಷವಾದಾಗ ಈ ಎರಡು ಬಣಗಳ ಸಂಘರ್ಷ ಮತ್ತು ಒಟ್ಟಾರೆ ಯಾವುದೇ ಸಮಸ್ಯೆಯನ್ನು ಚುನಾವಣಾ/ರಾಜಕೀಯ ಪ್ರಯೋಜನದ ದೃಷ್ಟಿಯಿಂದ ಮಾತ್ರ ನೋಡದೆ ನೀತಿಬದ್ಧವಾಗಿ ಪರಿಹರಿಸುವ ಬಗ್ಗೆ ದಿವ್ಯ ನಿರ್ಲಕ್ಷದ ಧೋರಣೆಯಿಂದಾಗಿ, ಅದರ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ ನಿಷ್ಕ್ರಿಯವಾಗುತ್ತದೆ. ಸಾಧ್ಯವಾದಾಗ ಅಗತ್ಯ ಬಿದ್ದಾಗ, ವಿವಿಧ ಪರಿಶಿಷ್ಟ ಸಮುದಾಯಗಳನ್ನು ಪರಸ್ಪರ ವಿರುದ್ಧ ಎತ್ತಿ ಕಟ್ಟಿ ತಮ್ಮ ಪಕ್ಷ/ಬಣಗಳ ಬೇಳೆ ಬೇಯಿಸಿಕೊಳ್ಳುತ್ತವೆ ಎಂಬುದು ಕಳೆದ ಹಲವು ವರ್ಷಗಳ ಅನುಭವದಿಂದ ಸ್ಪಷ್ಟ.

ಈಗಿನ ಮಾದಿಗರ ಆಕ್ರೋಶ ನಿಜವಾಗಿಯೂ ಈ ಮೂರು ಪಕ್ಷಗಳ ಇಂತಹ ಅವಕಾಶವಾದಿ ರಾಜಕಾರಣದ ವಿರುದ್ಧ ಎಂಬುದು ಸ್ಪಷ್ಟ. ಅದೇ ಸಮಯದಲ್ಲಿ ಇದನ್ನು ಈ ಸಮುದಾಯದ ಮತ್ತು ಈ ಮೂರು ಪಕ್ಷಗಳ ಕೆಲವು ನಾಯಕರು – ತಮ್ಮ ಹಿತಾಸಕ್ತಿ ಕಾಪಾಡಿಕೊಳ್ಳಲು, ಇತರ ಪಕ್ಷಗಳಿಗೆ ಹಾನಿ ಮಾಡುವ ತಂತ್ರವಾಗಿ, ದಲಿತ ಸಮುದಾಯಗಳ ನಡುವೆ ಸಂಘರ್ಷ ತಂದಿಡಲು – ಬಳಸಿಕೊಳ್ಳುವ ಸಾಧ್ಯತೆಯಿದೆ. ಮಾತ್ರವಲ್ಲ, ಒಳಮೀಸಲಾತಿಯ ಸಮಸ್ಯೆಗೆ ಪರಿಹಾರವನ್ನು ಒಟ್ಟಾರೆ ಮೀಸಲಾತಿಯ ನೈಜ ಜಾರಿಯ ಸಮಸ್ಯೆಯಿಂದ ಪ್ರತ್ಯೇಕಿಸಿ ನೋಡಲು ಸಾಧ್ಯವಿಲ್ಲ.

ಪರಿಶಿಷ್ಟ ಜಾತಿ ಪಂಗಡಗಳಿಗೆ ಶೇ. 18 ಮೀಸಲಾತಿಯ ಸಂವಿಧಾನ–ದತ್ತ ಹಕ್ಕು 10 ವರ್ಷಗಳೊಳಗೆ ಪೂರ್ಣವಾಗಿ ಜಾರಿಯಾಗಿ ಚಾರಿತ್ರಿಕ ಅಸಮಾನತೆಗಳನ್ನು ತೊಡೆದು ಹಾಕಬೇಕಿತ್ತು. ಆದರೆ ಸರಕಾರಿ ಹುದ್ದೆಗಳಲ್ಲಿ 1960ರ ದಶಕದ ಕೊನೆಯಲ್ಲಿ ಡಿ ವರ್ಗದಲ್ಲಿ ಮಾತ್ರ, ಸಾರ್ವಜನಿಕ ಉದ್ಯಮ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಹ ಕೆಳವರ್ಗದ ನೌಕರರಲ್ಲಿ ಮಾತ್ರ 1970ರ ದಶಕದಲ್ಲಿ ಶೇ. 18 ಮೀಸಲಾತಿ ಜಾರಿಗೆ ಬಂತು. ಉಳಿದ ಮಧ್ಯಮ ಮತ್ತು ಉಚ್ಚ ಹಂತಗಳಲ್ಲಿ ಅದರ ಅರ್ಧದಷ್ಟೂ ಜಾರಿಯಾಗಿಲ್ಲ. ಇದಕ್ಕೆ ಮೊದಲಿಗೆ ಕಾಂಗ್ರೆಸ್ ಆ ಮೇಲೆ ಬಿಜೆಪಿ, ಜೆಡಿ(ಎಸ್) ನಂತಹ ಆಳುವ ವರ್ಗದ ಪಕ್ಷಗಳ ದಲಿತರ ಬಗ್ಗೆ ಮತಬ್ಯಾಂಕ್ ರಾಜಕೀಯ ನೀತಿಯೇ ಕಾರಣ. ಅವು ನಿಜವಾದ ಆರ್ಥಿಕ ಸಬಲೀಕರಣದ ಕ್ರಮಗಳನ್ನು ಕೈಗೊಳ್ಳದೆ, ಮೀಸಲಾತಿಯ ಜಾರಿಯನ್ನು ಉದ್ದೇಶಪೂರ್ವಕವಾಗಿ ಮಾಡದೆ 'ಮೂಗಿಗೆ ಸವರುವ ತುಪ್ಪ'ವಾಗಿ ಶಾಶ್ವತವಾಗಿ ಉಳಿಸಿಕೊಳ್ಳುವ ತಂತ್ರವಾಗಿ ಬಳಸುತ್ತಿವೆ. ಆದರೆ ತಾನು ದಲಿತರ ಉದ್ಧಾರಕ್ಕೆ ಬದ್ಧವಾಗಿದ್ದೇನೆ ಎಂದು ಪೋಸು ಹೊಡೆಯುತ್ತದೆ.

ಈ ಮೂರು ರೀತಿಯ ಸಂಘಟನೆಗಳಲ್ಲಿ ಬಹುಪಾಲು ಹುದ್ದೆಗಳು ಹೊರಗುತ್ತಿಗೆ, ತಾತ್ಕಾಲಿಕ ವಾಗಿರುವುದು ಹಾಗೂ ವ್ಯಾಪಕವಾಗಿ ಹಬ್ಬುತ್ತಿರುವ ಖಾಸಗೀಕರಣದಿಂದ ಮೀಸಲಾತಿಯ ಜಾರಿ ಇನ್ನಷ್ಟು ಸವಾಲನ್ನು ಎದುರಿಸುತ್ತಿವೆ. ಇದೇ ಬೆಳವಣಿಗೆಗಳ ಕಾರಣದಿಂದ ನಿರುದ್ಯೋಗ ಬೃಹದಾಕಾರವಾಗಿ ಬೆಳೆಯುತ್ತಿದ್ದು ಇತರ ಜಾತಿಗಳ ಬಡವರು ಮೀಸಲಾತಿಯೇ ಇದಕ್ಕೆ ಕಾರಣ ಎಂದು ನಂಬುವಂತಾಗಿ, ದಲಿತರ ವಿರುದ್ಧ ಆಕ್ರೋಶ ಹಬ್ಬುವಂತಾಗಿದೆ. ಹಾಗೆ ನಂಬಿಸಲು ಈ ಪಕ್ಷಗಳ ಕೆಲವು ವಿಭಾಗಗಳು ಸಕ್ರಿಯವಾಗಿ ಕೆಲಸ ಮಾಡುತ್ತಿವೆ ಕೂಡಾ. ಸರಕಾರದ ನವ–ಉದಾರವಾದಿ ನೀತಿಗಳಿಂದ ಜನರ ಗಮನ ಬೇರೆಡೆಗೆ ಸೆಳೆಯಲು ಇದು ಆಳುವ ವರ್ಗಗಳಿಗೆ ಸಹಾಯಕವಾಗಿದೆ. ಅದೇ ರೀತಿ ದಲಿತರಿಗೆ ಮೀಸಲಾತಿಯ ಒಟ್ಟಾರೆ ಜಾರಿಯ ಅಭಾವದ ಬಗ್ಗೆ ಚರ್ಚೆಯಾಗದಂತೆ ಒಳಮೀಸಲಾತಿಯ ಚರ್ಚೆಯನ್ನೂ ಬಳಸಿಕೊಳ್ಳುತ್ತಿವೆ. ಸಾಮಾಜಿಕ ನ್ಯಾಯದ ಪ್ರಾಮಾಣಿಕ ಜಾರಿಯ ಮತ್ತು ದಲಿತರ ಸಬಲೀಕರಣದ ಭಾಗವಾಗಿ ಮೀಸಲಾತಿ, ಒಳಮೀಸಲಾತಿಯನ್ನು ನೋಡುವ ಎಲ್ಲ ಎಡ ಪ್ರಜಾಸತ್ತಾತ್ಮಕ ಶಕ್ತಿಗಳು ಒಳಮೀಸಲಾತಿಯ ಚರ್ಚೆ ಮೀಸಲಾತಿಯ ಪ್ರಾಮಾಣಿಕ ಜಾರಿಯನ್ನೂ ಒಳಗೊಳ್ಳುವಂತೆ ಕ್ರಮವಹಿಸಬೇಕಾಗಿದೆ.



ಆದ್ದರಿಂದ ರಾಜ್ಯ ಸರಕಾರ ಒಳಮೀಸಲಾತಿಯನ್ನು ಜಾರಿಗೊಳಿಸಲು ತಕ್ಷಣ ಕ್ರಮ ವಹಿಸಬೇಕು. ಇದಕ್ಕಾಗಿ ನ್ಯಾ. ಸದಾಶಿವ ಆಯೋಗದ ವರದಿಯ ಬಗ್ಗೆ ತನ್ನ ನಿಲುವನ್ನು ಸ್ಪಷ್ಟ ಪಡಿಸಿ ಸದನದ ಮುಂದೆ ಮಂಡಿಸಬೇಕು. ಅಲ್ಲಿ ಬಂದ ಸಲಹೆಗಳನ್ನು ಒಳಗೊಂಡು ಸದನದ ಮಂಜೂರಾತಿ ಪಡೆದು ಕೇಂದ್ರಕ್ಕೆ ಕಳಿಸಿ ಅದನ್ನು ಜಾರಿ ಮಾಡುವ ಪ್ರಕ್ರಿಯೆಯನ್ನು ಬೇಗನೇ ಮಾಡುವಂತೆ ಒತ್ತಾಯಿಸಬೇಕು. ದಲಿತರ ಮೀಸಲಾತಿಯ ಪೂರ್ಣ ಮತ್ತು ಪ್ರಾಮಾಣಿಕ ಜಾರಿಗೆ ಕ್ರಮ ಕೈಗೊಳ್ಳಬೇಕು. ಈ ವಿಷಯ ಮುಂದಿಟ್ಟು, ದಲಿತರ ಮತ್ತು ಸಾಮಾಜಿಕ ನ್ಯಾಯದ ಪರವಾಗಿ ಹೋರಾಡುವ ಎಲ್ಲರ ಐಕ್ಯತೆ ಒಡೆಯುವ, ಆಳುವ ವರ್ಗಗಳ ಮತ್ತು ಅವುಗಳ ಪಕ್ಷಗಳ ಹುನ್ನಾರವನ್ನು ವಿಫಲಗೊಳಿಸಲು ಎಲ್ಲ ಎಡ ಪ್ರಜಾಸತ್ತಾತ್ಮಕ ಶಕ್ತಿಗಳು ಎಚ್ಚರವಹಿಸಬೇಕು. ●

ತೊಕ್ಕೊಟು ಮೇಲ್ಸೇತುವೆ ಬಳಿ ಡಿವೈಎಫ್ಐ ಧರಣಿ



ಕರಾವಳಿ ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಜನರಿಗೆ ದೀರ್ಘಕಾಲದ ದುಸ್ವಪ್ನವಾಗಿ ಪರಿಣಮಿಸಿದೆ. 8 ವರ್ಷಗಳಿಂದಲೂ ಪೂರ್ಣಗೊಳ್ಳದ ಮೇಲುಸೇತುವೆಗಳು, ಅಪೂರ್ಣ ಸರ್ವಿಸ್ ರಸ್ತೆಗಳು, ಬಿಡದೆ ಬಂದ ಮಳೆಗೆ ರಸ್ತೆಯುದ್ದ ರಾಶಿಬಿದ್ದ ಕೊಚ್ಚೆ ಗುಂಡಿಗಳು, ಆಗಾಗ್ಗೆ ವಾಹನ ಅಪಘಾತಗಳು ಹಾಗೂ ಸಾವುನೋವುಗಳು, ಅವೆಲ್ಲವನ್ನು ಧಿಕ್ಕರಿಸುವಂತೆ ಗುತ್ತಿಗೆದಾರ ಸಂಸ್ಥೆ ನವಯುಗ ಕಂಪೆನಿ ಆಗಲೇ ಆರಂಭಿಸಿರುವ ಟೋಲ್ ವಸೂಲಾತಿ–ಇವೆಲ್ಲದರಿಂದ ಎರಡೂ ಜಿಲ್ಲೆಗಳ ಜನ ಬಳಲಿ ಬೆಂಡಾಗಿದ್ದಾರೆ. ಮೇಲುಸೇತುವೆ ಬಳಿಯಲ್ಲಿ ಟೋಲ್‌ಗೇಟ್ ಬಳಿ ಸ್ಥಳೀಯ ನಾಗರಿಕರು ಹೋರಾಟ ಸಮಿತಿಗಳನ್ನು ರಚಿಸಿ ಆಗಲೇ ಹಲವು ಬಾರಿ ಪ್ರತಿಭಟನೆ ನಡೆಸಿದ್ದಾರೆ. ಹೆಚ್ಚಿನ ನಾಗರಿಕ ಹೋರಾಟಗಳಿಗೆ ಡಿವೈಎಫ್ಐ ನೇತೃತ್ವ ನೀಡಿದೆ.

ಈಗ ನಾಲ್ಕು ತಿಂಗಳ ಹಿಂದೆ ಡಿವೈಎಫ್ಐ ಉಳ್ಳಾಲ ವಲಯ ಸಮಿತಿ ನೇತೃತ್ವದಲ್ಲಿ ತೊಕ್ಕೊಟು ಮೇಲುಸೇತುವೆಯಿಂದ ಕರ್ನಾಟಕ–ಕೇರಳ ಗಡಿಯಲ್ಲಿರುವ ತಲಪಾಡಿ ಟೋಲ್‌ಗೇಟ್ ವರೆಗೆ 'ತಲಪಾಡಿ ಚಲೋ' ಪಾದಯಾತ್ರೆಯನ್ನು ನಡೆಸಲಾಗಿತ್ತು. ಆದಾಗ್ಯೂ ತೊಕ್ಕೊಟು ಮೇಲುಸೇತುವೆಯ ಕೆಲಸ ಚುರುಕುಗೊಂಡಿಲ್ಲ. ಮೂರು ತಿಂಗಳ ಭಾರೀ ಮಳೆಯಿಂದಾಗಿ ಸೇತುವೆ ಅಕ್ಕಪಕ್ಕದ ರಸ್ತೆಗಳು ಪದೇ ಪದೇ ಜಲಾವೃತವಾಗುವುದು, ಸಂಚಾರ ದಟ್ಟಣೆಯಿಂದ ವಾಹನ ಅಪಘಾತಗಳು ನಡೆಯುತ್ತಲೇ ಇದೆ. ಜನಪ್ರತಿಭಟನೆ ನಡೆದ ಬಳಿಕೊಮ್ಮೆ ಸಂಸದ ನಳಿನ್ ಕುಮಾರ್ ಕಟೀಲ್ ಬಾಯಿ ತೆರೆಯುತ್ತಾರೆ; ಶೀಘ್ರ ಕಾಮಗಾರಿ ಮುಗಿಸುವ ಭರವಸೆ ಕೊಡುತ್ತಾರೆ; ಗುತ್ತಿಗೆದಾರರ ವಿರುದ್ಧ ಗುಟುರು ಹಾಕುತ್ತಾರೆ. ಆದರೆ ಕಾಮಗಾರಿ ಅದೇ ಆಮೆಗತಿಯಿಂದ ಸಾಗುತ್ತದೆ.

ಮೊನ್ನೆ ಅಕ್ಟೋಬರ್ 2ರಂದು ಗಾಂಧಿ ಜಯಂತಿಯ ದಿನ ಡಿವೈಎಫ್ಐ ಉಳ್ಳಾಲ ವಲಯ ಸಮಿತಿಯ ನೇತೃತ್ವದಲ್ಲಿ ಮತ್ತೊಮ್ಮೆ ಪ್ರತಿಭಟನೆ ನಡೆಸಲಾಯಿತು. ಸ್ಥಳೀಯ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ತೊಕ್ಕೊಟು ಮೇಲುಸೇತುವೆ ಅಡಿಭಾಗದಲ್ಲಿಯೇ ಸಾಮೂಹಿಕ ಧರಣಿಯನ್ನು ನಡೆಸಲಾಯಿತು. ಹೆದ್ದಾರಿ ಗುತ್ತಿಗೆದಾರರ ವಿಳಂಬ ನೀತಿಯನ್ನು ಖಂಡಿಸಲಾಯಿತು. ಕೇಂದ್ರ ಸರಕಾರ ಹಾಗೂ ಸಂಸದರ ವಿಳಂಬ ನೀತಿಯನ್ನು ಖಂಡಿಸಲಾಯಿತು. ತೊಕ್ಕೊಟು ಮೇಲುಸೇತುವೆ ಅಪೂರ್ಣವಾಗಿದ್ದರೂ 7 ಕಿ.ಮೀ. ದೂರದ ತಲಪಾಡಿ ಟೋಲ್‌ಗೇಟ್‌ನಲ್ಲಿ ಸುಂಕ ವಸೂಲಿ ಮಾಡುತ್ತಿರುವುದನ್ನು ನಿಲ್ಲಿಸಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಡಿವೈಎಫ್ಐ ರಾಜ್ಯ ಅಧ್ಯಕ್ಷರಾದ ಮುನೀರ್ ಕಾಟಿಪಳ್ಳ, ಸಿಪಿಐ(ಎಂ) ಉಳ್ಳಾಲ ವಲಯ ಕಾರ್ಯದರ್ಶಿ ಕೆ.ಕೃಷ್ಣಪ್ಪ ಸಾಲಿಯಾನ್, ಜಿಲ್ಲಾ ಟ್ಯಾಕ್ಸಿಮೆನ್ ಕ್ಯಾಬ್ ಅಸೋಸಿಯೇಶನ್ ಅಧ್ಯಕ್ಷ ದಿನೇಶ್ ಕುಂಪಲ, ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಡಿವೈಎಫ್ಐ ದ.ಕ.ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಮಾತನಾಡಿದರು. ಸಿಪಿಐ(ಎಂ) ಮುಖಂಡರಾದ ಪದ್ಮಾವತಿ ಶೆಟ್ಟಿ, ನ್ಯಾಯವಾದಿ ರಾಮಚಂದ್ರ ಬಬ್ಬುಕಟ್ಟೆ, ಡಿವೈಎಫ್ಐ ವಲಯ ಮುಖಂಡರಾದ ನಿತಿನ್ ಕುತ್ತಾರ್, ಸುನೀಲ್ ತೇವುಲ, ರಫೀಕ್ ಹರೇಕಳ, ಸಂತೋಷ್ ಪಿಲಾರ್, ಮಹಾಬಲ ದೆಪ್ಪೆಲಿಮಾರ್ ಭಾಗವಹಿಸಿದ್ದರು. ಡಿವೈಎಫ್ಐ ಉಳ್ಳಾಲ ವಲಯ ಸಮಿತಿ ಅಧ್ಯಕ್ಷ ಜೀವನ್‌ರಾಜ್ ಕುತ್ತಾರ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ರಝಾಕ್ ಮೊಂಟೆಪದವು ಸ್ವಾಗತಿಸಿದರು. •

ಬಸ್ ಸಂಪರ್ಕ ವಿಸ್ತರಿಸುವಂತೆ ಹರೇಕಳದಲ್ಲಿ ಡಿವೈಎಫ್ಐ ರಸ್ತೆ ತಡೆ:

ಉಳ್ಳಾಲ ಪ್ರದೇಶದ ಹರೇಕಳಕ್ಕೆ ಸರ್ಕಾರಿ ಬಸ್ ಓಡಾಟಕ್ಕೆ ಎರಡು ವರ್ಷಗಳ ಹಿಂದೆಯೇ ಸರ್ವೆ ನಡೆಸಿದ್ದರೂ ಯೋಜನೆ ಜಾರಿಯಾಗಿಲ್ಲ. ಹರೇಕಳದಿಂದ ಕೊಜಪಾಡಿ ಬಸ್ ಸಂಚಾರ ವಿಸ್ತರಣೆ ಆಗಬೇಕಿದೆ. ಈ ಎರಡೂ ಬೇಡಿಕೆಗಳನ್ನು ಆಗ್ರಹಿಸಿ ಡಿವೈಎಫ್ಐ ಘಟಕಗಳ ನೇತೃತ್ವದಲ್ಲಿ ಹರೇಕಳ ಕಡವಿನಲ್ಲಿ ರಸ್ತೆ ತಡೆ ನಡೆಸಿ, ಪ್ರತಿಭಟನಾ ಸಭೆ ನಡೆಸಲಾಯಿತು.

ಪ್ರತಿಭಟನೆಯನ್ನುದ್ದೇಶಿಸಿ ಡಿವೈಎಫ್ಐ ದ.ಕ. ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಹರೇಕಳ ಗ್ರಾ.ಪಂ.ಸದಸ್ಯ ಅಶ್ರಫ್ ಮಾತನಾಡಿದರು. ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ಸದಸ್ಯ ರಫೀಕ್ ಹರೇಕಳ, ಡಿವೈಎಫ್ಐ ಕಾರ್ಯಕರ್ತರಾದ ಇಸ್ಮಾಯಿಲ್, ನಿಝಾಂ, ಸಿರಾಜ್, ಸಾಧಿಕ್ ಭಾಗವಹಿಸಿದ್ದರು.

– ವಾಸುದೇವ ಉಚ್ಚಿಲ್

ವಿದ್ಯಾರ್ಥಿಗಳ ಹಕ್ಕುಗಳ ದಮನಕ್ಕೆ ಮುಂದಾದ ಮೈಸೂರು ವಿ.ವಿ.



ಮೈಸೂರು ವಿ.ವಿ.ಯ ಲೋಪದೋಷಗಳನ್ನು ಪ್ರಶ್ನಿಸುತ್ತಾರೆ ಹಾಗೂ ಸಂಘಟನೆಯ ಕೆಲಸಗಳನ್ನು ನಡೆಸುತ್ತಾರೆ ಎಂಬ ಆರೋಪ ಹೊರಿಸಿ ಸಂಶೋಧನಾ ವಿದ್ಯಾರ್ಥಿ ಮಹೇಶ್ ಸೋಸಲೆಯವರನ್ನು ಕಪ್ಪುಪಟ್ಟಿಗೆ ಸೇರಿಸಿ ವಸತಿ ನಿಲಯವನ್ನು ನಿರಾಕರಿಸಿದ್ದಾರೆ. ವಿ.ವಿ ಯ ಈ ನಡೆ ವಿರೋಧಿಸಿ ಧರಣಿ ನಡೆಸುತ್ತಿದ್ದಾರೆ. ಇವರ ಧರಣಿಗೆ SFI ಕರ್ನಾಟಕ ರಾಜ್ಯ ಸಮಿತಿ ಹಾಗೂ SFI ಮೈಸೂರು ವಿ.ವಿ.ಘಟಕ ಬೆಂಬಲ ಸೂಚಿಸಿವೆ.

2013 ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಎಂ. ಎ ಇತಿಹಾಸ ವಿಭಾಗಕ್ಕೆ ಪ್ರವೇಶಾತಿ ಪಡೆದ ಮಹೇಶ್ ಸೋಸ್ಲೆ ಯವರು ವಿದ್ಯಾರ್ಥಿಯು ದಲಿತ ವಿದ್ಯಾರ್ಥಿ ಒಕ್ಕೂಟದ ಗೌರವಾಧ್ಯಕ್ಷರಾಗುತ್ತಾರೆ. ಆ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಆಗಿರುವ ಅನಾನುಕೂಲ ಮತ್ತು ಇನ್ನಿತರ ಲೋಪದೋಷಗಳನ್ನು ಎತ್ತಿ ಹಿಡಿದಿದ್ದರು. ಎಂ. ಎ ಯಲ್ಲಿ ಚಿನ್ನದ ಪದಕ ಪಡೆದು ಹೊರಬಂದ ಇವರು ಇಂದು ಇದೇ ವಿ.ವಿ ಯಲ್ಲಿ ಇತಿಹಾಸ ವಿಭಾಗದಲ್ಲಿ ಪಿಹೆಚ್, ಡಿ (ಸಂಶೋಧನೆ) ಗೆ ಪ್ರವೇಶ ಪಡೆದಿರುತ್ತಾರೆ. ಈ ವಿದ್ಯಾರ್ಥಿಗೆ ವಸತಿ ನಿಲಯ ಪ್ರವೇಶ ಕೊಟ್ಟರೆ ವಿಶ್ವವಿದ್ಯಾನಿಲದ ಲೋಪದೋಷಗಳನ್ನು ಎತ್ತಿ ಹಿಡಿಯುತ್ತಾನೆ ಮತ್ತು ವಿದ್ಯಾರ್ಥಿಗಳನ್ನು ಸಂಘಟಿಸುತ್ತಾನೆ ಎನ್ನುವ ನೆಪವೊಡ್ಡಿ ವಿಶ್ವವಿದ್ಯಾನಿಲಯದ ಸದರಿ ಕುಲಸಚಿವರು ವಿದ್ಯಾರ್ಥಿಯನ್ನು ಕಪ್ಪು ಪಟ್ಟಿಗೆ ಸೇರಿಸಿದ್ದಾರೆ.

ಪಿ.ಎಚ್.ಡಿ. ಗೆ ಪ್ರವೇಶವಿದ್ದರೂ ನಿಲಯದ ಪ್ರವೇಶಾತಿ ಸಿಗದ ಈ ದಲಿತ ವಿದ್ಯಾರ್ಥಿಯು ನಿಲಯದ ಕಾರಿಡಾರ್ ನಲ್ಲಿ ಯೇ ಮಲಗುತಿದ್ದಾರೆ. ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನಕ್ಕೆ ಪ್ರವೇಶಾತಿ ಕೊಟ್ಟ ನಂತರ ನಿಲಯದ ಪ್ರವೇಶಾತಿಯನ್ನು ಬಯಸಿದರೆ ಕಡ್ಡಾಯವಾಗಿ ಕೊಡಬೇಕು. ಪಿ.ಎಚ್.ಡಿ. ಗೆ ಪ್ರವೇಶಕೊಟ್ಟು ನಿಲಯಕ್ಕೆ ಪ್ರವೇಶಕೊಡದೆ ಯಾವ ಕಾನೂನಿನಡಿ ಕಪ್ಪು ಪಟ್ಟಿಯಲ್ಲಿ ಸೇರಿಸಿದ್ದಾರೆ? ಎಂಬ ಪ್ರಶ್ನೆ ಕಾಡುತ್ತಿದೆ.

ಈ ಘಟನೆ ಹೈದ್ರಾಬಾದ್ ಕೇಂದ್ರೀಯ ವಿ.ವಿ ಯಲ್ಲಿ ರೋಹಿತ್ ವೇಮುಲಾ ನಡೆಸಿದ ಹೋರಾಟವನ್ನು ನೆನಪಿಸುತ್ತದೆ. ಶೋಷಿತ ವರ್ಗದವರ ಶಿಕ್ಷಣಕ್ಕೆ ಅಡ್ಡಗಾಲಾಗುವ ವಿ.ವಿ. ಮತ್ತು ಸರಕಾರ ಉಳ್ಳವರ ಪರ ಶಿಕ್ಷಣದ ನಿಯಮಗಳನ್ನು ಜಾರಿ ಮಾಡುತ್ತಿದೆ. ಮಹೇಶ್ ರವರ ಹೆಸರನ್ನು ಕಪ್ಪು ಪಟ್ಟಿಗೆ ಸೇರಿಸಿರುವ ಕುಲಸಚಿವರ ಅದೇಶವನ್ನು ರದ್ದು ಪಡಿಸಬೇಕು. ಮತ್ತು ಅವರಿಗೆ ನ್ಯಾಯ ಒದಗಿಸಿ ಅವರ ಸಂಶೋಧನಾ ಶಿಕ್ಷಣ ಪೂರೈಸಲು ಅವಕಾಶ ನೀಡಬೇಕು ಎಂದು SFI ಆಗ್ರಹಿಸಿದೆ.

ಮೈಸೂರು ವಿ.ವಿ.ಯ ಸಂಶೋಧನಾ ವಿದ್ಯಾರ್ಥಿ ಮಹೇಶ ಸೋಸಲೆ ಮೇಲಿನ ಪ್ರಕರಣವನ್ನು ವಾಪಸ್ಸು ಪಡೆದು ಹಾಸ್ಟೆಲ್ ಪ್ರವೇಶಾತಿ ನೀಡುವಂತೆ ಆಗ್ರಹಿಸಿ ಮತ್ತು ವಿವಿ ಅಕ್ರಮಗಳ ಬಗ್ಗೆ ತನಿಖೆ ನಡೆಸುವಂತೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿ, ಎಸ್.ಎಫ್.ಐ, ದಲಿತ ವಿದ್ಯಾರ್ಥಿ ಒಕ್ಕೂಟ, ಸಂಶೋಧನಾ ವಿದ್ಯಾರ್ಥಿ ಒಕ್ಕೂಟ, ಬಿ.ವಿ.ಎಸ್ ಸಂಘಟನೆಗಳನ್ನೊಳಗೊಂಡ ವಿದ್ಯಾರ್ಥಿ ಒಕ್ಕೂಟದ ಮೂಲಕ ಅನಿರ್ದಿಷ್ಟಾವಧಿ ಧರಣಿಯನ್ನು ಆರಂಭಿಸಿವೆ.

–ಗುರುರಾಜ ದೇಸಾಯಿ

ಕೇಳಿಸಿದ್ದು

ಡಿಜಿಟಲ್ ತಂತ್ರಜ್ಞಾನಕ್ಕೊಂದು ಗಾಂಧೀ ಪ್ರಣಾಳಿಕೆ

ವಿಕೇಂದ್ರೀಕರಣ, ಸಹಕಾರ ತತ್ವ ಸಾಕಾರಕ್ಕೆ ಬೇಕಿರುವ ಎಲ್ಲವನ್ನೂ ತನ್ನೊಳಗೆ ಇಟ್ಟುಕೊಂಡೂ ಅದಕ್ಕೆ ವಿರುದ್ಧವಾದ ದಿಕ್ಕಿನಲ್ಲಿ ಚಲಿಸುತ್ತಿರುವ ಡಿಜಿಟಲ್ ತಂತ್ರಜ್ಞಾನಕ್ಕೊಂದು ಗಾಂಧೀ ಪ್ರಣಾಳಿಕೆಯ ಅಗತ್ಯವಿದೆ. ಅದನ್ನು ರೂಪಿಸುವುದು ಹೇಗೆ ಮತ್ತು ಯಾರು ಎಂಬುದಿಲ್ಲಿ ಪ್ರಶ್ನೆ. ಆರು ವರ್ಷಗಳ ಹಿಂದೆ ಸುಧೀಂದ್ರ ಕುಲಕರ್ಣಿಯವರು ಗಾಂಧೀ ಚಿಂತನೆಯ ಬೆಳಕಿನಲ್ಲಿ ಆಧುನಿಕ ತಂತ್ರಜ್ಞಾನವನ್ನು ಕಾಣಲು ಹೊರಟಾಗ ಇವೆಲ್ಲವೂ ಇರಲಿಲ್ಲ ಎಂದಲ್ಲ. ಅವರು ಈ ತಂತ್ರಜ್ಞಾನದ ಸಾಧ್ಯತೆಯೊಳಗೇ ಪರಿಹಾರಗಳನ್ನೂ ಕಾಣುತ್ತಿದ್ದರು. ಇದೇ ಹೊತ್ತಿನಲ್ಲಿ ತಂತ್ರಜ್ಞಾನ ದೈತ್ಯರೂ ತಮ್ಮ ಹಿಡಿತವನ್ನು ಮತ್ತಷ್ಟು ಬಿಗಿಗೊಳಿಸುವುದಕ್ಕೂ ತಾಂತ್ರಿಕ ಪರಿಹಾರಗಳನ್ನೇ ಹುಡುಕುತ್ತಿದ್ದರು ಎಂಬ ಅಂಶವನ್ನು ನಾವು ಗಮನಿಸಬೇಕು.

ತಾಂತ್ರಿಕ ಜ್ಞಾನವನ್ನು ಸಮುದಾಯಗಳಿಂದ ಸೃಷ್ಟಿಸಿ ಅವುಗಳ ಮಾಲೀಕತ್ವದಲ್ಲೇ ಇಡುವ ಮುಕ್ತ ಮತ್ತು ಸ್ವತಂತ್ರ ತಂತ್ರಾಂಶ ಮಾದರಿಯನ್ನೇ ಸೂಕ್ಷ್ಮವಾಗಿ ಗಮನಿಸಿದರೆ ಇದು ಅರ್ಥವಾಗುತ್ತದೆ. ಲೀನಕ್ಸ್‌ನಂಥ ಮುಕ್ತ ಮತ್ತು ಸ್ವತಂತ್ರ ತಂತ್ರಾಂಶಕ್ಕಿಂತ ಹೆಚ್ಚು ಜನಪ್ರಿಯವಾಗಿರುವುದು ಮೈಕ್ರೋಸಾಫ್ಟ್‌ನ ವಿಂಡೋಸ್. ಲೀನಕ್ಸ್ ಉಚಿತವಾಗಿ ದೊರೆಯುತ್ತಿತ್ತು. ಈಗಲೂ ದೊರೆಯುತ್ತದೆ. ವಿಂಡೋಸ್ ಯಾವತ್ತೂ ಉಚಿತವಾಗಿರಲಿಲ್ಲ. ಆದರೆ ಅದರ ಅನಧಿಕೃತ ನಕಲುಗಳು ಉಚಿತವಾಗಿ ದೊರೆಯುತ್ತಿದ್ದವು. ಇದನ್ನು ಬಳಸುವುದು ಅನೈತಿಕ ಎಂದು ಗೊತ್ತಿದ್ದೂ ಜನರು ಅವುಗಳನ್ನು ಬಳಸಿದರು. ಎಷ್ಟರಮಟ್ಟಿಗೆ ಎಂದರೆ ಈಗ ಅವರೇ ದುಡ್ಡು ಕೊಟ್ಟು ಖರೀದಿಸುವಷ್ಟರ ಮಟ್ಟಿಗೆ ಅದು ಅಗತ್ಯವಾಗಿ ಹೋಗಿದೆ.

ಮಾರುಕಟ್ಟೆ ಶಕ್ತಿಗಳು ಕೆಲಸ ಮಾಡುವುದೇ ಹೀಗೆ. ಅವು ಪರ್ಯಾಯಗಳನ್ನು ದುರ್ಬಲಗೊಳಿಸುತ್ತಾ ಹೋಗುತ್ತವೆ. ಅದಕ್ಕೆ ಅವು ಬಳಸುವುದು ವ್ಯಕ್ತಿಯ ಲೋಭವನ್ನು. ಆರಂಭದಲ್ಲಿ ವ್ಯಕ್ತಿಯ ಲೋಭ ಗೆಲುವು ಸಾಧಿಸಿತು. ಒಂದು ಹಂತದ ನಂತರ ವಾಣಿಜ್ಯ ಸಂಸ್ಥೆಯ ಲೋಭ ಗೆಲುವು ಸಾಧಿಸಲು ತೊಡಗಿತು. ಲೋಭಿಯಾದ ವ್ಯಕ್ತಿ ಈಗ ನಷ್ಟ ಅನುಭವಿಸಿಯೂ ಅದೇ ಸುಖ ಪಡೆಯಲು ಇಚ್ಛಿಸುತ್ತಿದ್ದಾನೆಯೇ ಹೊರತು ತನಗೆ ನಷ್ಟವಾಗದ ಪರ್ಯಾಯದತ್ತ ನೋಡುತ್ತಿಲ್ಲ.

ಗಾಂಧೀಜಿ ಪ್ರತಿಪಾದಿಸಿದ ವೈಯಕ್ತಿಕ ಮಟ್ಟದ ನೈತಿಕತೆ ಮುಖ್ಯವಾಗುವುದೇ ಈ ಸಂದರ್ಭದಲ್ಲಿ. ಡಿಜಿಟಲ್ ತಂತ್ರಜ್ಞಾನಕ್ಕೆ ನಿಜಕ್ಕೂ ಒಂದು ಗಾಂಧೀ ಪ್ರಣಾಳಿಕೆ ಇದ್ದಿದ್ದರೆ ಈ ಲೋಭದ ಸುಳಿಯಲ್ಲಿ ಸಿಲುಕುವ ಸಾಧ್ಯತೆಯೇ ಉದ್ಭವಿಸುತ್ತಿರಲಿಲ್ಲ. ಡಿಜಿಟಲ್ ಯುಗಕ್ಕೊಂದು ಗಾಂಧೀ ಪ್ರಣಾಳಿಕೆಯ ಅಗತ್ಯ ಈಗಲೂ ಇದೆ. ಗಾಂಧೀ ಚಿಂತನೆಯಂತೆ ನಿರಂತರ ಚಲನಶೀಲವಾಗಿರುವ ಪ್ರಣಾಳಿಕೆಯೊಂದರ ರಚನೆಗೆ ನಾವು ಮುಂದಾಗಬೇಕಷ್ಟೆ..

– ಎನ್.ಎ.ಎಂ.ಇಸ್ಮಾಯಿಲ್ (ಪ್ರಜಾವಾಣಿ, ಸೆ.25)

ಕೃಷಿ ಕೂಲಿಕಾರರ ಸಂಘದಿಂದ
ಅ.1: ಜಾತಿ ದೌರ್ಜನ್ಯಗಳ ವಿರುದ್ಧ ದೇಶವ್ಯಾಪಿ ಪ್ರತಿಭಟನೆ

ಚಂದ್ರಪ್ಪ ಹೊಸ್ಕೇರಾ

ಕೇಂದ್ರದಲ್ಲಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದ ಕಳೆದ ನಾಲ್ಕು ವರ್ಷಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯಗಳ ಮೇಲೆ ಜಾತಿ ದಮನ, ಜಾತಿ ತಾರತಮ್ಯ, ಜಾತಿ ನಿಂದನೆಯ ಪ್ರಕರಣಗಳು ಮಿತಿಮೀರಿ ಹೆಚ್ಚುತ್ತಿವೆ. ಎಲ್ಲರಿಗೂ ಒಳ್ಳೆಯ ದಿನಗಳ ಟೊಳ್ಳು ಭರವಸೆ ನೀಡಿ ಅಧಿಕಾರವನ್ನು ವಶಪಡಿಸಿಕೊಂಡಿರುವ ಪ್ರಧಾನಿ ಮೋದಿಯವರು ನಿತ್ಯವೂ ಅವಮಾನಕ್ಕೆ ಒಳಗಾಗುತ್ತಿರುವ ಈ ತಳಸಮುದಾಯಗಳ ಕುರಿತು ಚಕಾರ ಶಬ್ದ ಎತ್ತುವುದಿಲ್ಲ. ಗ್ರಾಮೀಣ ಭಾರತದಲ್ಲಿ ಇಂದಿಗೂ ದಲಿತ ಬಂಧುಗಳಿಗೆ ದೇವಸ್ಥಾನಗಳಲ್ಲಿ, ಕ್ಷೌರದ ಅಂಗಡಿಗಳಲ್ಲಿ, ಸಾರ್ವಜನಿಕ ಕೆರೆ ಬಾವಿಗಳಲ್ಲಿ ಪ್ರವೇಶ ನಿರಾಕರಿಸಲಾಗುತ್ತಿದೆ. ಹೋಟೇಲುಗಳಲ್ಲಿ ತಾರತಮ್ಯ ಮಾಡಿ ಅವಮಾನಿಸಲಾಗುತ್ತದೆ. ನಗರಗಳಲ್ಲಿ ಬಾಡಿಗೆಗೆ ಮನೆಗಳನ್ನು ನೀಡಲಾಗುವುದಿಲ್ಲ.

ಮೋದಿ ಸರ್ಕಾರದ ಆಡಳಿತದಲ್ಲಿ ಮನುವಾದಿ ಶಕ್ತಿಗಳಿಗೆ ಕುಮ್ಮಕ್ಕು ಸಿಕ್ಕಂತಾಗಿದೆ. ಸಂವಿಧಾನದಲ್ಲಿ ನೀಡಲಾದ ರಕ್ಷಣೆಯನ್ನೂ ಕಿತ್ತುಕೊಳ್ಳಲಾಗುತ್ತಿದೆ. ದೌರ್ಜನ್ಯ-ತಡೆ ಕಾಯ್ದೆಯನ್ನು ತಿದ್ದುಪಡಿ ಮಾಡಿ ವ್ಯರ್ಥಗೊಳಿಸಲಾಗುತ್ತಿದೆ. ಮೀಸಲಾತಿ ಹಕ್ಕನ್ನು ಕಿತ್ತುಕೊಳ್ಳುವ ಪ್ರಯತ್ನ ನಡೆಯುತ್ತಿದೆ. ದಲಿತರು ಇಂದಿಗೂ ಬಹುತೇಕವಾಗಿ ಆಸ್ತಿಯ ಹಕ್ಕಿನಿಂದ, ಲಾಭ ದಾಯಕ ಉದ್ಯೋಗದ ಅವಕಾಶ ಗಳಿಂದ ವಂಚಿತ ರಾಗಿಯೇ ಉಳಿದಿದ್ದಾರೆ. ಪರಸ್ಪರ ಪ್ರೀತಿಸಿ ಮದುವೆಯಾಗಲು ಬಯಸುವ ದಲಿತ-ದಲಿತೇತರ ಯುವ ಜೋಡಿಗಳಿಗೆ ರಕ್ಷಣೆ ಒದಗಿಸುವ ಕಾನೂನು ಇಲ್ಲ. ದಲಿತ ಕುಟುಂಬ ಗಳಿಗೆ ಸರ್ಕಾರ ದಿಂದ ದೊರೆತ ಭೂಮಿಯನ್ನು ಸವರ್ಣೀಯರು ಕಬಳಿಸಿದಾಗ ಪೋಲಿಸರಿಂದಾಗಲಿ, ಕಂದಾಯ ಅಧಿಕಾರಿಗಳಿಂದಾಗಲಿ ರಕ್ಷಣೆ ಸಿಗುವುದಿಲ್ಲ. ಹಲ್ಲೆಗೊಳಗಾದ ದಲಿತರಿಗೆ ಸಮರ್ಪಕ ಪರಿಹಾರ ದೊರೆಯುವುದಿಲ್ಲ. ಗೋಹತ್ಯೆಯ ಹೆಸರಿನಲ್ಲಿ ಮಾನವ ಹತ್ಯೆಗೆ ಪ್ರೋತ್ಸಾಹ ನೀಡಲಾಗುತ್ತದೆ. ದಲಿತರ ಕೊಲೆಗಳು, ಅತ್ಯಾಚಾರಗಳು, ಬಹಿಷ್ಕಾರದ ಪ್ರಕರಣಗಳನ್ನು ಸರಿಯಾಗಿ ದಾಖಲು ಮಾಡಿಕೊಳ್ಳುವ ಬದಲು ಪೋಲೀಸ್ ಠಾಣೆಯಲ್ಲೇ ರಾಜಿಮಾಡಿ ಮುಚ್ಚಿ ಹಾಕಲಾಗುತ್ತದೆ.



ದಲಿತರಿಗೆ ವಾಸಕ್ಕೆ ಮನೆ, ವ್ಯವಸಾಯಕ್ಕೆ ಭೂಮಿ, ಹೊಟ್ಟೆಪಾಡಿಗಾಗಿ ಉದ್ಯೋಗ, ಕೇರಿಗಳ ಸ್ವಚ್ಛತೆ, ಕುಡಿಯುವ ನೀರಿನ ಸೌಲಭ್ಯ, ಸ್ಮಶಾನ ಭೂಮಿ ಮುಂತಾದ ಅವಶ್ಯಕತೆಗಳನ್ನು ಕಡೆಗಣಿಸಲಾಗುತ್ತದೆ. ದಲಿತರು ಬಹುತೇಕವಾಗಿ ಕೃಷಿ ಕಾರ್ಮಿಕರಾಗಿ, ಕಟ್ಟಡ ನಿರ್ಮಾಣ ಕಾರ್ಮಿಕರಾಗಿ, ಪೌರ ಕಾರ್ಮಿಕರಾಗಿ ದುಡಿಯುತ್ತಿರುತ್ತಾರೆ. ಸ್ವಯಂ ಉದ್ಯೋಗಕ್ಕಾಗಿ ನೆರವು ಕೋರಿ ದಲಿತ ಯುವಜನರು ಸಲ್ಲಿಸುವ ಅರ್ಜಿಗಳು ಬಹುತೇಕವಾಗಿ ಪುರಸ್ಕರಿಸಲ್ಪಡುವುದಿಲ್ಲ. ಎಸ್.ಸಿ/ಎಸ್.ಟಿ. ಉಪಯೋಜನೆಗಳು ಸರಿಯಾಗಿ ಜಾರಿಯಾಗುವುದಿಲ್ಲ. ಕರ್ನಾಟಕದಲ್ಲಿ ಹಾಸ್ಟೆಲ್ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸುವ ಎಲ್ಲ ದಲಿತ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತಿಲ್ಲ. ದೇಶದ ಕೃಷಿ ಕಾರ್ಮಿಕರಲ್ಲಿ ಶೇ. 95 ರಷ್ಟು ಮಂದಿ ದಲಿತ ವರ್ಗಕ್ಕೆ ಸೇರಿದವರೇ ಆಗಿರುತ್ತಾರೆ. ಕೃಷಿ ಕಾರ್ಮಿಕರನ್ನು ದೇಶ ಮಟ್ಟದಲ್ಲಿ ಸಂಘಟಿಸುತ್ತಿರುವ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ **(AIAWU)** ವು ದಲಿತರ ಹಕ್ಕುಗಳಿಗಾಗಿ ಹೋರಾಟ ಮಾಡುವ ಒಂದು ಸಂಘಟನೆಯಾಗಿದೆ.

ಇದೇ ಅಕ್ಟೋಬರ್ 1 ರಂದು ಸಂಘದ ಕೇಂದ್ರ ಕಾರ್ಯಕಾರಿ ಸಮಿತಿಯ ಕರೆಯ ಮೇರೆಗೆ ದೇಶಾದ್ಯಂತ ದಲಿತರಿಗೆ ಸ್ವಾಭಿಮಾನದ ಬದುಕನ್ನು ಒದಗಿಸಲು ಒತ್ತಾಯಿಸಿ ಒಂದು ದಿನದ ಪ್ರತಿಭಟನೆಯನ್ನು ನಡೆಸಲಾಯಿತು. ಕರ್ನಾಟಕದಲ್ಲಿಯೂ ಈ ಕರೆಯನ್ನು ಯಶಸ್ವಿಗೊಳಿಸಲಾಯಿತು. ಹುಮ್ನಾಬಾದ್, ಕಲಬುರಗಿ, ಗಂಗಾವತಿ, ರಾಯಚೂರು, ಲಿಂಗಸ್ಗೂರು, ಹರಪನಹಳ್ಳಿ, ಮುಂಡಗೋಡ, ಸವದತ್ತಿ, ಗಜೇಂದ್ರಗಡ, ಶಹಾಪುರ, ಕುಂದಾಪುರ, ಮಂಡ್ಯ ಮುಂತಾದ ಜಿಲ್ಲಾ/ತಾಲೂಕಾ ಕೇಂದ್ರಗಳಲ್ಲಿ ಪ್ರತಿಭಟನಾ ಮೆರವಣಿಗೆ, ಧರಣಿ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಮನವಿ ಸಲ್ಲಿಸುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ. ರಾಜ್ಯದಲ್ಲಿ ಸುಮಾರು 3000 ಮಂದಿ ಕೃಷಿ ಕೂಲಿಕಾರರು ಅಕ್ಟೋಬರ್ 1 ರ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ. ರಾಜ್ಯ ಕೇಂದ್ರದಿಂದ ಒದಗಿಸಲಾದ ವಿವರವಾದ ಕರಪತ್ರದ 25 ಸಾವಿರ ಪ್ರತಿಗಳನ್ನು ವಿತರಿಸಲಾಗಿದೆ.



ಶಿಕ್ಷಣ ಮಂತ್ರಿಗಳ ಜತೆ ಬಿಸಿಯೂಟ ನೌಕರರ ಸಂಘದ ಯಶಸ್ವಿ ಜಂಟಿ ಸಭೆ

ಯಮುನಾ ಗಾಂವ್ಕರ್

ಬಿಸಿಯೂಟ ನೌಕರರಿಂದ ಅಕ್ಟೋಬರ್ 3 ರಿಂದ ನಡೆಯಬೇಕಾದ ಅನಿರ್ದಿಷ್ಟ ಅವಧಿಯ ಮುಷ್ಕರದ ನೋಟೀಸ್ ಗೆ ಸ್ಪಂದಿಸಿದ ರಾಜ್ಯ ಸರ್ಕಾರವು ಇಂದು ರಾಜ್ಯ ಸರ್ಕಾರದ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಣ ಇಲಾಖೆಯ ಮಾನ್ಯ ಮಂತ್ರಿಗಳಾದ ಮಹೇಶ್ ರವರ ಅಧ್ಯಕ್ಷತೆಯಲ್ಲಿ ಸಿಐಟಿಯು ಸಂಘಟನೆ ಮತ್ತು ಇಲಾಖಾ ಅಧಿಕಾರಿಗಳ ಜೊತೆಗೆ ಜಂಟಿ ಸಭೆ ನಡೆಸಿತು. ಇಲ್ಲಿ ನಿವೃತ್ತಿ ಮತ್ತು ನಿವೃತ್ತಿ ವೇತನ, ದಸರಾ ಹಬ್ಬದ ರಜಾ ಅವಧಿಯ ಸಂಭಾವನೆಯನ್ನು ಕೊಡುವುದು ಮತ್ತು ಬೇಸಿಗೆ ರಜಾ ಅವಧಿಯ ಸಂಬಳ, ಕೆಲಸದ ಭದ್ರತೆ ಮತ್ತು ಅದರ ಪ್ರಾಮುಖ್ಯತೆ ಹಾಗೂ ಕೆಲಸದ ಅವಧಿ ಕುರಿತು ಸಿಐಟಿಯು ಸಂಘಟನೆ ಕೊಟ್ಟಿರುವ ಮೂರು ಮಾದರಿಯ ಪ್ರಸ್ತಾವನೆ ಮತ್ತು ಅದಕ್ಕೆ ತಕ್ಕಂತೆ ಶಾಸನಬದ್ಧವಾಗಿ ಕನಿಷ್ಟ ಕೂಲಿ ಹೆಚ್ಚಳದ ಕುರಿತು ಸಿಐಟಿಯು ಮುಂದಿಟ್ಟ ಬೇಡಿಕೆಗಳನ್ನು ಸಕಾರಾತ್ಮಕವಾಗಿ ಪರಿಶೀಲಿಸುವ ಕುರಿತು ಮಾನ್ಯ ಮಂತ್ರಿಗಳು ಬದ್ಧತೆಯನ್ನು ವ್ಯಕ್ತಪಡಿಸಿದ್ದಾರೆ.

ಅಲ್ಲದೇ ಸಿಐಟಿಯು ಬೇಡಿಕೆಯಲ್ಲಿ ಒತ್ತಾಯಿಸಿದಂತೆ ರಾಜ್ಯ ಸರ್ಕಾರವು ಕೇಂದ್ರ ಎನ್.ಡಿ.ಎ ಸರ್ಕಾರವನ್ನು ಒತ್ತಾಯಿಸಿ ಈ ಕೆಳಗಿನ ಬೇಡಿಕೆಗಳಿಗಾಗಿ ಕೇಂದ್ರ ಸರ್ಕಾರ ಮುಂದಾಗಬೇಕೆಂದು ಪತ್ರ ಕಳಿಸಿ ರಾಜ್ಯ ಸರ್ಕಾರದ ನಿಯೋಗ ಹೋಗಲಿಕ್ಕೆ ಕೂಡ ಚಿಂತನೆ ನಡೆಸಿದ್ದಾರೆ. ಹೋರಾಟದ ಒತ್ತಾಯಕ್ಕೆ ಮಣಿದು ಬಂದಂಥ ನಿವೃತ್ತಿ ಮತ್ತು ಕೆಲಸದ ಅವಧಿಯಲ್ಲಾಗುವ ಅಪಘಾತ ಅನಾರೋಗ್ಯ ಕುರಿತು ಕೆಲವು ಸುತ್ತೋಲೆಗಳಲ್ಲಿಯ ಲೋಪದೋಷ ನಿವಾರಿಸಿ ಮಾರ್ಪಡಿಸಿದ ಸುತ್ತೋಲೆ ಹೊರಡಿಸಲು ಇಲಾಖೆ ಒಪ್ಪಿದೆ.

ಕೇಂದ್ರ ಸರ್ಕಾರ ತನ್ನ ಅನುದಾನದಲ್ಲಿ ಕಡಿತ ಮಾಡಿದ್ದರಿಂದ 60:40 ಅನುಪಾತದಲ್ಲಿ ಬಜೆಟ್ ಹಂಚಿಕೆ ಮಾಡುತ್ತಿರುವುದರಿಂದ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬಿಸಿಯೂಟ ಯೋಜನೆಯೂ ಸಂಕಷ್ಟದಲ್ಲಿದೆ. ಮಾತ್ರವಲ್ಲ ಕೇಂದ್ರ ಸರ್ಕಾರ ತಾನೇ ಘೋಷಿಸಿದ ಅನುಪಾತದ ವಿಧಾನದಲ್ಲೂ ಬಿಸಿಯೂಟ ನೌಕರರಿಗೆ ಸಂಭಾವನೆ ಅಥವಾ ಕೂಲಿ ಅಥವಾ ಗೌರವಧನ ನೀಡಿಲ್ಲ. ಹಾಗಾಗಿ ಸಂಘಟನೆಯ ಪರವಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ರಾಜ್ಯ ಸರ್ಕಾರದ ಮೂಲಕ ಮನವಿ ಮಾಡಲಾಗಿದೆ.

“ಅಕ್ಷರದಾಸೋಹ” ಬಿಸಿ ಅಡುಗೆಯವರಿಗೆ ಕೇಂದ್ರ ಸರ್ಕಾರ 2010 ರಿಂದ ನೈಯಾಪೈಸೆಯನ್ನೂ ಏರಿಸಿಲ್ಲ. ಇಂದಿನ ವಿಪರೀತ ಬೆಲೆ ಏರಿಕೆ ದಿನಗಳಲ್ಲಿ ಈಗ ಪಡೆಯುತ್ತಿರುವ ‘ಸಂಭಾವನೆ’ ಇವರ ದೈನಂದಿನ ಬದುಕಿಗೆ ಏನಕ್ಕೂ ಸಾಲದು. ಆದ್ದರಿಂದ, 1) ಈ ಬಿಸಿಯೂಟ ಸಿಬ್ಬಂದಿಗಳ ಸಂಭಾವನೆಯನ್ನು ಇಂದಿನ ದಿನಮಾನಕ್ಕೆ ಯೋಗ್ಯವಾದಂತೆ ಹೆಚ್ಚಿಸುವ, 2) 45ನೇ ಭಾರತೀಯ ಕಾರ್ಮಿಕರ ಸಮ್ಮೇಳನದ ಶಿಪ್ಪಾರಸ್ಸಿನಂತೆ ಈ ನೌಕರರಿಗೆ ಕನಿಷ್ಠ ಕೂಲಿ ಮತ್ತು ಸಾಮಾಜಿಕ ಭದ್ರತೆ, 3) ಇನ್ನಿತರೇ ಸೇವಾ ಸೌಲಭ್ಯ ನೀಡಬೇಕೆಂದು, 4) ಹಿಂದಿನ ಸರ್ಕಾರವು ಸಂಭಾವನೆ ಹೆಚ್ಚಿಸುವ ಕುರಿತು ಆದೇಶಿಸಿದ್ದನ್ನು ಜಾರಿ ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗಿದೆ.

ಸಂಘಟನೆಯ ರಾಜ್ಯ ಸಮಿತಿ ಅಧ್ಯಕ್ಷರಾದ ಎಸ್. ವರಲಕ್ಷ್ಮಿ, ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತ, ಸಿಐಟಿಯು ರಾಜ್ಯ ಕಾರ್ಯದರ್ಶಿ ಸುನಂದಾ ಎಚ್. ಎಸ್, ಯೂನಿಯನ್ ರಾಜ್ಯ ಸಮಿತಿ ಉಪಾಧ್ಯಕ್ಷರಾದ ಯಮುನಾ ಗಾಂವ್ಕರ್, ಮುಂತಾದವರು ಹಾಜರಿದ್ದರು. ಈ ಸಭೆಯಲ್ಲಿ ಇಲಾಖಾ ಪ್ರಿನ್ಸಿಪಲ್ ಸೆಕ್ರೆಟರಿ ಶಾಲಿನಿ ರಜನೀಶ್, ಜಂಟಿ ನಿರ್ದೇಶಕರಾದ ಮಾರುತಿಯವರು ಮತ್ತು ಉಳಿದ ಅಧಿಕಾರಿಗಳು ಹಾಜರಿದ್ದರು.

ಕೇಂದ್ರ ಸಚಿವರಾದ ಅನಂತಕುಮಾರ ಬೆಂಗಳೂರು ರವರ ನಿವಾಸದ ಎದುರು ನಡೆಯಬೇಕಾದ ಮುಷ್ಕರ ವನ್ನು ಮಾನ್ಯ ಮಂತ್ರಿ ಅನಂತಕುಮಾರ ರವರ ಅನಾರೋಗ್ಯ ನಿಮಿತ್ತ ಮತ್ತು ರಾಜ್ಯ ಶಿಕ್ಷಣ ಮಂತ್ರಿಗಳ ಜಂಟಿ ಸಭೆಗೆ ಆಹ್ವಾನ ಮತ್ತು ಕೋರಿಕೆ ಮೇರೆಗೆ ಮುಂದೂಡಲಾಗಿತ್ತು.

ಮುಸಿಮರು ಕಳ್ಳರ, ಉಗ್ರಗಾಮಿಗಳ ತರ ಕಾಣುತ್ತಾರಾ ಪೋಲೀಸರಿಗೆ?

ಸದಾ ಕ್ರಿಯಾಶೀಲವಾಗಿ ಜನರ ಜೊತೆಗೆ ಬೆರೆಯುವ dyfi ಮುಖಂಡ ರಿಯಾಜ್, ಮತ್ತವನ ತಮ್ಮನ ಮೇಲೆ ವೇಣೂರು ಪೋಲೀಸರು ನಿನ್ನೆ ರಾತ್ರೆ ಅಮಾನವೀಯವಾಗಿ ಹಲ್ಲೆ ನಡೆಸಿದ್ದಾರೆ. ವಾರದ ಹಿಂದೆಯಷ್ಟೆ ಮದುವೆಯಾಗಿದ್ದ ಮದುಮಗ ರಿಯಾಜ್, ಅಂಗಡಿ ಮುಚ್ಚಿ ತನ್ನ ತಮ್ಮನೊಂದಿಗೆ ಬೈಕ್ ನಲ್ಲಿ ಮೂಡಬಿದ್ರೆಯಿಂದ ಹೆಂಡತಿ ಮನೆಗೆ ತೆರಳುವಾಗ ವೇಣೂರು ಬಳಿ ಗಸ್ತಿನಲ್ಲಿದ್ದ ಏಳೆಂಟು ಪೊಲೀಸರು ತಡೆದಿದ್ದಾರೆ. ದಾಖಲೆ ಕೇಳಿದ್ದಾರೆ. ರಿಯಾಜ್ ಡ್ರೈವಿಂಗ್ ಲೈಸನ್ಸ್ ನೀಡಿದ್ದಾರೆ. ವಾಹನದ ದಾಖಲೆ ಮನೆಯಲ್ಲಿದ್ದು ಬೆಳಿಗ್ಗೆ ತರುವುದಾಗಿ ಹೇಳಿದಾಗ, ತಾರನಾಥ, ರಂಜಿತ್ ಮುಂತಾದ ಪೊಲೀಸರು ಅವಾಚ್ಯವಾಗಿ ನಿಂದಿಸಿದ್ದಾರೆ. ರಿಯಾಜ್ ಎಂಬ ಹೆಸರು ನೋಡಿ "ಬ್ಯಾರಿ ನೀನು ಕಳ್ಳತನಕ್ಕೇ ಹೋಗುತ್ತಿದ್ದೀಯಾ, ಉಗ್ರಗಾಮಿ ತರ ಕಾಣುತ್ತೀರಾ" ಎಂದು ನಿಂದಿಸಿದ್ದಾರೆ. dyfi ನಾಯಕನಾಗಿ ಸಮಾಜದಲ್ಲಿ ಗುರುತಿರುವ ರಿಯಾಜ್ ಸಹಜವಾಗಿಯೇ ಈ ನಿಂದನೆಯ ಬಗ್ಗೆ ಆಕ್ಷೇಪ ಎತ್ತಿದ್ದಾರೆ. ಅಷ್ಟಕ್ಕೆ ಉಗ್ರಾವತಾರ ತಾಳಿದ ಪೊಲೀಸರು "ಮುಸ್ಲಿಮನಿಗೆ ಇಷ್ಟು ಅಹಂಕಾರವಾ" ಎಂದು ಹಲ್ಲೆ ನಡೆಸಿದ್ದಾರೆ. ಅದೇ ಸಂದರ್ಭ ಅದೇ ದಾರಿಯಲ್ಲಿ ಖಾಸಗಿ ವಾಹನದಲ್ಲಿ ಕುಟುಂಬ ಸಮೇತ ತೆರಳುತ್ತಿದ್ದ ಇನ್ಸ್ ಪೆಕ್ಟರ್ ನಾಗೇಶ್ ಕದ್ರಿ ಪೊಲೀಸರಲ್ಲಿ "ವಿಷಯ ಏನು?" ಎಂದು ಕೇಳಿದ್ದಾರೆ. "ಪೊಲೀಸರಿಗೆ ಎದುರು ಮಾತಾಡುತ್ತಾರೆ" ಎಂದು ಹೇಳಿದ್ದಾರೆ. ನಾಗೇಶ್ ಕದ್ರಿ "ಒದ್ದು ಒಳಗೆ ಹಾಕಿ" ಎಂದು ಆದೇಶಿಸಿದ್ದಾರೆ.

ಮುಂದೆ ನಡೆದದ್ದು ಪೊಲೀಸರ ಭಯಾನಕ ಗೂಂಡಾಗಿರಿ. ಅಣ್ಣ ತಮ್ಮಂದಿರನ್ನು ವಾಹನದಲ್ಲೇ ಹಲ್ಲೆ ನಡೆಸುತ್ತಾ ಠಾಣೆಗೆ ಎಳೆದೊಯ್ಯಲಾಗಿದೆ. ಅಲ್ಲಿ ಹದಿನೈದಕ್ಕೂ ಹೆಚ್ಚು ಪೊಲೀಸರು ಲಾಕಪ್ ನಲ್ಲಿ ಕೂಡಿ ಹಾಕಿ ಸಿನೆಮಾ ಮಾದರಿಯಲ್ಲಿ ಹಲ್ಲೆ ನಡೆಸಿದ್ದಾರೆ. ಹಲ್ಲೆಯ ಜೊತೆಗೆ ಬ್ಯಾರಿಗಳಿಗೆ ಅವಾಚ್ಯವಾಗಿ ಬಯ್ಯುತ್ತಲೇ ಹೋಗಿದ್ದಾರೆ. ಕೊನೆಗೆ ಪೊಲೀಸರಿಗೆ ಹಲ್ಲೆ ನಡೆಸಿದ ಆರೋಪವನ್ನು ಹೊರಿಸಿ FIR ದಾಖಲಿಸಿದ್ದಾರೆ. ಅರ್ಧರಾತ್ರಿ ಹೊತ್ತು ನಿರ್ಜನ ಪ್ರದೇಶದಲ್ಲಿ ಏಳೆಂಟು ಪೊಲೀಸರ ತಂಡಕ್ಕೆ ಹಲ್ಲೆ ನಡೆಸಲು ಬಡಕಲು ಶರೀರದ ರಿಯಾಜ್ ಮತ್ತು ಆತನ ತಮ್ಮ ತೆಲುಗು ಸಿನೆಮಾದ ಹೀರೋಗಳಲ್ಲ.

ಮೊನ್ನೆ ಅಶ್ರಫ್ ಸಾಲೆತ್ತೂರು, ಇಂದು ರಿಯಾಜ್ ಮಾಂತೂರು... ಮುಸ್ಲಿಮರಾದರೆ ಹೇಗೂ ನಡೆಸಿಕೊಳ್ಳಬಹುದಾ? ಮುಸ್ಕಿಮರಾದರೆ ಸಾಕು ನಿಮಗೆ ಕಳ್ಳ, ಉಗ್ರಗಾಮಿ, ದೇಶದ್ರೋಹಿಗಳಾಗಿ ಕಾಣುವುದಾದರೆ, ನಿಮ್ಮನ್ನು ಪೊಲೀಸರು ಎಂದು ಒಪ್ಪಿಕೊಳ್ಳುವುದು ಹೇಗೆ ?

ಸರಕಾರ ಉತ್ತರಿಸುತ್ತದಾ ?

– ಅಬ್ದುಲ್ ಮುನೀರ್

ದೇವರನ್ನು ಮೈಲಿಗೆಯಿಂದ ಮುಕ್ತಗೊಳಿಸಿದ ಸುಪ್ರೀಂ ತೀರ್ಪು

ಅತಿಥಿ ಅಂಕಣ



ಪ್ರೊ. ಟಿ. ಆರ್. ಚಂದ್ರಶೇಖರ

ಲಿಂಗ ಸಮಾನತೆ ಎನ್ನುವುದು ಪಶ್ಚಿಮದ ಸಂಸ್ಕೃತಿಯ ಸಂಗತಿಯೂ ಅಲ್ಲ ಮತ್ತು ಅಧಾರ್ಮಿಕ ಸಂಗತಿಯೂ ಅಲ್ಲ. ನಮ್ಮ ಪರಂಪರೆಯಲ್ಲಿನ ಅವೈದಿಕ ಧಾರೆಯು ಸಮಾನತೆಯನ್ನು ಅನಾದಿ ಕಾಲದಿಂದಲೂ ಪ್ರತಿಪಾದಿಸಿಕೊಂಡು ಬಂದಿದೆ. ಆದರೆ ವೈದಿಕ ಮಾತ್ರ ಪ್ರಧಾನ ಪರಂಪರೆಯೆಂದು ಆಕ್ರಮಣಕಾರಿಯಾಗಿ ಬಲಪಂಥೀಯ ಶಕ್ತಿಗಳು ಇದನ್ನು ಜನರ ಮೇಲೆ ಹೇರುತ್ತಾ ಬಂದ ಕಾರಣವಾಗಿ ಸಮಾನತೆ ಮೌಲ್ಯವನ್ನು ಪ್ರತಿಪಾದಿಸುವ ನಮ್ಮ ದೇಶದ ಪರ್ಯಾಯ ಪರಂಪರೆಗಳು ಮೂಲೆ ಗುಂಪಾಗಿಬಿಟ್ಟಿವೆ. ಅನೇಕರು ತಪ್ಪಾಗಿ ಭಾವಿಸಿರುವಂತೆ ಲಿಂಗ ಸಮಾನತೆ ಎನ್ನುವುದು ಮಹಿಳೆಯರಿಗೆ ಮಾತ್ರ ಸಂಬಂಧಿಸಿದ ಸಂಗತಿಯಲ್ಲ.

ಸರ್ವೋಚ್ಚ ನ್ಯಾಯಾಲಯದ ಐವರು ನ್ಯಾಯಾಧೀಶರ ಸಂವಿಧಾನ ಪೀಠವು(ಸೆಪ್ಟೆಂಬರ್ 28, 2018) ಕೇರಳದ ಶಬರಿಮಲೆ ದೇವಸ್ಥಾನದಲ್ಲಿ 10 ರಿಂದ 50 ವರ್ಷಗಳ ವಯೋಮಾನದ ಮಹಿಳೆಯರಿಗೆ ಪ್ರವೇಶವನ್ನು ನಿಷೇಧಿಸಿದ್ದ ಕ್ರಮವನ್ನು ಅಸಂವಿಧಾನಿಕವೆಂದು, ತಾರತಮ್ಯದಿಂದ ಕೂಡಿದೆಯೆಂದು ಮತ್ತು ಕಾನೂನುಗಳ ಉಲ್ಲಂಘನೆಯೆಂದು ತೀರ್ಪು ನೀಡಿ ಎಲ್ಲ ವಯೋಮಾನದ ಮಹಿಳೆಯರ ಪ್ರವೇಶಕ್ಕೆ ದೇವಾಲಯವನ್ನು ಮುಕ್ತಗೊಳಿಸಿದೆ. ಐವರು ನ್ಯಾಯಾಧೀಶರ ಪೀಠದಲ್ಲಿದ್ದ ಏಕೈಕ ಮಹಿಳಾ ನ್ಯಾಯಾಧೀಶರಾಗಿದ್ದ ನ್ಯಾಯಮೂರ್ತಿ ಶ್ರೀಮತಿ ಇಂದು ಮಲ್ಹೋತ್ರ ನೀಡಿದ ಭಿನ್ನಮತದ ತೀರ್ಪಿನಲ್ಲಿ ಧಾರ್ಮಿಕತೆ ಮತ್ತು ವೈಚಾರಿಕತೆ ಬೇರೆ ಬೇರೆ, ಧಾರ್ಮಿಕತೆ ಮತ್ತು ಸಮಾನತೆಯ ಹಕ್ಕಿಗೂ ಸಂಬಂಧವಿಲ್ಲವೆಂದು ವಾದಿಸುತ್ತಾ ದೇವಾಲಯಕ್ಕೆ ಮಹಿಳೆಯರ ಪ್ರವೇಶದ ನಿಷೇಧವನ್ನು ಸಮರ್ಥಿಸಿದ್ದಾರೆ. ಧಾರ್ಮಿಕತೆಯ ಸಂಗತಿಗಳಿಗೆ ಸಮಾನತೆಯ ಹಕ್ಕಿನ ಸಂವಿಧಾನದ ಪರಿಚ್ಛೇದ 14 ಇಲ್ಲಿಗೆ ಅನ್ವವಾಗುವುದಿಲ್ಲವೆಂದು ತಮ್ಮ ಭಿನ್ನಮತದ ತೀರ್ಪಿನಲ್ಲಿ ಹೇಳಿದ್ದಾರೆ. ಆದರೆ ಪೀಠದ ಉಳಿದ ನಾಲ್ಕು ನ್ಯಾಯಾಧೀಶರು ದೇವಾಲಯದ ಪ್ರವೇಶ ನಿಷೇಧವನ್ನು ಪುರುಷಶಾಹಿ ಕ್ರಮವೆಂದು, ತಾರತಮ್ಯದಿಂದ ಕೂಡಿದೆಯೆಂದು ತೀರ್ಪು ನೀಡಿದ್ದಾರೆ. ಶಬರಿಮಲೆ ದೇವಾಲಯಕ್ಕೆ ಮಹಿಳೆಯರ ಪ್ರವೇಶದ ನಿಷೇಧದ ಕ್ರಮವನ್ನು ಸರ್ವೋಚ್ಚ ನ್ಯಾಯಾಲಯದ ಐವರ ಸಂವಿಧಾನ ಪೀಠವು 4:1 ಬಹುಮತದ ತೀರ್ಪಿನಲ್ಲಿ ರದ್ದುಪಡಿಸಿದೆ. ಲಿಂಗ ಸಮಾನತೆ ಮೌಲ್ಯದ ದೃಷ್ಟಿಯಿಂದ ಇದೊಂದು ಚಾರಿತ್ರಿಕ ತೀರ್ಪಾಗಿದೆ. ಇದರ ಪರಿಣಾಮಗಳು ಕೇವಲ ಶಬರಿಮಲೆ ದೇವಾಲಯಕ್ಕೆ ಮಹಿಳೆಯರ ಪ್ರವೇಶಕ್ಕೆ ಹೇರಿದ್ದ ನಿಷೇಧದ ತೆರವಿಗೆ ಮಾತ್ರ ಸೀಮಿತವಾಗಿ ನಿಲ್ಲುವುದಿಲ್ಲ. ಈ ತೀರ್ಪು ನಮ್ಮ ಸಂವಿಧಾನದಲ್ಲಿನ ಪರಿಚ್ಛೇದ 14ರಲ್ಲಿ ಸಮಾನತೆ ಹಕ್ಕಿಗೆ ಮತ್ತಷ್ಟು ತೇಜಸ್ಸನ್ನು ತಂದುಕೊಟ್ಟಿದೆ. ಈ ತೀರ್ಪನ್ನು ಸರ್ವೋಚ್ಚ ನ್ಯಾಯಾಲಯವು ವ್ಯಭಿಚಾರಕ್ಕೆ ಸಂಬಂಧಿಸಿದಂತೆ ಭಾರತೀಯ ದಂಡ ಸಂಹಿತೆ ಭಾಗ 497ನ್ನು ಅಸಂವಿಧಾನಿಕವೆಂದು ರದ್ದುಪಡಿಸಿ ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ(ಸೆಪ್ಟೆಂಬರ್ 27, 2018)ಮತ್ತು ಅದೇ ಸಂಹಿತೆಯ ಭಾಗ 377ಕ್ಕೆ ಸಂಬಂಧಿಸಿದಂತೆ ಮೂರನೆಯ ಲಿಂಗಗಳ ಸ್ವಾತಂತ್ರ್ಯವನ್ನು ಎತ್ತಿಹಿಡಿದಿರುವ ಮತ್ತೊಂದು ತೀರ್ಪಿನ(ಸೆಪ್ಟೆಂಬರ್ 28, 2018)ಚೌಕಟ್ಟಿನಲ್ಲಿ ಪರಿಶೀಲಿಸುವ ಅಗತ್ಯವಿದೆ. ಈ ತೀರ್ಪುಗಳಲ್ಲಿ ನ್ಯಾಯಾಧೀಶರು ಅನೇಕ ಬಾರಿ ಪುರುಷಶಾಹಿಯ ಬಗ್ಗೆ ಟೀಕೆ ಮಾಡಿದ್ದಾರೆ. ಈ ತೀರ್ಪುಗಳು ಲಿಂಗ ಸಮಾನತೆಯ ಮೌಲ್ಯಕ್ಕೆ ಹೆಚ್ಚಿನ ಬಲತಂದು ಕೊಡುತ್ತವೆ. ವ್ಯಭಿಚಾರಕ್ಕೆ ಸಂಬಂಧಿಸಿದ ತೀರ್ಪಿನಲ್ಲಿ ಒಬ್ಬ ನ್ಯಾಯಾಧೀಶರು 'ಹೆಂಡತಿಯು ಗಂಡನ ಆಸ್ತಿಯಲ್ಲವೆಂದು ಮತ್ತು ಗಂಡನು ಹೆಂಡತಿಯ ಮಾಲೀಕನಲ್ಲವೆಂದು' ಘೋಷಿಸಿದ್ದಾರೆ. ಈ ಮೂರು ತೀರ್ಪುಗಳು ನಮ್ಮ ದೇಶದಲ್ಲಿ ಅನೇಕ ಶತಮಾನಗಳ ಕಾಲ ಮಹಿಳೆಯರು ಎದುರಿಸಿಕೊಂಡು ಬರುತ್ತಿದ್ದ ತಾರತಮ್ಯಗಳಿಗೆ ಒಂದು ರೀತಿಯ ಕೊನೆ ಹಾಡಿದಂತಾಗಿದೆ.

ಲಿಂಗ ಅಸಮಾನತೆ ಎನ್ನುವುದು ಭಾರತೀಯ ಪರಂಪರೆಯ ಒಂದು ಅವಿಭಾಜ್ಯ ಅಂಗ. ಈ ತಾರತಮ್ಯವಾದಿ ಪರಂಪರೆಯನ್ನು ಸಮರ್ಥಿಸುವ ಬಹುದೊಡ್ಡ ಜನವರ್ಗ ನಮ್ಮ ಸಮಾಜದಲ್ಲಿದೆ. ಮಹಿಳೆಯರಿಗೆ ದ'ೀವಾಲಂು'ುದ'ೂಳ'ಗ' ಪ್ರವೇಶವನ್ನು ನಿಷೇಧಿಸುವುದಕ್ಕೆ ಇರುವ ಒಂದೇ ಒಂದು ಕಾರಣವೆಂದರೆ ಆಕೆ ದೇಹದಲ್ಲಿ ಮಾಸಿಕವಾಗಿ ಉಂಟಾಗುವ ನೈಸರ್ಗಿಕ ಋತುಚಕ್ರ. ಇದನ್ನು ಮೈಲಿಗೆ, ಸೂತಕ ಎಂದು ಭಾರತೀಯ ಪರಂಪರೆ ಪರಿಗಣಿಸುತ್ತಾ ಬಂದಿದೆ. ಈ ಬಗೆಯ ಲಿಂಗ ವಿರೋಧಿ ಪರಂಪರೆಯ ಪರಿಣಾಮವಾಗಿ ನಮ್ಮ ಸಮಾಜದಲ್ಲಿ ಇಂದಿಗೂ ತೀವ್ರ ಲಿಂಗ ಅಸಮಾನತೆಯನ್ನು, ಹಿಂಸೆ, ದೌರ್ಜನ್ಯವನ್ನು ಮಹಿಳೆಯರು ಅನುಭವಿಸುತ್ತಾ ಬಂದಿದ್ದಾರೆ. ಉಹಾಹರಣೆಗೆ 2011ರಲ್ಲಿ ದೇಶದ ಒಟ್ಟು ಜನಸಂಖ್ಯೆಯಲ್ಲಿ(121.07ಕೋಟಿ) ಮಹಿಳೆಯರ(58.75 ಕೋಟಿ)ಪ್ರಮಾಣ ಶೇ.48.52. ಕರ್ನಾಟಕದಲ್ಲಿನ ಒಟ್ಟು ಜನಸಂಖ್ಯೆಯಲ್ಲಿ(610.95 ಲಕ್ಷ) ಮಹಿಳೆಯರ(301.28 ಲಕ್ಷ) ಪ್ರಮಾಣ 2011ರಲ್ಲಿ ಶೇ.49.31. ವೈಜ್ಞಾನಿಕವಾಗಿ ಜನಸಂಖ್ಯೆಯಲ್ಲಿ ಮಹಿಳೆಯರ ಪ್ರಮಾಣ ಅರ್ಧಕ್ಕಿಂತ ಅಧಿಕವಾಗಿರಬೇಕು. ಭಾರತದಲ್ಲಿ ಮಹಿಳೆಯರ ಕೊರತೆ 3.77 ಕೋಟಿಯಾದರೆ ಕರ್ನಾಟಕದಲ್ಲಿ ಅದು 8.38 ಲಕ್ಷ. ಇದು ಲಿಂಗ ತಾರತಮ್ಯದಿಂದ ಉಂಟಾಗಿರುವ ದುಷ್ಪರಿಣಾಮವಾಗಿದೆ. ಇದಕ್ಕೆ ಮುಖ್ಯ ಕಾರಣ ಪರಂಪರೆಯಿಂದ ಅನೂಚಾನವಾಗಿ ಗಟ್ಟಿಯಾಗಿ ಹರಿದುಕೊಂಡು ಬರುತ್ತಿರುವ ಲಿಂಗ ತಾರತಮ್ಯ ಮೌಲ್ಯ. ಈ ತಾರತಮ್ಯದ ಪರಿಣಾಮವಾಗಿ ಇಂದು ಮಹಿಳೆಯರು ಜನಿಸುವುದೇ ದುರ್ಲಬವಾಗಿದೆ. ಮಹಿಳೆಯರ ಮೇಲಿನ ದೌರ್ಜನ್ಯದ ಸುದ್ಧಿ ಪ್ರತಿ ದಿನದ ಸಂಗತಿಯಾಗಿಬಿಟ್ಟಿದೆ.



ಲಿಂಗ ಸಮಾನತೆಯ ಪ್ರತಿಪಾದಕರು ಇಂದು ಭಾರತೀಯ ಪರಂಪರೆಯನ್ನು ಹಾಳು ಮಾಡುತ್ತಿದ್ದಾರೆ ಎಂಬ ಟೀಕೆಯನ್ನು ಎದುರಿಸಬೇಕಾಗಿದೆ. ಲಿಂಗ ಸಮಾನತೆಯ ಬಗ್ಗೆ ಇರುವ ಸಿದ್ಧ ಟೀಕೆಯೆಂದರೆ ಅದು 'ಪಶ್ಚಿಮ'ದಿಂದ ಆಮದಾದ ಮೌಲ್ಯ ಎನ್ನುವುದಾಗಿದೆ. ನಮ್ಮ ದೇಶದ ಬಹುದೊಡ್ಡ ಸಾಂಸ್ಕೃತಿಕ ಸಂಘಟನೆಯ ಮುಖಂಡರೊಬ್ಬರೂ ಇಂದಿಗೂ ಮಹಿಳೆಯರ ಕಾರ್ಯಕ್ಷೇತ್ರವೇನಿದ್ದರೂ ಮನೆ, ಕುಟುಂಬ ಮತ್ತು ಸಂಸಾರ ಎಂದು ಬೋಧಿಸುತ್ತಿದ್ದಾರೆ. ನೈಸರ್ಗಿಕ ಋತುಚಕ್ರದ ಕಾರಣವಾಗಿ ಮಹಿಳೆಯರನ್ನು ಮೈಲಿಗೆ, ಸೂತಕ ಎಂದು ಪರಿಗಣಿಸುವುದು ವೈಜ್ಞಾನಿಕ ಕ್ರಮ ಎಂದು ಇದನ್ನು ಸಮರ್ಥಿಸುವ ಧಾರ್ಮಿಕ ಮುಖಂಡರು ನಮ್ಮ ಸಮಾಜದಲ್ಲಿದ್ದಾರೆ. ಆ ಸಮಯದಲ್ಲಿ ಅವರು ರಕ್ತಸ್ರಾವಕ್ಕೆ ಒಳಗಾಗುವುದರಿಂದ ಅವರಿಗೆ ವಿಶ್ರಾಂತಿಯ ಅಗತ್ಯವಿರುತ್ತದೆ. ಆದ್ದರಿಂದ ಅವರನ್ನು ಮೂರುದಿನಗಳ ಕಾಲ ಮೈಲಿಗೆಯೆಂದು ಮನೆಯ ಒಂದು ಮೂಲೆಯಲ್ಲಿ ಕೂರಿಸುವುದು ವೈಜ್ಞಾನಿಕ ಕ್ರಮವೆಂದು ನಮ್ಮ ರಾಜ್ಯದ ಪ್ರಸಿದ್ಧ ಪ್ರವಚನಕಾರರೊಬ್ಬರು ತಮ್ಮ ಅಂಕಣದಲ್ಲಿ ಬರೆದಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇಂದು ಪ್ರತಿಯೊಂದು ಅಂಧಶ್ರದ್ಧೆಯನ್ನು ವೈಜ್ಞಾನಿಕವೆಂದು ವಿಕೃತ ವಿವರಣೆ ನೀಡಿ ಸಮರ್ಥಿಸಿಕೊಳ್ಳುವ ಗೀಳು ವ್ಯಾಪಕವಾಗಿದೆ. ವೈಜ್ಞಾನಿಕ ಎಂದು ಬಿಟ್ಟರೆ ಅದೊಂದು ಸರ್ವಸಮ್ಮತ ಸಂಗತಿ ಎನ್ನುವ ವಾತಾವರಣವನ್ನು ಸೃಷ್ಟಿಸಲಾಗಿದೆ.

ಇಪ್ಪತ್ತೊಂದನೆಯ ಶತಮಾನದಲ್ಲಿಯೂ ಸಮಾನತೆಯು ಧಾರ್ಮಿಕ ಹಕ್ಕಲ್ಲವೆಂದು ವಾದಿಸುವವರು ಯಾವ ಧರ್ಮದ ಬಗ್ಗೆ ಮಾತನಾಡುತ್ತಿದ್ದಾರೆ ಎಂಬುದು ತಿಳಿಯುವುದಿಲ್ಲ. ಸಮಾನತೆಯನ್ನು ಒಪ್ಪಿಕೊಳ್ಳದ ಧರ್ಮವು ಯಾವ ಸೀಮೆಯ ಧರ್ಮ? ಇದು ನಿಜವಾಗಿ ಧರ್ಮದ ಸಮಸ್ಯೆಯಲ್ಲ. ಧರ್ಮದ ಹೆಸರಿನಲ್ಲಿ ದಂಧೆ ನಡೆಸುತ್ತಿರುವ ಮಧ್ಯವರ್ತಿಗಳ ಸಮಸ್ಯೆ. ಅರ್ಥಾತ್ ಪುರೋಹಿತಶಾಹಿಯ ಸಮಸ್ಯೆ. ಈ ಕಾರಣಕ್ಕೆ ಲಿಂಗಾಯತ ಧರ್ಮ ಸ್ಥಾಪಕ ಬಸವಣ್ಣ ದೇವರು ಮತ್ತು ಭಕ್ತರ ನಡುವಿನ ಮಧ್ಯವರ್ತಿಗಳನ್ನು ತೆಗೆದುಹಾಕಿ ಮಹಿಳೆಯರನ್ನು ಸೇರಿಸಿಕೊಂಡು ಸಕಲರಿಗೂ ಲಿಂಗಧಾರಣೆಯ, ಆರಾಧನೆಯ ಹಕ್ಕನ್ನು 12ನೆಯ ಶತಮಾನದಲ್ಲಿಯೇ ನೀಡಿದ. ಸೂತಕ, ಮೈಲಿಗೆ ಮುಂತಾದ ಅಂಧಶ್ರದ್ಧೆಗಳನ್ನು ಲಿಂಗಾಯತ ಧರ್ಮ ತಿರಸ್ಕರಿಸಿದೆ.

ಶಬರಿಮಲೆ ವಿವಾದದಲ್ಲಿ ಸುಪ್ರೀಮ್ ಕೋರ್ಟಿನಲ್ಲಿ ಮಹಿಳೆಯರಿಗೆ ದೇವಾಲಯ ಪ್ರವೇಶವನ್ನು ಪ್ರತಿಪಾದಿಸುತ್ತಾ ನ್ಯಾಯವಾದಿ ಇಂದಿರಾ ಜೈಸಿಂಗ್ ಹೇಳಿದಂತೆ ಮಹಿಳೆಯರಿಗೆ ದೇವಾಲಯ ಪ್ರವೇಶದ ನಿಷೇಧವು ಒಂದು ರೀತಿಯ ಅಸ್ಪೃಶ್ಯತೆಯ ಆಚರಣೆಗೆ ಸಮ. ಸುಪ್ರೀಮ್ ಕೋರ್ಟಿನ ಬಹುಮತದ ತೀರ್ಪಿನಲ್ಲಿ ಹೇಳಿರುವಂತೆ ಪ್ರವೇಶ ನಿಷೇಧವು ಪುರುಷಶಾಹಿಯ ಒಂದು ಸಂಕೇತ. ದೇವಾಲಯ ಪ್ರವೇಶ ನಿಷೇಧವನ್ನು ಅಸಂವಿಧಾನಿಕವೆಂದು ತೀರ್ಪು ನೀಡಿ ಸರ್ವೋಚ್ಚ ನ್ಯಾಯಾಲಯವು ಪುರುಷಶಾಹಿಗೆ ಒಂದು ರೀತಿಯಲ್ಲಿ ಕೊನೆ ಹಾಡಿದೆ. ಬಲಪಂಥೀಯ ಶಕ್ತಿಗಳಿಗೆ ಇದು ನುಂಗಲಾರದ ತುತ್ತಾಗಿ ಬಿಟ್ಟಿದೆ. ಏಕೆಂದರೆ ಇದನ್ನು ನುಂಗಿದರೆ ಇನ್ನು ಮುಂದೆ ಪರಂಪರೆಯ ರಕ್ಷಕರೆಂದು ತಮ್ಮನ್ನು ತಾವು ವರ್ಣಿಸಿಕೊಳ್ಳುವುದು ಅವರಿಗೆ ಕಷ್ಟವಾಗುತ್ತದೆ ಮತ್ತು ನಮ್ಮ ಪರಂಪರೆಯಲ್ಲಿ ಹುಳುಕುಗಳಿವೆ ಎನ್ನುವುದನ್ನು ಒಪ್ಪಿಕೊಂಡಂತಾಗುತ್ತದೆ. ಇದಕ್ಕೆ ಪ್ರತಿಯಾಗಿ ಉಗುಳಿದರೆ ನ್ಯಾಯಾಲಯದ ತೀರ್ಪಿಗೆ ಅಗೌರವ ತೋರಿಸಿದಂತಾಗುತ್ತದೆ ಮತ್ತು ಆಧುನಿಕತೆಗೆ ಬೆನ್ನು ತೋರಿಸಿದಂತಾಗುತ್ತದೆ. ಇದು ಇಂದಿನ ಕೇಂದ್ರದಲ್ಲಿರುವ ಸರ್ಕಾರದ ಸ್ಥಿತಿಯಾಗಿದೆ. ಈ ಕಾರಣಕ್ಕೆ ಅದು ಭಾರತೀಯ ದಂಡ ಸಂಹಿತೆಯ ಭಾಗಗಳಾದ 377ಕ್ಕೆ ಸಂಬಂಧಿಸಿದ ವಿವಾದಗಳಲ್ಲಿ ನ್ಯಾಯಾಲಯಕ್ಕೆ ತನ್ನ ಅಭಿಪ್ರಾಯ ನೀಡಲಿಲ್ಲ. ಆದರೆ ವ್ಯಭಿಚಾರದ ಸಂಗತಿಯಾದ ಭಾಗ 497 ಕ್ಕೆ ಸಂಬಂಧಿಸಿದಂತೆ ವಿವಾಹದ ಪಾವಿತ್ರ್ಯವನ್ನು ರಕ್ಷಿಸುವ ದೃಷ್ಟಿಯಿಂದ ಐ ಪಿ ಸಿ ಯ ಭಾಗ 497 ಇರಬೇಕೆಂದು ಕೇಂದ್ರ ಸರ್ಕಾರವು ನ್ಯಾಯಾಲಯಕ್ಕೆ ತನ್ನ ಅಭಿಪ್ರಾಯವನ್ನು ಸಲ್ಲಿಸಿತ್ತು. ಆದರೆ ಈ ತೀರ್ಪುಗಳ ಬಗ್ಗೆ ಅದಕ್ಕೆ ಒಪ್ಪಿಗೆಯಿಲ್ಲ ಎಂಬುದನ್ನು ಸೂಕ್ಷ್ಮವಾಗಿ ಅದರ ಮೂಲ ಸಂಸ್ಥೆಯ ಸಿದ್ಧಾಂತವನ್ನು ಪರಿಶೀಲಿಸಿದರೆ ತಿಳಿಯುತ್ತದೆ.

ಲಿಂಗ ಸಮಾನತೆ ಎನ್ನುವುದು ಪಶ್ಚಿಮದ ಸಂಸ್ಕೃತಿಯ ಸಂಗತಿಯೂ ಅಲ್ಲ ಮತ್ತು ಅಧಾರ್ಮಿಕ ಸಂಗತಿಯೂ ಅಲ್ಲ. ನಮ್ಮ ಪರಂಪರೆಯಲ್ಲಿನ ಅವೈದಿಕ ಧಾರೆಯು ಸಮಾನತೆಯನ್ನು ಅನಾದಿ ಕಾಲದಿಂದಲೂ ಪ್ರತಿಪಾದಿಸಿಕೊಂಡು ಬಂದಿದೆ. ಆದರೆ ವೈದಿಕ ಮಾತ್ರ ಪ್ರಧಾನ ಪರಂಪರೆಯೆಂದು ಆಕ್ರಮಣಕಾರಿಯಾಗಿ ಬಲಪಂಥೀಯ ಶಕ್ತಿಗಳು ಇದನ್ನು ಜನರ ಮೇಲೆ ಹೇರುತ್ತಾ ಬಂದ ಕಾರಣವಾಗಿ ಸಮಾನತೆ ಮೌಲ್ಯವನ್ನು ಪ್ರತಿಪಾದಿಸುವ ನಮ್ಮ ದೇಶದ ಪರ್ಯಾಯ ಪರಂಪರೆಗಳು ಮೂಲೆ ಗುಂಪಾಗಿಬಿಟ್ಟಿವೆ. ಅನೇಕರು ತಪ್ಪಾಗಿ ಭಾವಿಸಿರುವಂತೆ ಲಿಂಗ ಸಮಾನತೆ ಎನ್ನುವುದು ಮಹಿಳೆಯರಿಗೆ ಮಾತ್ರ ಸಂಬಂಧಿಸಿದ ಸಂಗತಿಯಲ್ಲ. ಅದು ಪುರುಷರನ್ನು ಸೇರಿಸಿಕೊಂಡು ಇಡೀ ಸಮಾಜಕ್ಕೆ ಸಂಬಂಧಿಸಿದ ಸಂಗತಿ. ಇದನ್ನು ವಿಶ್ವಬ್ಯಾಂಕು ಸ್ಮಾರ್ಟ್ ಎಕನಾಮಿಕ್ಸ್ ಎಂದು ಕರೆದಿದೆ. ಅಸಮಾನತೆಯು ಆರ್ಥಿಕ ಅಭಿವೃದ್ಧಿಯನ್ನು ಕುಂಠಿತಗೊಳಿಸಬಹುದು. ಮಹಿಳೆಯರ ಸಂಭವನೀಯ ಉತ್ಪಾದನಾ ಸಾಮರ್ಥ್ಯವು ಅಭಿವೃದ್ಧಿಗೆ ಪೂರ್ಣವಾಗಿ ದೊರೆಯದೆ ಹೋಗಬಹುದು. ಅಸಮಾನತೆ, ಅಸಹಿಷ್ಣುತೆ, ಅಸ್ವಸ್ಥತೆ ಮುಂತಾದವು ಅಭಿವೃದ್ಧಿ ವಿರೋಧಿ ಸಂಗತಿಗಳು. ಸರ್ವೋಚ್ಚ ನ್ಯಾಯಾಲಯವು ಶಬರಿಮಲೆ ದೇವಾಲಯದ ಮಹಿಳೆಯರ ಪ್ರವೇಶದ ನಿಷೇಧಕ್ಕೆ, ವ್ಯಭಿಚಾರದ ಐಪಿಸಿ 497 ಮತ್ತು ಮೂರನೆಯ ಲಿಂಗಿಗಳ ಐಪಿಸಿ 377 ಕ್ಕೆ ಸಂಬಂಧಿಸಿದ ತೀರ್ಪುಗಳಲ್ಲಿ ಲಿಂಗ ಸಮಾನತೆಯ ಜೊತೆಗೆ ಪರಿಚ್ಛೇದ 21ರ ಬದುಕುವ ಹಕ್ಕು, ಕಳೆದ ವರ್ಷದ ಖಾಸಗಿತನದ ಹಕ್ಕುಗಳನ್ನು ಪರಿಗಣನೆಗೆ ತೆಗೆದುಕೊಂಡಿದೆ. ಸಂವಿಧಾನದ ಪರಿಚ್ಛೇದ 21ರ ಬದುಕುವ ಹಕ್ಕನ್ನು ಸರ್ವೋಚ್ಚ ನ್ಯಾಯಲಯವು ವಿಸ್ತೃತ ವ್ಯಾಪ್ತಿಯಲ್ಲಿ ವ್ಯಾಖ್ಯಾನ ಮಾಡಿದೆ. ಬದುಕುವ ಹಕ್ಕು ಎಂದರೆ ಹೇಗಾದರೂ ಬದುಕುವುದು ಎಂದು ಅರ್ಥವಲ್ಲ. ಸಂವಿಧಾನದ ಪರಿಚ್ಛೇದ 21ರ ಬದುಕುವ ಹಕ್ಕು ಘನತೆಯ ಬದುಕನ್ನು ಒಳಗೊಂಡಿದೆ. ಶಬರಿಮಲೆ ದೇವಾಲಯದಲ್ಲಿನ ಮಹಿಳೆಯರ ಪ್ರವೇಶದ ಮೇಲಿನ ನಿಷೇಧ ಮತ್ತು ವ್ಯಭಿಚಾರಕ್ಕೆ ಸಂಬಂಧಿಸಿದ ಐಪಿಸಿ 491 ಹಾಗೂ ಮೂರನೆಯ ಲಿಂಗಿಗಳಿಗೆ ಸಂಬಂಧಿಸಿದ ಐಪಿಸಿ 377 ಮಹಿಳೆಯರ ಘನತೆಗೆ ದಕ್ಕೆ ಉಂಟು ಮಾಡುತ್ತವೆ ಎಂಬುದು ನ್ಯಾಯಾಲಯದ ಭಾವನೆಯಾಗಿದೆ. ಸರ್ವೋಚ್ಚ ನ್ಯಾಯಾಲಯದ ಪುರೋಗಾಮಿ ಧೋರಣೆಯಿಂದ ಲಿಂಗ ಸಮಾನತೆಯ ಮೌಲ್ಯಕ್ಕೆ ಹೆಚ್ಚಿನ ಒತ್ತು ದೊರೆಯುವಂತಾಗಿದೆ. ಈ ಬಗೆಯ ಲಿಂಗಸ್ಪಂದಿ ನಿಲುವನ್ನು ಅದು ಮುಂದುವರಿಸಲಿ ಎಂದು ಹಾರೈಸೋಣ. ●

ಉತ್ತರ ಪ್ರದೇಶದ ಕಾನೂನುರಹಿತ ಪೋಲೀಸ್ ಪಡೆ

ಮಾರ್ಚ್ 2017ರಿಂದ 1500ಕ್ಕೂ ಹೆಚ್ಚು ಎನ್‌ಕೌಂಟರ್‌ಗಳಾಗಿವೆ. ಅವುಗಳಲ್ಲಿ 66 ಮಂದಿ ಕೊಲ್ಲಲ್ಪಟ್ಟಿದ್ದಾರೆ, 700 ಮಂದಿ ಗಾಯಗೊಂಡಿದ್ದಾರೆ. ಇವರಲ್ಲಿ ಬಹುಪಾಲು ಮುಸ್ಲಿಮರು, ದಲಿತರು ಮತ್ತು ಬಡವರು. ಅದರಲ್ಲೂ, ಮುಸ್ಲಿಮರು. ಒಂದು ಅಂದಾಜಿನ ಪ್ರಕಾರ ಕೊಲೆಯಾದವರಲ್ಲಿ 24 ಮಂದಿ ಮುಸ್ಲಿಮರು. ಈ ಪ್ರಭುತ್ವ–ಪ್ರಾಯೋಜಿತ ರಕ್ತಪಾತವನ್ನು ತಡೆಯಲು ಸುಪ್ರಿಂ ಕೋರ್ಟ್ ಮಧ್ಯಪ್ರವೇಶಿಸಬೇಕು.



ಪ್ರಕಾಶ ಕಾರಟ್

ಲಖನೌನಲ್ಲಿ ಒಬ್ಬ ಪೋಲೀಸ 38 ವರ್ಷ ವಯಸ್ಸಿನ ಒಬ್ಬ ಆಪಲ್ ಕಂಪನಿ ಅಧಿಕಾರಿ ವಿವೇಕ್ ತಿವಾರಿಯನ್ನು ಗುಂಡಿಕ್ಕಿ ಕಗ್ಗೊಲೆ ನಡೆಸಿರುವುದು ವ್ಯಾಪಕ ಆಕ್ರೋಶವನ್ನು ಉಂಟು ಮಾಡಿದೆ. ಆದರೆ, ಮಾಧ್ಯಮ ಗಮನ ಸೆಳೆದ ಈ ಕೊಲೆ ಉತ್ತರ ಪ್ರದೇಶ ಪೋಲೀಸ್ ಪಡೆ ಯಾವುದೇ ಶಿಕ್ಷೆಯ ಭಯವಿಲ್ಲದೆ "ಎನ್‌ಕೌಂಟರ್ ಕೊಲೆ"ಗಳನ್ನು ನಡೆಸುತ್ತಿದೆ ಎಂಬುದರ ಒಂದು ದ್ಯೋತಕವಷ್ಟೇ.

ಮಾರ್ಚ್ 2017ರಲ್ಲಿ ಆದಿತ್ಯನಾಥ ಮುಖ್ಯಮಂತ್ರಿಗಳಾಗಿ ಅಧಿಕಾರ ವಹಿಸಿ ಕೊಂಡಂದಿನಿಂದ ಕ್ರಿಮಿನಲ್‌ಗಳೊಂದಿಗೆ ಮನಬಂದಂತೆ ವರ್ತಿಸಲು ಪೋಲೀಸರಿಗೆ ಅವಕಾಶವನ್ನು ಅವರು ಕೊಟ್ಟಿದ್ದಾರೆ. ಪೋಲೀಸರು 'ಆಪರೇಶನ್ ಕ್ಲೀನ್' ಆರಂಭಿಸಿ ಎನ್‌ಕೌಂಟರ್‌ಗಳನ್ನು ನಡೆಸುವ ತಮ್ಮ ಪ್ರಿಯ ವಿಧಾನದಲ್ಲಿ ತೊಡಗಿದ್ದಾರೆ. ಮಾರ್ಚ್ 2017ರಿಂದ 1500ಕ್ಕೂ ಹೆಚ್ಚು ಎನ್‌ಕೌಂಟರ್‌ಗಳಾಗಿವೆ. ಅವುಗಳಲ್ಲಿ 66 "ಕ್ರಿಮಿನಲ್"ಗಳು ಕೊಲ್ಲಲ್ಪಟ್ಟಿದ್ದಾರೆ, 700 ಮಂದಿ ಗಾಯಗೊಂಡಿದ್ದಾರೆ.



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಇವುಗಳಲ್ಲಿ ಬಹುಪಾಲು ಎನ್‌ಕೌಂಟರ್ ಎಂಬ ನಾಟಕ ಎಂದು ನಂಬುವುದಕ್ಕೆ ಸಾಕಷ್ಟು ಆಧಾರಗಳಿವೆ. ಹಲವು ಕೇಸುಗಳಲ್ಲಿ, ವಿಚಾರಣಾಧೀನ ಕೈದಿಗಳು, ಅಥವ, ಕ್ರಿಮಿನಲ್ ಕೇಸುಗಳನ್ನು ಎದುರಿಸುತ್ತಿರುವವರನ್ನು ಅವರ ಮನೆಗಳಿಂದ ಎಳೆದುಕೊಂಡು ಬಂದು ಎನ್‌ಕೌಂಟರ್‌ನ ನಾಟಕ ಮಾಡಿ ಗುಂಡಿಕ್ಕಿ ಕೊಲ್ಲಲಾಗಿದೆ. ಹೀಗೆ ಬಲಿಯಾದ ಕೆಲವರ ಕುಟುಂಬದವರು, ಹೇಗೆ ತಮ್ಮ ಮಗ ಅಥವ ಗಂಡನನ್ನು ಪೋಲಿಸರು ಮನೆಗೆ ಬಂದು ಒಯ್ದರು ಎಂಬುದಕ್ಕೆ ಸಾಕ್ಷ್ಯಗಳನ್ನು ಕೊಟ್ಟಿದ್ದಾರೆ.

ಇಂಡಿಯನ್ ಎಕ್ಸ್‌ಪ್ರೆಸ್ ಮಾಡಿರುವ ವಿಶ್ಲೇಷಣೆಯ ಪ್ರಕಾರ 21 ಸಾವುಗಳಿಗೆ ಕಾರಣವಾದ 20 ಎನ್‌ಕೌಂಟರ್ ಎಫ್‌ಐಆರ್‌ಗಳಲ್ಲಿ ನಮೂದಿಸಿದ ಎನ್‌ಕೌಂಟರ್‌ಗೆ ಕಾರಣವಾದ ಘಟನಾವಳಿಗಳಲ್ಲಿ ಸಾಮ್ಯತೆ ಇದೆ, ಮತ್ತು ಪೋಲಿಸ್ ಕಾರ್ಯಾಚರಣೆಯನ್ನು ವರ್ಣಿಸಲು ಒಂದೇ ತೆರನ ಪದಪುಂಜಗಳನ್ನು ಬಳಸಲಾಗಿದೆ.

ಉತ್ತರಪ್ರದೇಶ ಪೋಲೀಸ್‌ಗೆ ಈ ನ್ಯಾಯಾಂಗಬಾಹಿರ ಕೊಲೆಗಳನ್ನು ನಡೆಸುವ ಧೈರ್ಯ ಬಂದಿರುವುದು ಮುಖ್ಯಮಂತ್ರಿಗಳು ನೀಡುವ ಬೆಂಬಲದಿಂದಾಗಿಯೇ. ಈ ಮುಖ್ಯಮಂತ್ರಿಗಳು ವಿಧಾನ ಸಭೆಯಲ್ಲಿ ಈ ಎನ್‌ಕೌಂಟರ್‌ಗಳನ್ನು ಸಮರ್ಥಿಸಿಕೊಂಡಿದ್ದಾರೆ, ಮತ್ತು ಪ್ರತಿಪಕ್ಷಗಳವರು ಕ್ರಿಮಿನಲ್‌ಗಳನ್ನು ಬೆಂಬಲಿಸುತ್ತಿದ್ದಾರೆಂದು ಆಪಾದಿಸಿದ್ದಾರೆ. ಈ ಹಿಂದೆ ರಾಜ್ಯದಲ್ಲಿ ಗೂಂಡಾರಾಜ್ಯಭಾರ ಇತ್ತು, ಅಪರಾಧವನ್ನು ನಿರ್ಮೂಲ ಮಾಡುವ ಗುರಿಯೊಂದಿಗೆ ಪೋಲೀಸ್ ಕಾರ್ಯಾಚರಣೆ ನಡೆಯುತ್ತಿದೆ ಎಂಬುದು ಇಂತಹ ಘಟನೆಯಾದಾಗಲೆಲ್ಲ ಬಿಜೆಪಿ ಸರಕಾರದ ಸಿದ್ಧ ತರ್ಕ.

ಈ ಪ್ರಕ್ರಿಯೆಯಲ್ಲಿ, ಉತ್ತರ ಪ್ರದೇಶ ಪೋಲೀಸರು ಕಾನೂನುಹೀನತೆಗೆ ಮತ್ತು ಕ್ರಿಮಿನಲ್ ವರ್ತನೆಗೆ ಇನ್ನೊಂದು ಹೆಸರು ಎಂಬಂತಾಗಿದೆ. ರಾಜ್ಯದ ಕೆಲವು ಭಾಗಗಳಲ್ಲಿ ಹಣಕ್ಕೆ ಪ್ರತಿಯಾಗಿ " ಕಾಂಟ್ರಾಕ್ಟ್ ಕೊಲೆ"ಗಳನ್ನು ನಡೆಸಲು ಪೋಲೀಸ್ ಅಧಿಕಾರಿಗಳು ಸಿದ್ಧರಾಗಿದ್ದಾರೆ. ಇಂಡಿಯ ಟುಡೇ ಬಯಲಿಗೆಳೆದ ಒಂದು ಘಟನೆಯಲ್ಲಿ, ಈ ವರ್ಷ ಆಗಸ್ಟ್‌ನಲ್ಲಿ ಆಗ್ರಾ ವಲಯದಲ್ಲಿ ಪೋಲಿಸ್ ಠಾಣೆಯ ಮಟ್ಟದ ಮೂವರು ಪೋಲೀಸ್ ಅಧಿಕಾರಿಗಳು, ತಲಾ ಕಾಂಟ್ರಾಕ್ಟ್‌ಗೆ 6ರಿಂದ 8 ಲಕ್ಷ ರೂ. ಗಳಿಗೆ ಯಾವುದೇ ಮುಗ್ಧ ನಾಗರಿಕನನ್ನು ಮುಗಿಸಿಬಿಡಲು ತಮಗೆ ಸಾಧ್ಯ ಎಂದು ದೃಢಪಡಿಸಿದ್ದಾರೆ. ಮಾಧ್ಯಮಗಳು ಇದನ್ನು ಬಯಲಿಗೆಳೆದ ನಂತರ ಈ ಮೂವರು ಸಬ್–ಇನ್ಸ್‌ಪೆಕ್ಟರುಗಳನ್ನು ಅಮಾನತುಗೊಳಿಸಲಾಯಿತು.

ಇಂತಹ ಎನ್‌ಕೌಂಟರ್‌ಗಳು ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳಿಗೆ ಬಡ್ತಿಯ ದಾರಿಗಳನ್ನೂ ಒದಗಿಸುತ್ತಿವೆ ಎಂದು ಹೇಳಲಾಗಿದೆ. ಹಲವಾರು ಸಂದರ್ಭಗಳಲ್ಲಿ ಒಂದು ಎನ್‌ಕೌಂಟರ್ ನಂತರ ಸಂಬಂಧಪಟ್ಟ ಪೋಲೀಸ್ ಸಿಬ್ಬಂದಿಗೆ ಬಡ್ತಿಯ ಬಕ್ಷೀಸು ಸಿಕ್ಕಿದೆ.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಥವ ಸುಪ್ರಿಂ ಕೋರ್ಟಿನ ಪ್ರಶ್ನೆಗಳು ಉತ್ತರ ಪ್ರದೇಶ ಪೋಲಿಸಿನ ಮೇಲೆ ಯಾವುದೇ ಪ್ರಭಾವ ಬೀರಿಲ್ಲ. ಇತ್ತೀಚೆಗೆ, ಸಪ್ಟಂಬರ್ 20 ರಂದು ಅಲಿಗಡ್ ಬಳಿ ಪೋಲೀಸರು ಒಂದು "ಎನ್‌ಕೌಂಟರ್" ವೀಕ್ಷಿಸಲು ಮಾಧ್ಯಮದವರನ್ನೇ ಆಹ್ವಾನಿಸಿದ್ದಾರೆ. ಇದರಲ್ಲಿ ಕ್ರಿಮಿನಲ್ ದಾಖಲೆಗಳಿದ್ದ ಇಬ್ಬರನ್ನು, ಮಸ್ತಕೀಮ್ ಮತ್ತು ನೌಷಾದ್ ಎಂಬವರನ್ನು ಗುಂಡಿಕ್ಕಿ ಕೊಲ್ಲಲಾಯಿತು.

ವಿವೇಕ್ ತಿವಾರಿ ಕೊಲೆಯ ಸಂದರ್ಭದಲ್ಲಿ, ಉತ್ತರಪ್ರದೇಶ ಸರಕಾರ ಬೇಗನೇ ಈ ಕೊಲೆಯನ್ನು ಖಂಡಿಸಿತು. ಸ್ವತಃ ಆದಿತ್ಯನಾಥರೇ ಕುಟುಂಬದವರನ್ನು ಭೇಟಿ ಮಾಡಿ ಪರಿಹಾರ, ವಸತಿ ಮತ್ತು ಉದ್ಯೋಗದ ಭರವಸೆ ನೀಡಿದ್ದಾರೆ. ಕೊಲೆಯಾದವರು ಮೇಲ್ಜಾತಿಯವರು, ಒಂದು ಬಹುರಾಷ್ಟ್ರೀಯ ಕಂಪನಿಯ ಅಧಿಕಾರಿ ಎಂಬುದು ಸರಕಾರದ ಪ್ರತಿಕ್ರಿಯೆಯನ್ನು ನಿರ್ಧರಿಸಿದೆ. ಆದರೆ ಉತ್ತರ ಪ್ರದೇಶದಲ್ಲಿ ಪೋಲಿಸ್ ಎನ್‌ಕೌಂಟರ್‌ಗಳಲ್ಲಿ ಬಲಿಯಾದವರಲ್ಲಿ ಬಹುಪಾಲು ಮುಸ್ಲಿಮರು, ದಲಿತರು ಮತ್ತು ಬಡವರು. ಅದರಲ್ಲೂ, ಬಹಳಷ್ಟು ಮುಸ್ಲಿಮರು ಕೊಲೆಯಾಗಿದ್ದಾರೆ. ಒಂದು ಅಂದಾಜಿನ ಪ್ರಕಾರ ಕೊಲೆಯಾದವರಲ್ಲಿ 24 ಮಂದಿ ಮುಸ್ಲಿಮರು. ಇದು ಪೋಲಿಸ್ ಪಡೆಯಲ್ಲಿ ಕೋಮುವಾದ ಸಾಂಸ್ಥಿಕ ಸ್ವರೂಪ ಪಡೆದಿರುವುದುನ್ನು ಬಯಲಿಗೆ ತರುತ್ತದೆ.

ಉತ್ತರ ಪ್ರದೇಶ ಪೋಲಿಸರಿಗೆ ಕೊಟ್ಟಿರುವ "ಕೊಲೆ ಮಾಡುವ ಲೈಸೆನ್ಸ"ನ್ನು ಕೂಡಲೇ ಹಿಂದಕ್ಕೆ ಪಡೆಯಬೇಕಾಗಿದೆ. ಈಗಾಗಲೇ ಕೆಲವು ಎನ್‌ಕೌಂಟರ್ ಕೊಲೆಗಳ ತನಿಖೆ ನಡೆಯುತ್ತಿವೆ, ಅವನ್ನು ಪೂರ್ಣಗೊಳಿಸಿ ದೋಷಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಎನ್‌ಕೌಂಟರ್ ಕೊಲೆಗಳ ಬಗ್ಗೆ ಒಂದು ಅರ್ಜಿ ಸುಪ್ರಿಂ ಕೋರ್ಟ್ ಮುಂದಿದೆ. ಸುಪ್ರಿಂ ಕೋರ್ಟ್ ಈ ಪ್ರಭುತ್ವ–ಪ್ರಾಯೋಜಿತ ರಕ್ತಪಾತವನ್ನು ತಡೆಯಲು ಮಧ್ಯಪ್ರವೇಶಿಸಬೇಕು.

"ಭಯೋತ್ಪಾದನಾ–ವಿರೋಧಿ ಕಾಯ್ದೆಗಳನ್ನು ಬಳಸಿ ಭಯೋತ್ಪಾದನೆ ಅಸಮರ್ಥನೀಯ"

ಸುಪ್ರಿಂ ಕೋರ್ಟ್ ಆಗಸ್ಟ್ 28ರಂದು ಮಹಾರಾಷ್ಟ್ರ ಪೋಲೀಸರಿಂದ ಐವರು ಮಾನವ ಹಕ್ಕುಗಳ ಕಾರ್ಯಕರ್ತರ ಬಂಧನಗಳ ಬಗ್ಗೆ 'ವಿಶೇಷ ತನಿಖಾ ದಳ'(ಎಸ್‌ಐಟಿ) ರಚಿಸಲು ನಿರಾಕರಿಸಿದ ಮೇಲೆ ಈ ಕುರಿತು ಅರ್ಜಿ ಹಾಕಿರುವ ರೊಮಿಲಾ ಥಾಪರ್, ಪ್ರಭಾತ್ ಪಟ್ನಾಯಕ್, ಮಜ ದಾರುವಾಲ ಮತ್ತು ಸತೀಶ್ ದೇಶಪಾಂಡೆ ಸಪ್ಟಂಬರ್ 28ರಂದು ಒಂದು ಪತ್ರಿಕಾ ಸಮ್ಮೇಳನವನ್ನು ನಡೆಸಿದರು.

ಎಸ್‌ಐಟಿ ನೇಮಿಸಲು ನಿರಾಕರಿಸಿದರೂ, ಸರ್ವೋಚ್ಚ ನ್ಯಾಯಾಲಯದ ತೀರ್ಪು ಈ ಕಾರ್ಯಕರ್ತರಿಗೆ ಇನ್ನೂ ನಾಲ್ಕು ವಾರಗಳ ಅವಧಿಯ ವರೆಗೆ ರಕ್ಷಣೆ ನೀಡಿದೆ, ಮತ್ತು ಸೂಕ್ತ ನ್ಯಾಯಾಲಯಗಳಿಂದ ಪರಿಹಾರ ಪಡೆಯಲು ಸ್ವಾತಂತ್ರ್ಯ ನೀಡಿದೆ ಎಂದು ಈ ಅರ್ಜಿದಾರರು ಹೇಳಿದ್ದಾರೆ.

ಅರ್ಜಿದಾರರು ನ್ಯಾಯಮೂರ್ತಿ ಚಂದ್ರಚೂಡ್ ಅವರ ಭಿನ್ನಮತದ ಅಭಿಪ್ರಾಯವನ್ನು ಪ್ರಶಂಸಿಸಿದ್ದಾರೆ. "ಆಧಾರರಹಿತ ಕಲ್ಪನೆಗಳ ಬಲಿಪೀಠದಲ್ಲಿ ಸ್ವಾತಂತ್ರ್ಯವನ್ನು ಬಲಿಗೊಡಲು ಸಾಧ್ಯವಿಲ್ಲ, ಪೋಲೀಸರು ಸ್ವಾತಂತ್ರ್ಯ ಮತ್ತು ಸತ್ಯವನ್ನು ಹಗುರವಾಗಿ ತಗೊಂಡು ಒಂದು ಮಾಧ್ಯಮ ವಿಚಾರಣೆಯ ಮೂಲಕ ಕಾರ್ಯಕರ್ತರ ಪ್ರತಿಷ್ಠೆಗೆ ಮಸಿ ಬಳೆದಿದ್ದಾರೆ ಎಂದು ಅವರು ಖಡಾಖಂಡಿತವಾಗಿ ಹೇಳಿದ್ದಾರೆ" ಎಂದಿರುವ ಪ್ರೊ. ರೊಮಿಲಾ ಥಾಪರ್ "ಇಂತಹ ಸಂದರ್ಭದಲ್ಲಿ, ನ್ಯಾಯಮೂರ್ತಿ ಡಿ ವೈ ಚಂದ್ರಚೂಡ್ ಹೇಳಿರುವಂತೆ, ಪೋಲೀಸರಿಗೆ ಒಂದು ಮುಕ್ತ, ನ್ಯಾಯಯುತ ಹಾಗೂ ನಿಷ್ಪಕ್ಷಪಾತಿ ತನಿಖೆ ಮಾಡುವ ಸಾಮರ್ಥ್ಯ ಇದೆಯೇ ಎಂಬ ಬಗ್ಗೆ ಗಂಭೀರ ಸಂದೇಹವುಂಟಾಗಿದೆ" ಎಂದು ಪತ್ರಿಕಾ ಸಮ್ಮೇಳನದಲ್ಲಿ ಅರ್ಜಿದಾರರ ಪರವಾಗಿ ಮಾತಾಡುತ್ತ ಹೇಳಿದರು.



ಪ್ರಭುತ್ವಯಂತ್ರ ತನ್ನ ಅಧಿಕಾರಗಳ ದುರುಪಯೋಗ ಮಾಡುತ್ತಿದೆ ಎಂದು ಟೀಕಿಸುತ್ತ ಅವರು ಎರಡು ರೀತಿಯ ಭಯೋತ್ಪಾದನೆಗಳಿವೆ ಎಂದರು. "ಎರಡೂ ಭೀತಿ ಸೃಷ್ಟಿಸಿ ನಮ್ಮ ಪ್ರಜಾಪ್ರಭುತ್ವದ ಬುನಾದಿಗಳನ್ನು ಶಿಥಿಲಗೊಳಿಸುತ್ತವೆ. ಒಂದು, ಭಯೋತ್ಪಾದಕರ ಹಿಂಸಾತ್ಮಕ ಚಟುವಟಿಕೆಗಳು. ಅವರು ಬಾಂಬುಗಳನ್ನು ನೆಡುತ್ತಾರೆ, ಗಲಭೆಗಳನ್ನು ಕೃತಕವಾಗಿ ಸೃಷ್ಟಿಸುತ್ತಾರೆ ಮತ್ತು ಭೀತಿ ಹರಡಿಸುತ್ತಾರೆ. ಇನ್ನೊಂದು ಪ್ರಭುತ್ವದ ಅಸಮರ್ಥನೀಯ ಕೃತ್ಯಗಳು. ಇವರು, ನಿಜವಾಗಿ ಹಿಂಸಾಚಾರ ನಡೆಸಿದವರ ಜಾಡು ಹಿಡಿಯುವ ಬದಲು ತಮ್ಮ ಪ್ರಸಕ್ತ ಯಜಮಾನರುಗಳಿಗೆ ಅನುರೂಪವಾಗಿ ಇಲ್ಲದವರಿಗೆ ಕಿರುಕುಳ ಕೊಡಲು ತಮ್ಮ ಅಧಿಕಾರಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಾರೆ" ಎಂದು ಮುಂದುವರೆದು ಥಾಪರ್ ಹೇಳಿದರು.

"ಪ್ರಭುತ್ವ ಸಮಾಜದ ದುರ್ಬಲ ವಿಭಾಗಗಳ ಹಕ್ಕುಗಳಿಗಾಗಿ ಕೆಲಸ ಮಾಡುತ್ತಿರುವ ವ್ಯಕ್ತಿಗಳ ವಿರುದ್ಧ ಸಾಕಷ್ಟು ಸಾಕ್ಷ್ಯಗಳಿಲ್ಲದೆ ಭಯೋತ್ಪಾದನಾ–ವಿರೋಧಿ ಕಾಯ್ದೆಗಳನ್ನು ಬಳಸಿದಾಗ , ಅದು ಕೂಡ ದು ರೀತಿಯ ಭಯೋತ್ಪಾದನೆಯನ್ನು ಉಂಟು ಮಾಡುತ್ತದೆ. ಅಸಂಭವನೀಯ ಆರೋಪಗಳ ಮೇಲೆ ಆಗಸ್ಟ್ 28ರಂದು ಮಾಡಿದಂತೆ ತಮಗೆ ತೋಚಿದಂತೆ ಬಂಧನಗಳನ್ನು ನಡೆಸುವುದು, ನಮ್ಮೆಲ್ಲರಿಗೂ ಆತಂಕ ಉಂಟುಮಾಡುವ ಸಂಗತಿ" ಎಂದು ರೊಮಿಲಾ ಥಾಪರ್ ಹೇಳಿದರು.

ಪ್ರೊ.ಪ್ರಭಾತ್ ಪಟ್ನಾಯಕ್ ಕರಾಳ ಕಾಯ್ದೆಗಳ ಅಡಿಯಲ್ಲಿ ಬಂಧಿಸಿ ವರ್ಷಾನುಗಟ್ಟಲೆ ಜೈಲುಕಂಬಿಗಳ ಹಿಂದೆ ಇರುವವರ ನೋವು–ನರಳಿಕೆಗಳ ಬಗ್ಗೆ ಆತಂಕ ವ್ಯಕ್ತಪಡಿಸಿದರು. " ನೀವು ಕೆಲವು ಕ್ರಿಮಿನಲ್ ಕೃತ್ಯಗಳನ್ನು ಮಾಡಿದ್ದಾರೆ ಎಂದು ಜನಗಳ ಮೇಲೆ ಆಪಾದನೆ ಹೊರಿಸುತ್ತೀರಿ. ಅವರಿಗೆ ಜಾಮೀನು ಸಿಗುವುದಿಲ್ಲ. ಮೊಕದ್ದಮೆ ವರ್ಷಗಳ ಕಾಲ ಎಳೆಯುತ್ತದೆ. ಈ ಮೊಕದ್ದಮೆಯನ್ನು ಸಿದ್ಧಪಡಿಸಿದ, ಆ ಜನಗಳನ್ನು ಬಂಧಿಸಿದ ಪೋಲೀಸ್ ಅಧಿಕಾರಿಗಳೂ ಮೊಕದ್ದಮೆಗಳಲ್ಲಿ ಸೋಲಬಹುದು, ಆದರೆ ಅದಕ್ಕಾಗಿ ಅವರು ಏನೂ ಬೆಲೆ ತೆರುವುದಿಲ್ಲ. ನಾಗರಿಕರ ಮೇಲೆ ಭಯೋತ್ಪಾದನೆ ನಡೆಸುವ ಪ್ರಭುತ್ವದ ಮಂದಿಗೆ ದಂಡ ಹಾಕುವುದಿಲ್ಲ" ಎಂದು ಅವರು ಹೇಳಿದರು.

ಪುಣೆ ಪೋಲಿಸರು ಮತ್ತು ಮಹಾರಾಷ್ಟ್ರ ಸರಕಾರ ಸುಪ್ರಿಂ ಕೊಟಿನ ಬಹುಮತದ ತೀರ್ಪುತಮ್ಮ ವಿಜಯ ದು ಹೇಳಿಕೊಳ್ಳುತ್ತಿರುವಾಗಲೇ ದಿಲ್ಲಿ ಹೈಕೋರ್ಟ್ ಗೃಹಬಂಧನದಲ್ಲಿ ಇರಿಸಿದ ಐವರಲ್ಲಿ ಒಬ್ಬರಾದ ಗೌತಮ್ ನವ್ಲಖ ಅವರನ್ನು ಪುಣೆಗೆ ಒಯ್ಯುವ ಮಹಾರಾಷ್ಟ್ರ ಪೋಲೀಸ್ ಪಡೆದಿರುವ ರಿಮಾಂಡ್ ಆದೇಶ 'ಹಾನೂನಿನ ಪ್ರಕಾರ ಇಲ್ಲ' ಎಂದು ಅದನ್ನು ರದ್ದು ಮಾಡಿ, ಗೃಹಬಂಧನದಿಂದ ಬಿಡುಗಡೆ ಮಾಡಿದೆ.



ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ ಶತಾಬ್ದಿ : ನೂರು ನೆನಪು

ಸೀತಾರಾಂ ಯೆಚೂರಿ (ಅನುವಾದ : ಎಂ.ಜಿ. ವೆಂಕಟೇಶ)

ಕಾ|| ಹರಕಿಶನ್‌ಸಿಂಗ್ ಸುರ್ಜಿತ್ ಹತ್ಯಾಕಾಂಡದ 79ನೇ ವರ್ಷದ ಸಂದರ್ಭದಲ್ಲಿ ಹೇಳಿದ್ದನ್ನು ಇಲ್ಲಿ ನೆನೆಸಿಕೊಳ್ಳಬಹುದು "ನಾವು ದೇಶದ ಐಕ್ಯತೆ ಮತ್ತು ಸ್ವಾತಂತ್ರ್ಯದ ಸಂದೇಶ ನೀಡುತ್ತಾ ತಮ್ಮ ರಕ್ತ ಚೆಲ್ಲಿದ ಜನರಿಗೆ ವಂದಿಸುತ್ತೇವೆ. ಹಸಿವಿನಿಂದ ಸ್ವಾತಂತ್ರ್ಯ ಬಡತನದಿಂದ ಸ್ವಾತಂತ್ರ್ಯ ಮುಂತಾದ ನಿಜವಾದ ಸ್ವಾತಂತ್ರ್ಯದ ಆಶಯ ಹೊಂದಿದ್ದು ಅದಕ್ಕಾಗಿ ಮಡಿದವರನ್ನು ನಾವು ಸ್ಮರಿಸುತ್ತೇವೆ. ಜಲಿಯಾನ್ ವಾಲಾ ಬಾಗ್ ಮುಂದಿನ ಉತ್ತಮ ಹಾಗೂ ಉಜ್ವಲ ಭವಿಷ್ಯಕ್ಕಾಗಿ ದುಡಿಯುವ ನಮ್ಮ ದೇಶದ ಜನತೆಗೆ ಎಂದೆಂದಿಗೂ ಸ್ಫೂರ್ತಿಯ ಚಿಲುಮೆಯಾಗಿರುತ್ತದೆ. ಹುತಾತ್ಮರ ತ್ಯಾಗ ಬಲಿದಾನಗಳನ್ನು ನಾವು ಎಂದೆಂದೂ ಮರೆಯುವುದಿಲ್ಲ."

ಎಪ್ರಿಲ್ 2018 ರಲ್ಲಿ ನಡೆದ ಸಿಪಿಐ (ಎಂ)ನ 22ನೇ ಮಹಾಧಿವೇಶನದಲ್ಲಿ ಜಲಿಯನ್ ವಾಲಾ ಬಾಗ್ ನಲ್ಲಿ ನಡೆದ ಹತ್ಯಾಕಾಂಡದ ಶತಾಬ್ದಿಯನ್ನು ದೇಶಾದ್ಯಂತ ಎಪ್ರಿಲ್ 2019 ರವರೆಗೆ ವರ್ಷವಿಡೀ ಆಚರಿಸಲು ವಿಶೇಷ ನಿರ್ಣಯವನ್ನು ಅಂಗೀಕರಿಸಿತು. ಈ ಆಚರಣೆ ದೇಶದಲ್ಲಿ ವಿವಿಧ ರೀತಿಯಲ್ಲಿ ನಡೆಯುತ್ತಿದೆ. ಈ ಸಂದರ್ಭವನ್ನು "ಸ್ವಾತಂತ್ರ್ಯ ಹೋರಾಟದ ಪಾಠಗಳನ್ನು ಮತ್ತು ಭಾರತವನ್ನು ವಸಾಹತು ನೊಗದಿಂದ ವಿಮುಕ್ತಿಗೊಳಿಸಲು ಜನರ ಧೃಢನಿರ್ಧಾರವನ್ನು ಪುನರ್ಮನನ ಮಾಡಲು" ಬಳಸಬೇಕು ಎಂದು ಸಿಪಿಐ(ಎಂ) ಕರೆ ನೀಡಿತ್ತು.

ಎಪ್ರಿಲ್ 13, 1918 ಬೈಸಾಕಿ ದಿನದಂದು (ಸಿಖ್ಖರ ಯುಗಾದಿ ರೀತಿಯ ಹಬ್ಬ) ನಡೆದ ಹತ್ಯಾಕಾಂಡ 20ನೇ ಶತಮಾನದ ಪ್ರಪಂಚದ ಇತಿಹಾಸದಲ್ಲೇ ಕಂಡ ಅತ್ಯಂತ ಬರ್ಬರ ರಾಜಕೀಯ ಅಪರಾಧ ಕೃತ್ಯ. ಅದು ಮಾನವೀಯತೆಯ ಲವಲೇಶವೂ ಇಲ್ಲದ ಬ್ರಿಟೀಷ್ ವಸಾಹತುಶಾಹಿ ದಬ್ಬಾಳಿಕೆಯ ನಗ್ನ ಕ್ರೌರ್ಯವನ್ನು ಜಗತ್ತಿಗೆ ತೋರಿಸಿತು. ಈ ಹತ್ಯಾಕಾಂಡದಲ್ಲಿ ಸತ್ತವರ ಸಂಖ್ಯೆ 400 ಮತ್ತು ಗಾಯಗೊಂಡವರ ಸಂಖ್ಯೆ 2000 ಎಂದು ಸರ್ಕಾರಿ ದಾಖಲೆಗಳು ಹೇಳಿದರೂ, ಸ್ವಾತಂತ್ರ್ಯ ಸಂಗ್ರಾಮದ ಭಾಗವಾಗಿ ರಚಿಸಿದ್ದ ಆಯೋಗ ಸಾಕ್ಷ ಸಮೇತ ದಾಖಲಿಸಿರುವಂತೆ ಸತ್ತವರ ಸಂಖ್ಯೆ 1000 ಮೀರಿದ್ದು ಹತ್ತು ಸಾವಿರಕ್ಕೂ ಹೆಚ್ಚು ಜನ ಗಾಯಗೊಂಡಿದ್ದರು. ಜಲಿಯನ್ ವಾಲಾಬಾಗ್‌ಗೆ ಇದ್ದಿದ್ದೇ ಒಂದೇ ದ್ವಾರ ಮತ್ತು ಎಲ್ಲ ಕಡೆಗಳಲ್ಲೂ ಕಟ್ಟಡಗಳಿದ್ದು, ಸೇರಿದ್ದವರ ಸಂಖ್ಯೆ 20 ಸಾವಿರ. ಅವರು ಬ್ರಿಟೀಷರ ದಬ್ಬಾಳಿಕೆ ಮತ್ತು ಕ್ರೂರ ಕೌಲಟ್ ಆಕ್ಟ್ ವಿರುದ್ಧ ಪ್ರತಿಭಟಿಸಲು ಸೇರಿದ್ದರು. ವಸಾಹತುಶಾಹಿ ದೊರೆಗಳು ಇದನ್ನು ಹತ್ತಿಕ್ಕಲು ನಡೆಸಿದ್ದೇ ಈ ಬರ್ಬರ ಹತ್ಯಾಕಾಂಡ.

ಹಿನ್ನೆಲೆ :

ಬೈಸಾಕಿ ಹಬ್ಬವನ್ನು ಹಿಂದು ಮುಸ್ಲಿಮ್, ಸಿಖ್ಖರೂ ಒಂದೇ ಲೋಟದಲ್ಲಿ ನೀರು ಕುಡಿಯುವುದರ ಮೂಲಕ ಮತ್ತು ಒಂದೇ ತಟ್ಟೆಯಲ್ಲಿ ಊಟ ಮಾಡುವುದರ ಮೂಲಕ ಆಚರಿಸುತ್ತಾರೆ. ಈ ಬಹು-ಧರ್ಮೀಯ ಸಂಸ್ಕೃತಿಯನ್ನು ಬ್ರಿಟೀಷರು ತಮ್ಮ ಒಡೆದು ಆಳುವ ನೀತಿಗೆ ಅನುಸಾರವಾಗಿ ನಾಶ ಮಾಡಬಯಸಿದ್ದರು. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿವಿಧ ಧರ್ಮೀಯರು ಬ್ರಿಟೀಷರಿಗೆ ವಿರುದ್ಧವಾಗಿ ನಿಂತಿದ್ದು, ಬಹಾದ್ದೂರ್ ಶಾ ಝಫರ್ ಅವರನ್ನು ಸ್ವತಂತ್ರ ಭಾರತದ ಚಕ್ರವರ್ತಿಯೆಂದು ಘೋಷಿಸಿದ್ದು, ಅದರ ನಂತರ ಈ ಐಕ್ಯತೆಯನ್ನು ಒಡೆಯುವ ಪ್ರಯತ್ನಗಳನ್ನು ತೀವ್ರ ಗೊಳಿಸಿದ್ದರು. ಅಂತಹ ಐಕ್ಯತೆ ಜಲಿಯನ್ ವಾಲಾಬಾಗ್‌ನಲ್ಲಿ ಕಂಡಿದ್ದು ಬ್ರಿಟೀಷರು ಕಂಗಾಲಾಗಿದ್ದರು.

ದೆಹಲಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ (ಎಐಸಿಸಿ) 1918 ರ ವಾರ್ಷಿಕ ಅಧಿವೇಶನದಲ್ಲಿ, ಮುಂದಿನ ಅಧಿವೇಶನವನ್ನು ಪಂಜಾಬಿನಲ್ಲಿ ನಡೆಸಲು ತೀರ್ಮಾನಿಸಿತ್ತು. ಇದರಿಂದ ಪಂಜಾಬಿನ ತೀವ್ರ ರಾಜಕೀಯಕರಣ ಆಗುತ್ತದೆಯೆಂಬ ಆತಂಕ ಬ್ರಿಟೀಷರಿಗೆ ಎದುರಾಯಿತು. ಅಲ್ಲಿಯವರೆಗೆ ಸಾಮ್ರಾಜ್ಯಶಾಹಿ ಬ್ರಿಟೀಷ್ ಸೈನ್ಯಕ್ಕೆ ಪಂಜಾಬ್, ನಿರಾತಂಕವಾಗಿ ಸೈನಿಕರನ್ನು ಸರಬರಾಜು ಮಾಡುವ ಆಸರೆಯಾಗಿತ್ತು. ಅವರಿಗೆ ಈ ಸೌಕರ್ಯದಿಂದ ವಂಚಿತರಾಗಲು ಇಚ್ಛೆಯಿರದ ಕಾರಣದಿಂದ, ಅವರು ರಾಷ್ಟ್ರೀಯ ಪ್ರಜ್ಞೆ ಹೆಚ್ಚದೆ ಇರುವಂತೆ ನೋಡಿಕೊಳ್ಳಬೇಕಿತ್ತು. ಆದ್ದರಿಂದ ಎಐಸಿಸಿ ಅಧಿವೇಶನವನ್ನು ನಿಲ್ಲಿಸುವುದು ಅವರಿಗೆ ಅನಿವಾರ್ಯವಾಗಿತ್ತು. ಅಮೃತಸರದ ಖ್ಯಾತ ವಕೀಲರಾದ ಡಾ|| ನೈಪುದ್ದೀನ್ ಕಿಚ್ಲೂ ಮತ್ತು ಲಾಹೋರಿನ ವೈದ್ಯರಾದ ಡಾ|| ಸತ್‌ಪಾಲ್ ಎಐಸಿಸಿ ಅಧಿವೇಶನಕ್ಕಾಗಿ ಸಿದ್ಧತೆ ನಡೆಸಿದ್ದರು. ಈ ನಡೆಯನ್ನು ಬ್ರಿಟೀಷರು ತಮ್ಮ ವಿರುದ್ಧ ತೀವ್ರ ಸವಾಲೆಂದು ಪರಿಗಣಿಸಿದ್ದರು.

ಆದರೆ ಇದಕ್ಕೆ ಮೊದಲೇ ಪಂಜಾಬ್‌ನಲ್ಲಿ ಸ್ವಾತಂತ್ರ್ಯದ ಕಿಚ್ಚು ಜನ ಸಾಮಾನ್ಯರಲ್ಲಿ ಬೇರು ಬಿಟ್ಟಿತ್ತು. ಗದಾರ್ ಪಾರ್ಟಿ ಚಳುವಳಿ ರೂಪುಗೊಂಡಿದ್ದು ಅಮೇರಿಕಾ ಮತ್ತು ಕೆನಡಾಗಳ ಪಶ್ಚಿಮ ತೀರದಲ್ಲಿ. ಬಹುತೇಕ ಅನಿವಾಸಿ ಸಿಖ್ಖರಿಂದ 1913–14 ರಲ್ಲಿ ಪ್ರಾರಂಭಗೊಂಡಿದ್ದು, ಪಂಜಾಬ್ ಜನತೆ ಅದರಿಂದ ಪ್ರಭಾವಿತರಾಗಿದ್ದರು. ಗದಾರ್ ಗುಂಪಿನ ಮೇಲಿನ ಅಮಾನವೀಯ ದಮನದ ವಿರುದ್ಧ ಆಕ್ರೋಶದಿಂದಾಗಿ ಪಂಜಾಬಿನ ಯುವ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಬೆಂಬಲಿಸುತ್ತಿದ್ದರು.

'ರೌಲಟ್ ಆಕ್ಟ್' ವಿರುದ್ಧ ಪ್ರತಿಭಟನೆ

ಬ್ರಿಟೀಷರು ಜನರ ಸಂಗ್ರಾಮದ ಕಿಚ್ಚನ್ನು ಹತ್ತಿಕ್ಕಲು ಕೌಲಟ್ ಕರಾಳ ಕಾಯೆಯನ್ನು ಜಾರಿಗೆ ತಂದರು. ಇದರ ಪ್ರಕಾರ, ಮೂವರು ನ್ಯಾಯಾದೀಶರ ಮಂಡಳಿ ಯಾವುದೇ ಮನವಿಗೆ ಆಸ್ಪದ ಕೊಡದಂತೆ ಕ್ರಾಂತಿಕಾರಿಗಳನ್ನು ಚಳುವಳಿಗಾರರನ್ನು ಶಿಕ್ಷಿಸಬಹುದಿತ್ತು. ಸ್ಥಳೀಯ ಸರ್ಕಾರಗಳಿಗೆ ಯಾವುದೇ ವ್ಯಕ್ತಿಯನ್ನು ಅಪಾಯಕಾರಿಯೆಂದು ಬಂಧಿಸುವ ಅಧಿಕಾರವಿತ್ತು. ಗಾಂಧೀಯವರು ಈ ಕರಾಳ ಶಾಸನದ ವಿರುದ್ಧ ಪ್ರತಿಭಟಿಸಲು ನೀಡಿದ ಕರೆಯಿಂದ ಬ್ರಿಟೀಷರು ಮಾಚ್ 30, 1919 ರಂದು ಅದನ್ನು ಹಿಂಪಡೆಯುವುದು ಅನಿವಾರ್ಯವಾಯಿತು. ಆ ದಿನ ದೆಹಲಿಯಲ್ಲಿ ಹರತಾಳ ನಡೆಸುತ್ತಿದ್ದವರ ಮೇಲೆ ಗುಂಡಿನ ದಾಳಿ ನಡೆದು, 5 ಜನರು ಸತ್ತಿದ್ದು ನೂರಾರು ಜನ ಗಾಯಗೊಂಡಿದ್ದರು. ಇದನ್ನು ವಿರೋಧಿಸಿ ಪ್ರತಿಭಟನೆ ದೇಶಾದ್ಯಂತ ನಡೆದಿದ್ದು, ಹಿಂದೆಂದೂ ಕಾಣದ ರೀತಿಯಲ್ಲಿ ಹಿಂದು ಮುಸ್ಲಿಂ ಸಿಖ್ಖರ ಐಕ್ಯತೆ ಉಂಟಾಗಿತ್ತು

ಈ ಬೆಳವಣಿಗೆಯಿಂದ ವಿಚಲಿತರಾಗಿ ಪಂಜಾಬ್ ಸರ್ಕಾರ ಅಮೃತಸರದ ಕಾಂಗ್ರೆಸ್ ಅಧಿವೇಶನವನ್ನು ಹತ್ತಿಕ್ಕಲು ನೈಪುದ್ದೀನ್ ಬಿಟ್ಲು ಮತ್ತು ಸತ್‌ಪಾಲ್ ರವರನ್ನು ಎಪ್ರಿಲ್ 10 ರಂದು ಬಂಧಿಸಿ ಅಜ್ಞಾತ ಸ್ಥಳಕ್ಕೆ ಕರೆದೊಯ್ದಿದ್ದರು. ಇದನ್ನು ವಿರೋಧಿಸಿ ತಮ್ಮ ನಾಯಕನನ್ನು ಬಿಡುಗಡೆಗೊಳಿಸಲು ಆಗ್ರಹಿಸಿ, ಜಿಲ್ಲಾ ಮ್ಯಾಜಿಸ್ಟ್ರೇಟ್‌ರ ಕಚೇರಿಯತ್ತ ಬೃಹತ್ ಮೆರವಣಿಗೆ ಹೊರಟಿತ್ತು. ಇಲ್ಲೂ ಗುಂಡಿನ ದಾಳಿ ನಡೆದಿದ್ದು ಹತ್ತಾರು ಜನ ಬಲಿಯಾಗಿ ನೂರಾರು ಮಂದಿ ಗಾಯಗೊಂಡಿದ್ದರು. ರೊಚ್ಚಿಗೆದ್ದ ಜನರನ್ನು ಹತ್ತಿಕ್ಕಲು ಮೊದಲು ಅಮೃತಸರವನ್ನು, ನಂತರ ಇಡೀ ಪಂಜಾಬನ್ನು ಮಿಲಿಟರಿ ಶಾಸನಕ್ಕೆ ಒಪ್ಪಿಸಿ ಮಾರ್ಷಲ್ ಕಾನೂನು ಜಾರಿಗೊಳಿಸಲಾಯಿತು.

ಹತ್ಯಾಕಾಂಡ :

ಈ ಹಿನ್ನೆಲೆಯಲ್ಲಿ ಬೃಹತ್ ಸಾರ್ವಜನಿಕ್ ಸಭೆಯನ್ನು ಸಂಘಟಿಸಲಾಗಿತ್ತು ಮತ್ತು 20,000ಕ್ಕೂ ಹೆಚ್ಚು ಜನ ಸಮೀಪದ ಹಳ್ಳಿಗಳಿಂದ ಬಂದಿದ್ದು, ಅದು ಬೈಸಾಕಿ ಉತ್ಸವದ ಕಾಲದಲ್ಲಿ ನಡೆಯುವ ಜಾತ್ರೆಗಳಿಗೆ ಬಂದಿದ್ದ ಜನರಿಂದ ಕೂಡಿದ್ದ ಶಾಂತ ರೀತಿಯ ಸಭೆಯಾಗಿತ್ತು. ಆಗ ಅಲ್ಲಿಗೆ ಜನರಲ್ ಡೈರ್ ತನ್ನ ಮಿಲಿಟರಿ ಪಡೆಯೊಂದಿಗೆ ಬಂದು, ಇದ್ದ ಒಂದೇ ದಾರಿಯನ್ನು ಮುಚ್ಚಿ ಜನರ ಮೇಲೆ ಗುಂಡಿನ ದಾಳಿ ನಡೆಸಿದ. 1,600 ಸುತ್ತು ಗುಂಡು ಹಾರಿಸಿ ನಂತರ ಮದ್ದು ಖಾಲಿಯಾದ ಮೇಲೆ ಮಾತ್ರ ಗೋಲಿಬಾರು ನಿಂತಿತು.

ಇದರಿಂದ ಉಂಟಾದ ಸಾರ್ವಜನಿಕ ಆಕ್ರೋಶ ತಣಿಸಲು, ಬ್ರಿಟೀಷ್ ಸರ್ಕಾರ ತನಿಖಾ ಆಯೋಗವನ್ನು (ಹಂಟ್ ಆಯೋಗ) ರಚಿಸಿತು. ನಂತರದ ದಿನಗಳಲ್ಲಿ ಸರ್ಕಾರ ಅಮೃತಸರದಲ್ಲಿ ನೀರು ಮತ್ತು ವಿದ್ಯುತ್ ಸರಬರಾಜು ನಿಲ್ಲಿಸಿತು. ಹಂಟರ್ ಸಮಿತಿ ಮುಂದೆ ಸಾಕ್ಷ್ಯ ನೀಡಿದ ಜನರಲ್ ಡೈರ್‌ಗೆ ಯಾವ ಪಶ್ಚಾತಾಪದ ಭಾವನೆಯಿರಲಿಲ್ಲ. ಬದಲಾಗಿ ತನ್ನ ಕ್ರಮವನ್ನು ಸಮರ್ಥಿಸಿಕೊಂಡಿದ್ದ. ಜನರಿಗೆ ಯಾವ ಮುನ್ಸೂಚನೆಯನ್ನು ನೀಡದೆ ಗುಂಡು ಹಾರಿಸಿರುವುದನ್ನು ಡೈರ್ ಒಪ್ಪಿಕೊಂಡು ಹೇಳಿದ್ದು ಹೀಗೆ, "ನಾನು ಜನರ ಗುಂಪು ಚದುರುವವರೆಗೂ ಗುಂಡು ಹಾರಿಸುವುದನ್ನು ಮುಂದುವರೆಸಿದೆ. ಇದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ ಮತ್ತು ಇದರ ಮೂಲಕ ನೈತಿಕ ಮತ್ತು ಸಾಮೂಹಿಕ ಪರಿಣಾಮ ಉಂಟಾಗಲಿ ಎಂದು ಭಾವಿಸಿ ಈ ಕೃತ್ಯವನ್ನು ನಡೆಸಿದ್ದೇನೆ. ಇನ್ನೂ ಹೆಚ್ಚಿನ ಸೈನ್ಯ ಮತ್ತು ಮದ್ದುಗುಂಡು ಇದ್ದಿದ್ದರೆ ಪರಿಣಾಮ ಇನ್ನೂ ದೊಡ್ಡ ಪ್ರಮಾಣದ್ದಾಗುತ್ತಿತ್ತು. ಇದು ಕೇವಲ ಗುಂಪು ಚದುರಿಸಲು ನಡೆಸಿದ ಕೃತ್ಯವಲ್ಲ. ಸಭೆಯಲ್ಲಿ ಭಾಗವಹಿಸಿದ್ದವರ ಮತ್ತು ಇಡೀ ಪಂಜಾಬ್ ಕಲಿಯಬೇಕಿರುವ ನೀತಿ ಪಾಠದ ಅಂಗವೆಂದು ಭಾವಿಸಿದ್ದೇನೆ. ಇದು ಯಾವುದೇ ರೀತಿಯಲ್ಲಿ ಅನಗತ್ಯ ತೀಕ್ಷ್ಣ ಕ್ರಮವಾಗಿರಲಿಲ್ಲ." ಎಂದು ಸ್ಟಾಫ್ ಕಮಿಷನ್ ಗೆ ಆಗಸ್ 25, 1919 ರಂದು ಕೊಟ್ಟ ವರದಿಯಲ್ಲಿ ಹೇಳಿದ್ದ.

"ಇಡೀ ಪಂಜಾಬಿನಲ್ಲಿ ಭಯೋತ್ಪಾದನೆ ಮಾಡುವುದು" ತನ್ನ ಉದ್ದೇಶವಾಗಿತ್ತು ಮತ್ತು ಅದಕ್ಕಾಗಿ "ಸಭೆ ಮುಂದುವರೆದರೆ ಭಾಗವಹಿಸಿದ ಎಲ್ಲರನ್ನೂ ಮುಗಿಸಿಬಿಡಲು ನಾನು ದೃಢ ನಿಶ್ಚಯ ಮಾಡಿದ್ದೆ" ಎಂದು ಜನರಲ್ ಡೈರ್ ಕೊಚ್ಚಿಕೊಂಡಿದ್ದ.

ಸ್ವಾತಂತ್ರ್ಯ ಹೋರಾಟದ ಪ್ರಮುಖ ತಿರುಗುಬಿಂದು

ಈ ಹತ್ಯಾಕಾಂಡ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ತಿರುಗುಬಿಂದು ಆಯಿತು.. ಬ್ರಿಟೀಷರಿಗೆ ಅಮೃತಸರದ ಕಾಂಗ್ರೆಸ್ ಅಧಿವೇಶನವನ್ನು ನಿಲ್ಲಿಸಲು ಸಾಧ್ಯವಾಗಲಿಲ್ಲ. ಈ ಅಧಿವೇಶನ ಜನತೆಯ ಐಕ್ಯತೆಯನ್ನು ಗಟ್ಟಿಗೊಳಿಸಿತು.

ಹತ್ಯಾಕಾಂಡದ ವಿರುದ್ಧ ಆಕ್ರೋಶ ಎಷ್ಟು ತೀಕ್ಷ್ಣವಾಗಿತ್ತೆಂದರೆ, ರವೀಂದ್ರನಾಥ್ ಟಾಗೋರ್ ರವರು ತಮ್ಮ ನೈಟ್‌ಹುಡ್ ಪ್ರಶಸ್ತಿಯನ್ನು ವಾಪಸು ಮಾಡಿದರು. ಅವರು ವೈಸ್‌ರಾಯ್‌ಗೆ ಬರೆದ ಮೇ 31, 1919 ರ ಪತ್ರದ ಕೆಲವು ಅಂಶಗಳು ಹೀಗಿವೆ "ಪ್ರಮಾಣಕ್ಕೆ ಮೀರಿದ ಶಿಕ್ಷೆಯನ್ನು ಅಮಾಯಕರ ಮೇಲೆ ಹೊರಿಸಿರುವುದು ಮತ್ತು ಅದಕ್ಕೆ ಅನುಸರಿಸಿದ ಕಾರ್ಯವಿಧಾನಕ್ಕೆ ಸಾಟಿಯಾದ ಇನ್ನೊಂದು ಘಟನೆ ನಾಗರೀಕ ಇತಿಹಾಸದಲ್ಲಿ ಇನ್ನೊಂದು ಇಲ್ಲ ಎಂಬುದು ನನಗೆ ಖಾತ್ರಿಯಾಗಿದೆ. .. .. ಪಂಜಾಬ್ ಸಹೋದರರು ಅನುಭವಿಸಿರುವ ಸಂಕಟ ಮತ್ತು ಅಪಮಾನದ ಗಾಥೆಗಳು, ಸ್ಮಶಾನ ಮೌನದ ನಡುವೆಯೂ ಭಾರತದ ಮೂಲೆಗಳನ್ನು ತಲುಪಿದೆ. ಜನತೆಯ ಹೃದಯದಲ್ಲಿ ಜ್ವಾಲೆಯೆಬ್ಬಿಸಿದೆ. ಇದು ಆಳುವವರಿಗೆ ಕಾಣದಿರಬಹುದು .. ..ನಾನು ನನ್ನ ದೇಶಕ್ಕೆ ಮಾಡಬಹುದಾದ ಕನಿಷ್ಟ ಕರ್ತವ್ಯವೆಂದರೆ, ಎಲ್ಲ ರೀತಿಯ ಪರಿಣಾಮಗಳನ್ನು ಎದುರಿಸಿ, ಈ ಭಯೋತ್ಪಾದಕ ಕೃತ್ಯದಿಂದ ಮೂಕರಾದ ಮಿಲಿಯಾಂತರ ನನ್ನ ದೇಶದ ಜನರಿಗೆ ದನಿಯಾಗುವುದು. ಗೌರವದ ಪದಕಗಳು ಅಪಮಾನದ ಸಾಕ್ಷಿಗಳಾಗಿ ಮುಖಕ್ಕೆ ರಾಚುವ ಈ ಸಂದರ್ಭದಲ್ಲಿ, ಅವುಗಳನ್ನು ಧರಿಸುವುದು ಮತ್ತು ವಿಶೇಷವಾದ ಸ್ಥಾನಮಾನ ಪಡೆಯುವುದನ್ನು ಬಿಟ್ಟು ನಾನು ನನ್ನ ಜನಗಳ ಜತೆಯಲ್ಲಿ ನಿಲ್ಲುತ್ತೇನೆ. ಕಾರಣ ನನ್ನ ಜನ ಮನುಷ್ಯ ಜಾತಿಗೆ ಸಲ್ಲದ ಅಪಮಾನ ಅನುಭವಿಸುತಿದ್ದಾರೆ."

ಪಂಜಾಬ್‌ನ ಪ್ರಸಿದ್ಧ ಕವಿ ನಾನಕ್‌ಸಿಂಗ್ "ಖೂನಿ ಬೈಸಾಕಿ" ಎಂಬ ನೀಳ್ಗವಿತೆ ಬರೆದರು. ಅದನ್ನು ಬ್ರಿಟಿಷರು ಬಹಿಷ್ಕರಿಸಿದರೂ ಭಾರತದ ಉದ್ದಗಲಕ್ಕೂ ಅದು ಹಬ್ಬಿ ಸ್ವಾತಂತ್ರ ಕಿಚ್ಚನ್ನು ಬಲಪಡಿಸಿತು.

21 ವರ್ಷದ ನಂತರ ಮಾರ್ಚ್ 13, 1940 ರಂದು ಈ ಹತ್ಯಾಕಾಂಡ ಕಣ್ಣಾರೆ ನೋಡಿದ್ದ 15 ವರ್ಷದ ಅನಾಥ ಬಾಲಕ ಉದಮ್‌ಸಿಂಗ್, ಆಗ ಪಂಜಾಬಿನ ಲೆ. ಗವರ್ನರ್ ಆಗಿದ್ದ ಮೈಖಲ್ ಒ ಡಾಯರ್ ನನ್ನು ಲಂಡನ್ನಿನ ಕಾಕ್ಸ್‌ಟನ್ ಹಾಲಿನಲ್ಲಿ ಗುಂಡಿಕಿ ಕೊಂದ. ಪೋಲಿಸರು ದಸ್ತಗಿರಿ ಮಾಡಿದಾಗ

ಪುಟ 11 ಕ್ಕೆ



ಮಹಿಳಾ ಸಮಾನತೆಯತ್ತ..
..ಸರಣಿ ಸುಪ್ರೀಂ ತೀರ್ಪುಗಳು

ಕೆ.ಎಸ್. ವಿಮಲ

ಕಳೆದ ಒಂದೆರಡು ವಾರಗಳಲ್ಲಿ ಸುಪ್ರೀಂ ಕೋರ್ಟು ಕೊಟ್ಟ ಮಹತ್ವದ ತೀರ್ಪುಗಳಲ್ಲಿ ಹಲವು ಮಹಿಳೆಯರ ಹಕ್ಕುಗಳಿಗೆ, ಲಿಂಗ ಸಮಾನತೆಗೆ ಸಂಬಂಧಿಸಿದ್ದು. ವರದಕ್ಷಿಣೆ ನಿಷೇಧ ಕಾಯ್ದೆ ಜಾಳಾಗಿಸುವುದಕ್ಕೆ ತಡೆ ಒಡ್ಡಿದ, ವ್ಯಭಿಚಾರ ಕ್ರಿಮಿನಲ್ ಅಪರಾಧವಲ್ಲ ಎಂದು ಸಾರಿದ, ಪೂಜಾಸ್ಥಳಗಳಿಗೆ ಮಹಿಳೆಯರ ಪ್ರವೇಶ ನಿಷೇಧ ಮತ್ತು ಲೈಂಗಿಕ ಅಲ್ಪ ಸಂಖ್ಯಾತರ ಹಕ್ಕುಗಳ ಮೇಲೆ ಪ್ರತಿಬಂಧ ಅಸಾಂವಿಧಾನಿಕವೆಂದ ತೀರ್ಪುಗಳ ಬಗ್ಗೆ ನಡೆಯುತ್ತಿರುವ ಚರ್ಚೆಯ ಭಾಗವಾಗಿ ಈ ಲೇಖನ.



ಇದ್ದಕ್ಕಿದಂತೆ ಮೇಘಸ್ಫೋಟವಾದಂತೆ ಸರ್ವೋಚ್ಚ ನ್ಯಾಯಾಲಯದಿಂದ ಮಹಿಳೆಯರಿಗೆ ಸಂಬಂಧಿಸಿದ ಹಲವು ವಿಷಯಗಳಲ್ಲಿ ಏಕ ಕಾಲದಲ್ಲಿ ತೀರ್ಪುಗಳು ನ್ಯಾಯದ ಪರವಾಗಿ ಬರುತ್ತಿವೆ. ಇದೊಂದು ಆಶಾದಾಯಕ ಸಂಗತಿ.

ಒಂದರ ಹಿಂದೆ ಒಂದರಂತೆ ಒಂದರ ಜೊತೆ ಮತ್ತೊಂದು ಪೈಪೋಟಿ ನಡೆಸುವಂತೆ ಹೊರಬೀಳುತ್ತಿರುವ ನ್ಯಾಯದ ತೀರ್ಪುಗಳು ಸಾಮೂಹಿಕ ಅತ್ಯಾಚಾರಕ್ಕೆ ಒಳಗಾಗಿ, ಅವಳ ಪ್ರಕರಣದ ಕಾರಣದಿಂದ ಕಾನೂನು ಬಂದಾಯ್ತಾದರೂ ಅವಳಿಗಿನ್ನೂ ನ್ಯಾಯ ಸಿಕ್ಕಿಲ್ಲ. ಭಾಂವ್ರೀದೇವಿಯ ಕನವರಿಕೆಯಿಂದ ನಾವು ಹೊರಬಂದೇ ಇಲ್ಲ. ಆದರೆ ಈಗ ಕಗ್ಗತ್ತಲಿನಲ್ಲಿ ಒಂದು ಕೋಲ್ಮಿಂಚು ಝಳಪಿಸಿ ದಾರಿ ತೋರುವಂತೆ ಇತ್ತೀಚಿನ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು ಬಂದಿವೆ.

ಇತ್ತೀಚಿನ ಸರಣಿಯಲ್ಲಿ ಬಹು ವಿವಾದಿತ, ಚರ್ಚಿತ ಸೆಕ್ಷನ್ 377 ಎಲ್.ಜಿ.ಬಿ.ಟಿ. ಸಮುದಾಯದ ಲೈಂಗಿಕ ಹಕ್ಕಿನ ಕುರಿತಂತೆ ಬಂದ ತೀರ್ಪಿನಿಂದ ಪ್ರಾರಂಭವಾಗಿ, ಎರಡು ದಿನಗಳ ಹಿಂದೆ ಬಂದ ಪೂಜಾ ಸ್ಥಳಗಳಿಗೆ ಮಹಿಳೆಯರ ಪ್ರವೇಶದ ಹಕ್ಕಿನ ಕುರಿತಂತೆ, ವರದಕ್ಷಿಣೆ ನಿಷೇಧ ಕಾಯ್ದೆ, 498(ಎ), ವ್ಯಭಿಚಾರಕ್ಕೆ ಸಂಬಂಧಿಸಿದ 497 ರದ್ದತಿ ಹೀಗೆ ಸಿಕ್ಕ ನ್ಯಾಯದ ತೀರ್ಪುಗಳು ಕುಂದುತ್ತಿರುವ ಆಶಾವಾದಕ್ಕೆ ತಡೆಯಾಜ್ಞೆ ನೀಡಿದಂತಿದೆ. ಈ ಹಿನ್ನೆಲೆಯಲ್ಲಿ ಈ ತೀರ್ಪುಗಳು ಮತ್ತು ಅವಗಳಿಗಿರುವ ವಿವಿಧ ಆಯಾಮಗಳು ಗೋಚರಿಸುತ್ತವೆ.

ಲೈಂಗಿಕ ಅಲ್ಪ ಸಂಖ್ಯಾತರ ಹಕ್ಕು

ಸೆಕ್ಷನ್ 377: ಲೈಂಗಿಕ ಅಲ್ಪ ಸಂಖ್ಯಾತರು ಅಥವಾ ಯಾರೇ ಇರಲಿ ಇಬ್ಬರು ಪ್ರಾಪ್ತ ವಯಸ್ಕರು, ಸ್ವ ಇಚ್ಛೆಯಿಂದ ಹೊಂದುವ ಲೈಂಗಿಕ ಸಂಬಂಧ ಅಪರಾಧವಲ್ಲವೆಂದು ಸುಪ್ರಿಂ ಕೋರ್ಟು ತೀರ್ಪು ನೀಡಿತು. ಈ ಮೊದಲು ಸಲಿಂಗಕಾಮ ಶಿಕ್ಷಾರ್ಹ ಅಪರಾಧವಾಗಿತ್ತು. 2013ರಲ್ಲಿ ಸುರೇಶ್ ಕುಶಾಲ್ ಎನ್ನುವವರ ಪ್ರಕರಣದಲ್ಲಿ ಸಲಿಂಗಕಾಮವನ್ನು ಶಿಕ್ಷಾರ್ಹ ಅಪರಾಧ ಎಂದು ಕೊಟ್ಟ ತೀರ್ಪನ್ನು ಅನೂರ್ಜಿತಗೊಳಿಸಿ ಈ ತೀರ್ಪನ್ನು ನೀಡಿದ ಸುಪ್ರಿಂ ಕೋರ್ಟ್, ಬಹು ಸಂಖ್ಯಾತರ ನೈತಿಕತೆಯ ಭಾವನೆಗಳನ್ನು ಗೌರವಿಸುವ ನೆಲೆಯಲ್ಲಿ, ಪ್ರತಿಯೊಬ್ಬ ವ್ಯಕ್ತಿಯ ಸಹಜ ದೈಹಿಕ ಬಯಕೆಯಾದ ಲೈಂಗಿಕತೆಯ ಮೇಲೆ ದಾಳಿ ಮಾಡಲು ಯಾರಿಗೂ ಹಕ್ಕಿಲ್ಲವೆಂದು ಹೇಳಿದಂತಾಗಿದೆ. ಐ.ಪಿ.ಸಿ. ಸೆಕ್ಷನ್ 377ರ ಪ್ರಕಾರ ಇದುವರೆಗೆ ಪ್ರಕೃತಿ ಸಹಜವಾದ ಗಂಡು ಹೆಣ್ಣಿನ ಸಂಬಂಧಕ್ಕೆ ವ್ಯತಿರಿಕ್ತವಾಗಿ ಸಲಿಂಗಿಗಳು ನಡೆಸುವ ಲೈಂಗಿಕ ಕ್ರಿಯೆಯು ಅಸಹಜವಾಗಿದ್ದು ಎಂದು ಪರಿಗಣಿಸುತ್ತಿತ್ತು. ಮತ್ತು ಅದಕ್ಕೆ ಹತ್ತು ವರ್ಷಗಳ ಸೆರೆವಾಸದ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು. ಇದೊಂದು ಎಲ್.ಜಿ.ಬಿ.ಟಿ ಸಮುದಾಯದವರಿಗೆ ಕಿರುಕುಳ ನೀಡುವ ಅಸ್ತ್ರವಾಗಿ ಬಳಕೆಯಾಗುತ್ತಿತ್ತು.

ವೈಯಕ್ತಿಕ ಆಯ್ಕೆಯನ್ನು ಗೌರವಿಸುವುದು ಸ್ವಾತಂತ್ರದ ಮೂಲ ಲಕ್ಷಣವಾಗಿದ್ದು. ಎಲ್.ಜಿ.ಬಿ.ಟಿ ಸಮುದಾಯವೂ ಕೂಡ ಇತರರಂತೆಯೇ ಸಂವಿಧಾನ ನೀಡಿದ ಎಲ್ಲ ಹಕ್ಕುಗಳನ್ನೂ ಪಡೆಯಲು ಅರ್ಹರು ಎಂದು ಮುಖ್ಯನ್ಯಾಯಾಧೀಶರು ಈ ಪ್ರಕರಣದ ತೀರ್ಪಿನ ಸಂದರ್ಭದಲ್ಲಿ ಹೇಳಿದ್ದಾರೆ. ಒಬ್ಬ ವ್ಯಕ್ತಿಯ ಲೈಂಗಿಕ ಆಯ್ಕೆಗಳಿಗೆ ಕಡಿವಾಣ ಹಾಕುವುದು ಎಂದರೆ ವ್ಯಕ್ತಿಯ ಖಾಸಗೀತನದ ಸ್ವಾತಂತ್ರಕ್ಕೆ ದಿಗ್ಬಂಧನ ವಿಧಿಸಿ ಅವರ ಆಯ್ಕೆಯ ಬದುಕನ್ನು ಕಸಿದುಕೊಂಡಂತಾಗುತ್ತದೆ ಎಂದೂ ಅಭಿಪ್ರಾಯ ಪಟ್ಟಿದ್ದಾರೆ. ಸಮಾಜದ ಅಜ್ಞಾನದ ಕಾರಣದಿಂದ ತಮ್ಮ ಬದುಕಿನ ಹಕ್ಕನ್ನು ಕಳೆದುಕೊಂಡ ಎಲ್.ಜಿ.ಬಿ.ಟಿ. ಸಮುದಾಯದ ಕ್ಷಮೆ ಕೋರಬೇಕು ಈ ಸಮಾಜ ಎಂದೂ ಇನ್ನೊಬ್ಬ ನ್ಯಾಯಾಧೀಶರು ಹೇಳಿದ್ದಾರೆ. ಅವರ ಬದುಕಿನ ಮೂಲಭೂತ ಹಕ್ಕಿಗೇ ಚ್ಯುತಿ ತಂದ ಬಗ್ಗೆ ಖೇದ ವ್ಯಕ್ತಪಡಿಸಿದ್ದಲ್ಲದೇ ಸೆಕ್ಷನ್ 377ನ್ನು ಅಪರಾಧ ಮುಕ್ತಗೊಳಿಸಿದ್ದು ಈ ದಿಸೆಯಲ್ಲಿ ಮೊದಲ ಹೆಜ್ಜೆ ಎಂದು ಬಣ್ಣಿಸಿ, ಎಲ್.ಜಿ.ಬಿ.ಟಿ.ಸಮುದಾಯದವರಿಗೆ ಸಂವಿಧಾನಾತ್ಮಕವಾಗಿ ಸಿಗಬೇಕಾದ ಎಲ್ಲ ಹಕ್ಕುಗಳನ್ನೂ ಕೊಡಲು ಮುಂದಾಗಬೇಕೆಂದು ಜಸ್ಟೀಸ್ ಚಂದ್ರಚೂಡರವರು ಹೇಳಿದ್ದಾರೆ. ಮುಖ್ಯ ನ್ಯಾಯಾಧೀಶರು ಸಲಿಂಗಕಾಮವನ್ನು ಅಪರಾಧವೆಂದು ಪರಿಗಣಿಸುವುದು ಅಸಮಂಜಸ, ಅಸಮರ್ಥನೀಯ, ಮತ್ತು ಕಣ್ಣಿಗೆ ಕಾಣುವ ಅವಿಚಾರಿಕ ಸಂಗತಿಯಾಗಿದೆ ಎಂದರೆ ಜಸ್ಟೀಸ್ ನಾರಿಮನ್ ರವರು ರಾಜ್ಯ ಸರ್ಕಾರಗಳು ಈ ತೀರ್ಪಿಗೆ ದೊಡ್ಡ ಪ್ರಚಾರ ಕೊಡಬೇಕು ಮತ್ತು ಇದರ ಪ್ರಮುಖ ಜಾರೀದಾರರಾದ ಪೋಲೀಸರಿಗೆ ಸಂವೇದನೆ ಮೂಡಿಸಬೇಕು ಎಂದು ಹೇಳಿದ್ದಾರೆ.

ಹಾಗಾಗಿ ಇದು ಎಲ್.ಜಿ.ಬಿ.ಟಿ ಸಮುದಾಯವನ್ನು ಉಳಿದೆಲ್ಲರಂತೆಯೇ ಪರಿಗಣಿಸುವತ್ತ ಒಂದು ಸಕಾರಾತ್ಮಕ ಹೆಜ್ಜೆಯಾಗಿ ಅವರಿಗೆ ಸಿಗುವ ಎಲ್ಲ ಸಂವಿಧಾನಾತ್ಮಕ, ನಾಗರಿಕ ಹಕ್ಕುಗಳು ಸಿಗುವಂತಾಗಬೇಕು. ಆ ದಿಕ್ಕಿನಲ್ಲಿ ಈ ಪ್ರಗತಿಶೀಲ ತೀರ್ಪು ಒಂದು ಸ್ಪಷ್ಟ ಹೆಜ್ಜೆಯೆಂಧು ಭಾವಿಸಬಹುದು. ಆದರೆ ಈ ಕಾಲಘಟ್ಟದಲ್ಲಿಯೂ ಇದಕ್ಕೆ ಅಪಸ್ವರ ಎತ್ತಿದವರಿದ್ದಾರೆ. ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಇದನ್ನು ವಿರೋಧಿಸಿದ್ದು ಇದು ಅಸಹಜವೆಂದು ವರ್ಣಿಸಿದೆ. ಜಮಾತೆ ಇಸ್ಲಾಮೀ ಹಿಂದ್ ಕೂಡ ವಿರೋಧಿಸಿದೆ ಮತ್ತು ಸುಪ್ರಿಂಕೋರ್ಟಿನ ಆದೇಶಕ್ಕೆ ವಿರುದ್ಧವಾಗಿ ಸರ್ಕಾರ ಸುಗ್ರೀವಾಜ್ಞೆ ಜಾರಿಗೆ ತರಬೇಕೆಂದರೆ, ರಾಷ್ಟ್ರೀಯ ಸ್ವಯಂ ಸೇವಕ ಸಂಘ ತಾನು ಸೆಕ್ಷನ್ 377ನ್ನು ಕ್ರಿಮಿನಲ್ ಅಪರಾಧವೆಂದು ಪರಿಗಣಿಸುವುದಿಲ್ಲವಾದರೂ ಅದು ಪ್ರಕೃತಿಗೆ ವಿರುದ್ಧವಾದದ್ದು ಮತ್ತು ಮನುಷ್ಯ ಸಹಜ ನಡವಳಿಕೆಯಲ್ಲವೆಂದೇ ಪರಿಗಣಿಸುತ್ತದೆ ಎಂದಿದೆ. ಗಂಗೆಯಲ್ಲಿ ನೀರೆಷ್ಟು ಹರಿದು ಹೋದರೂ ಮಾನಸಿಕ ಮೂಲಭೂತವಾದಿಗಳ ಮನಃಸ್ಥಿತಿಯಲ್ಲಿ ಮೂಲಭೂತ ಬದಲಾವಣೆಯಾಗುವುದಿಲ್ಲವೆಂಬುದು ಮತ್ತೊಮ್ಮೆ ಸಾಬೀತಾಗಿದೆ.

ವರದಕ್ಷಿಣೆ ನಿಷೇಧ ಕಾಯ್ದೆ ಜಾಳಾಗಿಸುವುದಕ್ಕೆ ತಡೆ

498 (ಎ): ಈ ದೇಶದಲ್ಲಿ 1961 ರಲ್ಲಿಯೇ ವರದಕ್ಷಿಣೆ ನಿಷೇಧ ಕಾಯ್ದೆ ಜಾರಿಗೆ ಬಂದಿದೆ. ಅದರ ಪ್ರಕಾರ ವರದಕ್ಷಿಣೆ ತೆಗೆದುಕೊಳ್ಳುವುದು ಮತ್ತು ಕೊಡುವುದು ಎರಡೂ ಅಪರಾಧವೇ. ಅರ್ಧ ಶತಮಾನಕ್ಕಿಂತಲೂ ಹೆಚ್ಚು ಕಾಲದಿಂದ ಜಾರಿಯಲ್ಲಿ ಕಾನೂನಿದೆ. ಆದರೆ ವರದಕ್ಷಿಣೆ ಸಂಬಂಧೀ ಅಪರಾಧಗಳಲ್ಲಿ ಇಳಿಕೆಯಾಗಿಲ್ಲ. ಹಾಗೆಯೇ ಶಿಕ್ಷೆಯ ಪ್ರಮಾಣವೂ ಏರಿಕೆಯಾಗಿಲ್ಲ. ಇಂದಿಗೂ ತೀವ್ರತರನಾದ ದೈಹಿಕ ಹಿಂಸೆಗಳು, ಮಾನಸಿಕ ಕಿರುಕುಳಗಳು, ವಿನಾಕಾರಣ ದೂಷಣೆ, ಮನೆಯಿಂದ ಹೊರದಬ್ಬುವುದು, ಮಕ್ಕಳನ್ನು ಕಿತ್ತುಕೊಂಡು ಯಾತನೆ ಕೊಡುವುದು, ಇವೆಲ್ಲ ಸರ್ವೇ ಸಾಮಾನ್ಯವೆಂಬಂತೆ ನಡೆಯುತ್ತವೆ. ಈ ಎಲ್ಲವುಗಳ ಕುರಿತು ಮಾತು ಚರ್ಚೆಗಳು, ಪ್ರತಿಭಟನೆ, ಪ್ರತಿರೋಧಗಳು ನಿರಂತರ ನಡೆಯುತ್ತಿವೆ. ಅದನ್ನೆಲ್ಲ ಮರೆಸಲು ಪುಂಖಾನು ಪುಂಖವಾಗಿ ಕರ್ಣಾನಂದ ಘೋಷಣೆಗಳು, ಆಕರ್ಷಕ ಭರವಸೆಗಳು, ಮಹಿಳಾಪರ ಯೋಜನೆಗಳು ಬಿತ್ತರಿಸಲ್ಪಡುತ್ತಿವೆ. ಅದನ್ನೇ ಕೇಳುತ್ತ ಅದರ ಗುಂಗಿನಲ್ಲಿ ದೇಶದ ಜನರು ತೇಲಾಡುವಂತೆ ಮಾಡುತ್ತ ಉಳಿದೆಲ್ಲವನ್ನೂ ಮರೆಯುವಂತೆ ಮಾಡಲಾಗುತ್ತಿದೆ.

ಆದರೆ ಈ ಸಮಾಜ ವರದಕ್ಷಿಣೆಯ ಪಿಡುಗಿಗೆ ಬಲಿಯಾಗಿ ನರಳುತ್ತಿರುವ ಸಮಾಜ. ರೋಗಕ್ಕೆ ಮದ್ದು ಸಮಾಜಕ್ಕೆ ಮುಕ್ತಿ, ನೊಂದವರಿಗೆ ಸಾಂತ್ವನ ಮಾಡಬೇಕಾದ ವ್ಯವಸ್ಥೆ ಕಾನೂನನ್ನೇ ಜಾಳಾಗಿಸಲು ಹೊರಟಿತ್ತು. ಎಲ್ಲಿ ನ್ಯಾಯ ಸಿಗಬೇಕೋ ಅಲ್ಲಿಯೇ ಅನ್ಯಾಯಕ್ಕೆ ಪುಷ್ಟಿ ದೊರಕುವಂತೆಯೂ ಮಾತುಗಳು ಹೊರಬಿದ್ದವು. ಯಾವುದೇ ಪ್ರಕರಣ ಒಂದು ತಾರ್ಕಿಕ ಅಂತ್ಯ ಕಾಣಬೇಕೆಂದರೆ ಪ್ರಾಥಮಿಕ ಘಟ್ಟದಲ್ಲಿ ದೂರು ದಾಖಲೆ, ಸಾಕ್ಷಿ ಸಂಗ್ರಹ ಮತ್ತು ಸಾಕ್ಷಿ ನಾಶವಾಗದಂತೆ ಕಾಪಾಡುವ ಈ ಎಲ್ಲ ಕೆಲಸಗಳು ತಳ ಹಂತದ ಪೋಲೀಸ್ ಮತ್ತು ಇನ್ವೆಸ್ಟಿಗೇಷನ್ ಅಧಿಕಾರಿಗಳ ಕಾರ್ಯಕ್ಷಮತೆ ಮತ್ತು ಬದ್ಧತೆ, ಪ್ರಾಮಾಣಿತೆಯನ್ನು ಅವಲಂಬಿಸಿ ಇರುತ್ತದೆ. ಅಲ್ಲಿ ಅದಾವುದೂ ಕಾಣದ ಕಾರಣದಿಂದ ದಾಖಲಾದ ದೂರುಗಳು ಪ್ರಕರಣವಾಗುವುದಿಲ್ಲ. ಪ್ರಕರಣಗಳು ಸಾಬೀತಾಗುವಲ್ಲಿ ಸೋಲುತ್ತವೆ. ಅಥವಾ ಅನಗತ್ಯ ವಿಳಂಬದಿಂದಾಗಿ ವರ್ಷಾನುಗಟ್ಟಲೇ ಕೋರ್ಟುಗಳಲ್ಲಿಯೇ ಕೊಳೆಯುತ್ತವೆ. ಬಾಕಿ ಇರುವ ಪ್ರಕರಣಗಳ ಸಂಖ್ಯೆಯಿಂದ ತಮ್ಮದೇ ಕಾರ್ಯವೈಖರಿಯ ಬಗ್ಗೆ, ಇರುವ ಕೊರತೆಗಳ ಬಗ್ಗೆ ಗಮನಹರಿಸಿ ಪರಿಹರಿಸುವ ಬದಲು ಪ್ರಕರಣಗಳೇ ಸುಳ್ಳು ಎಂಬ ತೀರ್ಮಾನಕ್ಕೆ ಬಂದು, ಒಪ್ಪಿಕೊಳ್ಳಲಾರದ, 1961 ರ ಕಾಯ್ದೆಯನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಜಾಳಾಗಿಸಿ, ಕಾನೂನಿನ ಒಪ್ಪಿಗೆಯಿಲ್ಲದೇ ಹೊಸ ಹೊಸ ಕ್ರಮಗಳನ್ನು ವಿಧಿಸಿ ಆದೇಶಗಳೂ ಬಂದವು.

ಈ ಕಾನೂನಿಗೆ ಸಲ್ಲದ ವಿಷಯಗಳ ಬಗ್ಗೆ ಇಲ್ಲಿ ಈ ಹಿಂದೆಯೂ ಬರೆಯಲಾಗಿದೆ. ಆದರೆ ಎಲ್ಲಿ ಒಪ್ಪಲಾರದ ತೀರ್ಪು ಬಂದಿತ್ತೋ ಅಲ್ಲಿಯೇ ಒಪ್ಪವಾದ ಮತ್ತೊಂದು ಆದೇಶ ಮತ್ತೆ ಹೊರಬಿದ್ದಿತು. ಅದು ಈ ಹಿಂದಿನ ತೀರ್ಪಿನ ಅನುಸಾರ ರಚನೆಯಾಗಬೇಕಿದ್ದ, ಕಾನೂನಿನಲ್ಲಿ ಮಾನ್ಯತೆ ಹೊಂದಿರದ ಕುಟುಂಬ ಕಲ್ಯಾಣ ಸಮಿತಿಗಳನ್ನು ರದ್ದು ಮಾಡಿತು. 498(ಎ) ಐ.ಪಿ.ಸಿ ಪ್ರಕಾರ ಕೌಟುಂಬಿಕ ದೌರ್ಜನ್ಯದ ದೂರು ಬಂದ ಎಲ್ಲ ಪ್ರಕರಣಗಳನ್ನೂ ಪರಿಶೀಲಿಸಿ ನಂತರ ಎಫ್.ಐ.ಆರ್. ಹಾಕುವ ಸೂಚನೆಯನ್ನು ನೀಡಲಾಗಿತ್ತು. ಬಹಳ ಸರಿಯಾಗಿ ಸುಪ್ರಿಂಕೋರ್ಟ್ ಅಂತಹ ಸಮಿತಿಗಳ ರಚನೆ ಮತ್ತು ಅವರಿಗೆ ಅಧಿಕಾರ ನೀಡುವುದು ಕಾನೂನಿಗೆ ವಿರುದ್ಧವಾದದ್ದು ಎಂದು ಸ್ಪಷ್ಟಪಡಿಸಿದೆ. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಈ ಪ್ರಕರಣದಲ್ಲಿ ಮಧ್ಯಪ್ರವೇಶ ಮಾಡಿ ನ್ಯಾಯನೀಡಿಕೆಯ ವ್ಯವಸ್ಥೆಯಲ್ಲಿ ಕಾನೂನಿನ ಮಾನ್ಯತೆಯಿಲ್ಲದ, ಪ್ರಶ್ನಾರ್ಹ ಸಮಿತಿಗಳ ರಚನೆಗೆ

ಪುಟ 10 ಕ್ಕೆ





ಮಹಿಳಾ ಸಮಾನತೆಯತ್ತ.. ..ಸರಣಿ ಸುಪ್ರೀಂ ತೀರ್ಪುಗಳು........ ಪುಟ 9 ರಿಂದ

ಅವಕಾಶವಿರಕೂಡದು ಎಂದು ಒತ್ತಾಯಿಸಿತ್ತು. ಹೀಗೆ ಅವಕಾಶ ಮಾಡಿಕೊಡುವುದೆಂದರೆ ನ್ಯಾಯ ನೀಡಿಕೆಯ ಕಾನೂನಾತ್ಮಕ ಕ್ರಮಗಳೀಗೆ ಬದಲಾಗಿ ಕಟ್ಟೆ ಪಂಚಾಯ್ತಿಗಳು, ಖಾಪ್ ಪಂಚಾಯ್ತಿಗಳಿಗೆ ಮಾನ್ಯತೆ ನೀಡಿದಂತೇ ಆಗುತ್ತದೆ ಎಂದು ವಾದಿಸಿತ್ತು. ಸುಪ್ರೀಂ ಕೋರ್ಟ ಕೂಡ ಒಮ್ಮೆ ಯಾವುದೇ ರಾಜಿ ಅಥವಾ ಸಹಮತದ ಮಾತುಕತೆಗಳು ದೂರುದಾರ ಮತ್ತು ಪ್ರತಿವಾದಿಗಳ ಮಧ್ಯೆ ಏರ್ಪಟ್ಟಾಗಲೂ ಅದನ್ನು ಉಚ್ಚ ನ್ಯಾಯಾಲಯದಲ್ಲಿಯೇ ಬಗೆಹರಿಸಿಕೊಳ್ಳಬೇಕೆಂದು ಸ್ಪಷ್ಟ ಪಡಿಸಿದೆ.

ಆದರೆ ಅದೇ ಸಂದರ್ಭದಲ್ಲಿ ಲಕ್ಷಗಟ್ಟಲೇ ಬಾಕಿ ಇರುವ ಪ್ರಕರಣಗಳನ್ನು ಉದಾಹರಿಸಿ, ಬಹಳ ಸಂದರ್ಭಗಳಲ್ಲಿ ಆರೋಪ ಸಾಬೀತಾಗದೇ ಬಿಡುಗಡೆ ಹೊಂದುವುದನ್ನು ಉಲ್ಲೇಖಿಸಿ, ಬಹಳ ಜನ ಮಹಿಳೆಯರು ವರದಕ್ಷಿಣೆ ನಿಷೇಧ ಕಾಯ್ದೆಯನ್ನು ರಕ್ಷಣೆಗೆ ಬದಲು ಆಯುಧವನ್ನಾಗಿ ಬಳಸುತ್ತಾರೆ ಎಂಬ ಬೀಸು ಹೇಳಿಕೆಯನ್ನೇ ಒಪ್ಪುವಂತೆ ಅಭಿಪ್ರಾಯ ವ್ಯಕ್ತಪಡಿಸಿದೆ. ಆರೋಪಿಗಿರುವ ಹಕ್ಕುಗಳನ್ನೂ ಕಾಪಾಡಬೇಕೆಂಬ ಮಾತನ್ನೂ ಹೇಳಿದೆ. ದೇಶದ ಮಹಿಳಾ ಸಂಘಟನೆಗಳು ಇದಕ್ಕೆ ಸಹಮತ ವ್ಯಕ್ತಪಡಿಸಿಲ್ಲ. ಜನವಾದಿ ಮತ್ತಿತರ ಸಂಘಟನೆಗಳು ತಮ್ಮ ಚಾರಿತ್ರಿಕ ಜವಾಬ್ದಾರಿಯ ಭಾಗವಾಗಿಯೇ ಇದನ್ನು ಪ್ರಶ್ನೆ ಮಾಡಿವೆ ಮತ್ತು ಪತ್ರವನ್ನೂ ಬರೆದು ತೀರ್ಪಿನ ಮರುಪರಿಶೀಲನೆಗೆ ಒತ್ತಾಯಿಸಿವೆ.

ಶಿಕ್ಷೆಯ ಪ್ರಮಾಣ ಕಡಿಮೆ ಇರುವುದಕ್ಕೆ ಕಾರಣ ಪ್ರಕರಣಗಳು ಸುಳ್ಳಲ್ಲ. ಬದಲಿಗೆ ಈ ಹಿಂದೆಯೇ ಹೇಳಿರುವಂತೆ ತನಿಖೆಯಲ್ಲಿ ಅಲಕ್ಷ, ತನಿಖಾಧಿಕಾರಿಗಳ ಲಿಂಗ ತಾರತಮ್ಯ ಪುರುಷ ಪ್ರಧಾನ ಪಾಳೆಯಗಾರೀ ಧೋರಣೆಗಳು, ಅನಗತ್ಯ ವಿಳಂಬದಿಂದಾಗಿ ಪ್ರಕರಣ ಮುಂದುವರೆಸಲು ಅಸಾಧ್ಯವಾಗಿ ಮಹಿಳೆಯರು ಕೈ ಚೆಲ್ಲುವುದು, ವಿಳಂಬವನ್ನೇ ಅಸ್ತ್ರವನ್ನಾಗಿ ಮಾಡಿಕೊಂಡು ಪ್ರಕರಣವನ್ನು ಹಿಂತೆಗೆದುಕೊಳ್ಳುವಂತೆ ಒತ್ತಡ ಹೇರುವುದು ಕಾರಣವೆಂದು ಹಲವು ವರ್ಷಗಳ ನೆಲದ ಅನುಭವದ ಆಧಾರದಲ್ಲಿ ಪ್ರತಿಪಾದಿಸಲಾಗಿದೆ. ವ್ಯಾಪಕವಾಗಿರುವ ಹಿಂಸೆಯ ಪ್ರಕರಣಗಳು, ಇಂದಿಗೂ ಸಿಗದ ಆರ್ಥಿಕ ಭದ್ರತೆಗಳನ್ನು ಗಣನೆಗೆ ತೆಗೆದುಕೊಳ್ಳದ ಈ ವ್ಯವಸ್ಥೆಯಲ್ಲಿ ಹೆಣ್ಣು ಬಚಾವಾಗುವುದು ಸುಲಭವಲ್ಲ. ಈಗಲೂ ಲಿಂಗಾಧಾರಿತ ತಾರತಮ್ಯ, ಭ್ರಷ್ಟಾಚಾರ, ಕ್ರಿಮಿನಲ್ ಜಸ್ಟೀಸ್ ವ್ಯವಸ್ಥೆಯಲ್ಲಿನ ದೋಷಗಳು ಇವನ್ನೆಲ್ಲ ನ್ಯಾಯಾಲಯ ಪರಿಗಣನೆಗೆ ತೆಗೆದುಕೊಳ್ಳಬೇಕಾದ ಅಗತ್ಯವಿದೆ. ಪ್ರಶ್ನಿಸಬೇಕಾದ ಈ ನಕಾರಾತ್ಮಕ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳುತ್ತಲೇ ಸುಪ್ರೀಂ ಕೋರ್ಟಿನ ಮರು ಆದೇಶವನ್ನು ಸ್ವಾಗತಿಸಬೇಕು. ಮತ್ತು ನೆನೆಗುದಿಗೆ ಬಿದ್ದ ಪ್ರಕರಣಗಳತ್ತ ಚಾಟಿ ಬೀಸಿ ಕೆಳಹಂತದಿಂದ ಸಂವೇದನೆಗೆ ಒಳಗೊಳಿಸುವತ್ತ ಸರ್ವೋಚ್ಚನ್ಯಾಯಾಲಯದ ಗಮನವನ್ನೂ ಸೆಳೆಯಬೇಕು.

ಈ ಮೇಲಿನ ಎರಡು ಸಂಗತಿಗಳು ಒಂದರ್ಥದಲ್ಲಿ ಕಾನೂನಿಗೆ ಸಂಬಂಧಿಸಿದ್ದು ಎಂದುಕೊಂಡು ಹೀಗೂ ಆಗಬಹುದು ಎಂದು ಭಾವಿಸಬಹುದು. ಆದರೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸೆಕ್ಷನ್ 497 ವ್ಯಭಿಚಾರಕ್ಕೆ ಸಂಬಂಧಿಸಿದ ಕಾನೂನನ್ನು ತೆಗದೇ ಹಾಕಿಬಿಟ್ಟಿತಲ್ಲಾ!!! ಹೀಗೆ ಹುಬ್ಬೇರಿಸಿದ ಸಂಗತಿ ಮತ್ತು ಈ ಕುರಿತ ಚರ್ಚೆ ನಡೆಯುತ್ತಿದೆ. ಆದರೂ ಮತ್ತೊಂದು ಚರಿತ್ರಾರ್ಹ ತೀರ್ಪು ಇದು.

ವ್ಯಭಿಚಾರ ಕ್ರಿಮಿನಲ್ ಅಪರಾಧವಲ್ಲ

ಸೆಕ್ಷನ್ 497: ಇದು ಐ.ಪಿ.ಸಿ. ಸೆಕ್ಷನ್ 497 ಮತ್ತು ಸಿ.ಆರ್.ಪಿ.ಸಿ.ಸೆಕ್ಷನ್ 198ಗೆ ಸಂಬಂಧಿಸಿದ್ದು. ಸಮಾನತೆಯ ಹಕ್ಕಿನ ಪ್ರಶ್ನೆಯಾಗಿ ಈ ಕಲಮುಗಳನ್ನು ಅರ್ಥೈಸಿದ ಸುಪ್ರೀಂಕೋರ್ಟ್ ಹೆಣ್ಣು ಗಂಡಿಗೆ ಸಮಾನ ಅವಕಾಶವನ್ನು ನೀಡುವ ಸಂವಿಧಾನವಿರುವ ದೇಶದಲ್ಲಿ 158 ವರ್ಷಗಳ ಹಿಂದೆ ಬ್ರಿಟಿಷರ ಕಾಲದಿಂದ ಜಾರಿಯಲ್ಲಿರುವ ಈ ಕಲಮುಗಳು ಸಮಾನತೆಯ ಹಕ್ಕಿಗೆ ವಿರುದ್ಧವಾಗಿವೆ ಎಂದು ಅನೂರ್ಜಿತಗೊಳಿಸಿದೆ. ನಿರ್ದಿಷ್ಟ ರೀತಿಯ ವ್ಯಭಿಚಾರಕ್ಕೆ ಸಂಬಂಧಿಸಿದಂತೆ ಐ.ಪಿ.ಸಿ.ಯ ಸೆಕ್ಷನ್ 497 ಅಡಿಯಲ್ಲಿ ಶಿಕ್ಷೆ ವಿಧಿಸಲು ಬ್ರಿಟಿಷರ ಕಾಲದಲ್ಲಿ ತಂದದ್ದಾಗಿತ್ತು ಈ ಕಾನೂನು.

ಈ ಕಾನೂನಿನ ಅಡಿಯಲ್ಲಿ ವಿಧಿಸಿದ ಅಂಶಗಳು ಹೆಣ್ಣನ್ನು ಗಂಡನ ಸೊತ್ತೆಂಬಂತೆ ವಿವರಿಸಲಾಗಿದ್ದ ಕಾರಣದಿಂದ ಇದು ವಜಾಗೊಳಿಸಬೇಕಾದ ಕಾನೂನೇ ಎಂದು ಜನವಾದಿಯಂಥಹ ಮಹಿಳಾ ಸಂಘಟನೆಯೂ ಸೇರಿ ವಿಚಾರ ಮಾಡುವವರೆಲ್ಲರೂ ಸ್ವಾಗತಿಸಿದ್ದಾರೆ. ಹಾಗಾದರೆ ಈ ಕಾನೂನಿನಲ್ಲಿ ಏನಿತ್ತು.?

ಯಾವುದೇಗಂಡಸು ವಿವಾಹಿತ ಮಹಿಳೆಯೊಂದಿಗೆ ಆಕೆ ವಿವಾಹಿತಳೆಂದು ಗೊತ್ತಿದ್ದೂ, ಆಕೆಯ ಗಂಡನ ಅನುಮತಿ ಅಥವಾ ಸಹಕಾರವಿಲ್ಲದೇ ಲೈಂಗಿಕ ಕ್ರಿಯೆ ನಡೆಸಿದರೆ ಅದನ್ನು ವ್ಯಭಿಚಾರವೆಂದು ಪರಿಗಣಿಸಿ ಆತನಿಗೆ ಐದು ವರ್ಷಗಳ ಕಠಿಣ ಸಜೆ ಮತ್ತು ದಂಡವನ್ನು ವಿಧಿಸಬಹುದು. ಹೆಂಡತಿಯೆಂದರೆ ಗಂಡನ ಸೊತ್ತು ಎಂಬರ್ಥದ ಈ ಕಾನೂನು ಇಷ್ಟು ದಿನವಾದರೂ ಪ್ರಶ್ನಾರ್ಹವಾಗಲಿಲ್ಲವಲ್ಲ ಎಂಬುದೇ ಸೋಜಿಗ ಅಥವಾ ಹೆಣ್ಣಿನ ಸ್ಥಾನವಿನ್ನೂ ಎಲ್ಲಿದೆ ಎಂಬುದು ಅರ್ಥವಾಗಬಹುದು.

ತನ್ನ ಹೆಂಡತಿಯ ಜೊತೆ ಇನ್ನೊಬ್ಬ ಅಕ್ರಮ ಸಂಬಂಧ ಇಟ್ಟುಕೊಂಡಿದ್ದಾನೆ ಎಂದರೆ ಅವನ ಮೇಲೆ ದೂರು ದಾಖಲಿಸಲು ಗಂಡನಿಗೆ ಅವಕಾಶವಿದೆ. ಮತ್ತು ಬಹಳ ಸಂದರ್ಭಗಳಲ್ಲಿ ಹಗೆ ಸಾಧಿಸಲು ದೂರು ನೀಡಿ ಕಿರುಕುಳ ಕೊಟ್ಟ ಘಟನೆಗಳೂ ನಡೆದಿವೆ. ಆದರೆ ಅದೇ ಗಂಡ ಇನ್ನೊಬ್ಬಳ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದಾನೆಂದು ಆತ ವ್ಯಭಿಚಾರಿ ಎಂದು ದೂರು ದಾಖಲಿಸಲು ಈ ಕಾನೂನಿನ ಅಡಿಯಲ್ಲಿ ಹೆಂಡತಿಗೆ ಅವಕಾಶವಿಲ್ಲ.

ಇಂಗ್ಲೆಂಡ್ ಮತ್ತಿತರ ದೇಶಗಳಲ್ಲಿಯೂ ಈ ಮೊದಲು ಈ ರೀತಿಯ ಕಾನೂನುಗಳು ಇದ್ದವಾದರೂ ಅವನ್ನು ಕ್ರಿಮಿನಲ್ ಅಪರಾಧವೆಂದು ಪರಿಗಣಿಸುವುದಿಲ್ಲ ಈಗ. ಹಾಗೆಯೇ ಇಲ್ಲಿಯೂ ಕೂಡ ಅದೊಂದು ಸಿವಿಲ್ ಪ್ರಕರಣವಾಗಿಯೇ ಪರಿಗಣಿಸಬೇಕೇ ಹೊರತೂ ಕ್ರಿಮಿನಲ್ ಅಪರಾಧವಾಗಿಯಲ್ಲ. ಇದೊಂದು ಓಬೀರಾಯನ ಕಾಲದ ವ್ಯವಸ್ಥೆಯಲ್ಲಿದ್ದ ಕಾನೂನಾಗಿದ್ದು ಅದನ್ನು ಹಾಗೆಯೇ ಉಳಿಸಿಕೊಳ್ಳುವ ಅಗತ್ಯವಿಲ್ಲವೆಂಬ ಸುಪ್ರಿಂ ಕೋರ್ಟಿನ ಅಭಿಪ್ರಾಯ ಸರಿಯಾಗಿಯೇ ಇದೆ. ಒಂದೊಮ್ಮೆ ಸತಿ ಪತಿಯರಲ್ಲಿ ಯಾರೇ ಆದರೂ ಅಕ್ರಮ ಸಂಬಂಧವನ್ನು ಹೊಂದಿದ್ದಾರೆಂದರೆ, ವಿವಾಹೇತರ ಸಂಬಂಧ ಇರಿಸಿಕೊಂಡಿದ್ದಾರೆಂದರೆ ವಿವಾಹ ವಿಚ್ಛೇದನದಂಥಹ ಸಿವಿಲ್ ವ್ಯಾಜ್ಯ ಹೂಡಲು ಕಾನೂನಿನಲ್ಲಿ ಅವಕಾಶವಿದೆ. ಒಮ್ಮೆ ಹೆಣ್ಣಿಗೆ ದೈಹಿಕ ಮಾನಸಿಕ ಕಿರುಕುಳಗಳಾಗುತ್ತಿದ್ದರೆ ಕೌಟುಂಬಿಕ ದೌರ್ಜನ್ಯದಡಿ ಪ್ರಕರಣ ದಾಖಲು ಮಾಡುವ, ಪರಿಹಾರ ಧನಕ್ಕೆ ಕೋರುವ, 498(ಎ) ಅಡಿಯಲ್ಲಿ ದೂರುಕೊಡುವ ಎಲ್ಲ ಅವಕಾಶಗಳಿವೆ. ಇವೆಲ್ಲವನ್ನೂ ಬಳಸಿಕೊಳ್ಳುವ ಸಾಧ್ಯತೆಗಳಿರುವಾಗ ಈಗಿರುವ ರೀತಿಯಲ್ಲಿ 497 ಅಗತ್ಯವಿಲ್ಲವೆಂದು ಅಸಾಂವಿಧಾನಿಕವೆಂದು ಹೇಳಿದೆ. ಈ ಮೂಲಕ ಇರುವ ದೋಷವನ್ನು ಸರಿಪಡಿಸಲು ಅಗತ್ಯ ಹೆಜ್ಜೆ ಇಟ್ಟಿದೆಯೇ ಹೊರತೂ ವ್ಯಭಿಚಾರ ಅಪರಾಧವಲ್ಲ ಎಂದೇನೂ ಹೇಳಿಲ್ಲ. ಆದರೆ ಅದನ್ನೇ ತಪ್ಪಾಗಿ ಅರ್ಥೈಸಿ ಇದೊಂದು ನಿಯಮಬಾಹಿರ, ಅಕ್ರಮ ಸಂಬಂಧಕ್ಕೆ ಲೈಸೆನ್ಸ್ ಕೊಟ್ಟಂತೆ ಎಂಬಿತ್ಯಾದಿ ಮಾತುಗಳು ಬಾಣದಂತೆ ತೂರಿಬರುತ್ತಿವೆ. ಛೇ ಇದೆಂಥಹ ನಾಗರಿಕ ಯುಗ. ಹೆಣ್ಣನ್ನು ಗಂಡನ ಸೊತ್ತೆಂದು ಪರಿಗಣಿಸದೇ ಆಕೆಯೂ ಅವಳ ಇಷ್ಟಾನಿಷ್ಟಗಳನ್ನು ಹೊಂದಲು ಅವಕಾಶವಿದೆ ಎಂಬುದನ್ನೂ ಕೋರ್ಟ್ ಹೇಳಬೇಕಾಗಿ ಬಂತಲ್ಲ. ಈ ತೀರ್ಪುಗಳ ಮೂಲಕ ಸುಪ್ರಿಂ ಕೋರ್ಟ್ ಸಾಂವಿಧಾನಿಕ ನೈತಿಕತೆಯನ್ನು ಎತ್ತಿ ಹಿಡಿದಿದೆ.

ತ್ರಿವಳಿ ತಲಾಖ್ ಕಾಯಿದೆಯನ್ನು ಮುಸ್ಲಿಂ ಮಹಿಳೆಯರ ಉದ್ಧಾರಕ ಎಂದು ಬೊಬ್ಬೆ ಹೊಡೆದ ಹಲವರು ಈ ತೀರ್ಪನ್ನು ಟೀಕಿಸಿದ್ದಾರೆ. ಮತ್ತು ಮಹಿಳಾ ಚಳುವಳಿ ಈ ಎರಡರ ಬಗ್ಗೆ ತಳೆದ ನಿಲುವು ಸುಸಂಗತವಲ್ಲ ಅಲ್ಪಸಂಖ್ಯಾತ–ಸಂಪ್ರೀತಗೊಳಿಸುವ ಧೋರಣೆ ಎಂದೂ ಟೀಕಿಸಿದ್ದಾರೆ. ಇದೇನು ಆಶ್ಚರ್ಯಕಾರಿಯಲ್ಲ. ಪುರುಷ ಮಹಿಳೆಯರ ಸಂಬಂಧದ ಬಗೆಗಿನ ವಿವಾದವನ್ನು ಕ್ರಿಮಿನಲ್ ಅಪರಾಧ ಎಂದು ನೋಡುವುದರಿಂದ ಈ ಸಮಸ್ಯೆ ಬರುತ್ತದೆ. ಇಂತಹ ಎಲ್ಲಾ ವಿವಾದಗಳು ಸಿವಿಲ್ ವ್ಯಾಜ್ಯಗಳು. ಇದನ್ನು ಕ್ರಿಮಿನಲೈಸ್ ಮಾಡಬಾರದು ಎಂಬುದು ಮಹಿಳಾ ಚಳುವಳಿಯ ಸುಸಂಗತ ನಿಲುವು.

ಪೂಜಾಸ್ಥಳಗಳಿಗೆ ಮಹಿಳೆಯರ ಪ್ರವೇಶ

ಹೀಗೆ ಒಂದೊಂದೇ ಒಂದೊಂದೇ ಬಂದ ತೀರ್ಮಾನಗಳ ಕಳಶ ಪ್ರಾಯವೆಂಬಂತೆ ಬಂದ ಮತ್ತೊಂದು ಪೂಜಾಸ್ಥಳಗಳಿಗೆ ಮಹಿಳೆಯರ ಪ್ರವೇಶ ಕುರಿತದ್ದು. ಕಳೆದ ವರ್ಷ ಸರಿ ಸುಮಾರು ಇದೇ ಸಮಯದಲ್ಲಿ ಮಹಾರಾಷ್ಟ್ರದ ಶನಿ ಸಿಂಗ್ಣಾಪುರದ ಬಯಲು ದೇವಾಲಯದ ಪ್ರವೇಶಕ್ಕಾಗಿ ತೃಪ್ತಿ ದೇಸಾಯಿ ಎನ್ನುವ ಮಹಿಳೆ ಒಂದು ಚಳುವಳಿಯನ್ನೇ ಹೂಡಿದ್ದರು. ನ್ಯಾಯಾಲಯದ ತೀರ್ಪು ಅವರ ಪರವಾಗಿಯೇ ಬಂದಿತ್ತು. ಆದರೆ ಸ್ಥಳದಲ್ಲಿ ಸೋಕಾಲ್ಡ್ ಭಕ್ತರಿಂದ ದೊಡ್ಡ ಪ್ರತಿಭಟನೆ ಎದುರಿಸಬೇಕಾಯಿತು. ಪೋಲೀಸ್, ಲಾಠಿ ಇತ್ಯಾದಿಗಳ ದಂಡನ್ನೇ ನೋಡಿದೆವು.

ಇನ್ನು ಶಬರಿಮಲೈ. ಇದಕ್ಕೊಂದು ದೊಡ್ಡ ಕಥೆಯೇ ಇದೆ. ಜನವರಿ ತಿಂಗಳಲ್ಲಿ ಮಕರ ಜ್ಯೋತಿ ಹುಟ್ಟುವುದಂತೆ. ಅದನ್ನು ನೋಡಲು ಹೋಗುವವರು ಬಹಳ ನಿಷ್ಠೆಯಿಂದ ಇರಬೇಕು. ತಿಂಗಳಾನುಗಟ್ಟಲೇ ಕಪ್ಪು ಬಟ್ಟೆ, ಅದೇನೇನೋ ವ್ರತ ನಿಯಮಗಳು ಇತ್ಯಾದಿ. ಇರಲಿ ಇದಾವುದರ ಬಗೆಗೂ ನಮಗೆ ಚರ್ಚೆ ಬೇಕಿಲ್ಲ, ಯಾಕೆಂದರೆ ದೇಶದ ಸಂವಿಧಾನ ಧಾರ್ಮಿಕ ಹಕ್ಕನ್ನು ಕೊಟ್ಟಿದೆ. ಅದನ್ನು ಪಾಲಿಸುವ, ಪಾಲಿಸದಿರುವ, ನಂಬುವ, ನಂಬದಿರುವ ಅಧಿಕಾರ ಅವಕಾಶ ದೇಶದ ಎಲ್ಲ ಪ್ರಜೆಗಳಿಗೂ ಇದೆ. ಆದರೆ ಅಲ್ಲಿಗೆ 10 ರಿಂದ 50 ರ ವಯೋಮಾನದ ಮಹಿಳೆಯರಿಗೆ ಮಾತ್ರ ಪ್ರವೇಶವಿಲ್ಲ. ಯಾಕೆ?

ಒಂದು ಅವರು ಮುಟ್ಟಾಗುವ ವಯೋಮಾನವದು, ಹಾಗಾಗಿ ಮೈಲಿಗೆಯಾಗುತ್ತದೆ!! ಈ ವೈಜ್ಞಾನಿಕ ಯುಗದಲ್ಲಿ ಹೆಣ್ಣಿನ ಮುಟ್ಟನ್ನು ಕಾರಣವಾಗಿಟ್ಟುಕೊಂಡು ಆಕೆಯನ್ನು ಅಸ್ಪೃಶ್ಯಳನ್ನಾಗಿ ನೋಡುವುದು ಅವಮಾನವೆಂದು ಯಾರಿಗೂ ಅನಿಸಿಲ್ಲ.


ಇನ್ನೊಂದು ಆ ವಯಸ್ಸಿನ ಹೆಣ್ಣು ಮಕ್ಕಳು ಎದುರಿಗೆ ಬಂದರೆ ವ್ರತ ಧರ್ಮ ಪಾಲಿಸುವ ಪುರುಷನ ಮನಸ್ಸು ಚಂಚಲವಾಗುವುದಂತೆ!! ಇದು ಇನ್ನೂ ಮಾನಗೇಡಿಗಳಾಡಬಹುದಾದ ಮಾತು. ತಮ್ಮನ್ನು ತಾವು ನಿಗ್ರಹಿಸಿಕೊಳ್ಳಲಾರದವರು ಹೆಣ್ಣನ್ನೇಕೆ ದೂರಬೇಕು. ಅತ್ಯಾಚಾರ ಮಾಡುವವರನ್ನು ದೂಷಿಸದೇ ಹೆಣ್ಣಿನ ಬಟ್ಟೆ, ನಡೆ ನುಡಿಗಳನ್ನು ಬೊಟ್ಟು ಮಾಡಿ ತೋರಿಸುವ ಸಂತಾನಗಳೇ ಇಲ್ಲಿಯೂ ಕೆಲಸ ಮಾಡುವುದು. ಸಂವಿಧಾನದ ಪ್ರಕಾರ ಪೂಜೆ ಸಲ್ಲಿಸುವ ಅವಕಾಶ ಎಲ್ಲರಿಗೂ ಇರುವಾಗ ಅಶುದ್ಧಿಯ ನೆಪದಲ್ಲಿ ಅದನ್ನು ನಿರಾಕರಿಸುವುದು ಸರಿಯಲ್ಲವೆಂದು ಕೋರ್ಟ್ ಹೇಳಿದೆ. ಪುರಾತನ ಕಾಲದ ನಂಬಿಕೆ, ಪದ್ಧತಿಗಳ ನೆಪ ಮಾಡಿ ಸಂವಿಧಾನದತ್ತ ಸಮಾನತೆಯ ಅಧಿಕಾರವನ್ನು ನಿರಾಕರಿಸುವಂತಿಲ್ಲವೆಂದು, ಹಳೆಯ ಕಾಲದ ನಂಬಿಕೆಗಳನ್ನು ಸಂವಿಧಾನದ ಬೆಳಕಿನಲ್ಲಿ ಒರೆಗೆ ಹಚ್ಚಿ ನೋಡಬೇಕೆಂದಿದೆ. ಹೆಣ್ಣಿಗೆ ದೇವಾಲಯದೊಳಗೆ ಪ್ರವೇಶ ನಿರಾಕರಣೆ ನಮ್ಮ ಧಾರ್ಮಿಕ ಪದ್ಧತಿಯ ಭಾಗವೇನೂ ಅಲ್ಲವೆಂದು ಸುಪ್ರಿಂ ಕೋರ್ಟಿನ ಮುಖ್ಯನ್ಯಾಯಾಧೀಶರು ಅಭಿಪ್ರಾಯ ಪಟ್ಟಿದ್ದಾರೆ.

ಸಂವಿಧಾನದ ಕಲಮು 25ರ ಪ್ರಕಾರ ಮಹಿಳೆಯರು ಪೂಜಾಸ್ಥಳಗಳಿಗೆ ಹೋಗಲು ಪುರುಷನಷ್ಟೇ ಅಧಿಕಾರ ಹೊಂದಿದ್ದು ಶಬರಿಮಲೈನಲ್ಲಿ ಪ್ರವೇಶಕ್ಕೆ ಕಟ್ಟುಪಾಡು ವಿಧಿಸುವುದೆಂದರೆ ಅದು ಸಂವಿಧಾನ ಬಾಹಿರವೆಂದೇ ಪರಿಗಣಿಸಬೇಕು ಎಂದಿದೆ.

ಸಂವಿಧಾನದ 25ನೇ ಕಲಮು ಕೇವಲ ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ಮತ್ತು ಆರೋಗ್ಯಗಳ ಕುರಿತು ಮಾತ್ರ ಮಾತನಾಡದೆ ಇತರ ಮೂಲಭೂತ ಹಕ್ಕುಗಳ ಬಗ್ಗೆ ಕೂಡ ಹೇಳುತ್ತದೆ. ಹಾಗಾಗಿಯೇ ಧರ್ಮದ ಅಥವಾ ಧಾರ್ಮಿಕ ಆಚರಣೆಗಳ ಹೆಸರಿನಲ್ಲಿ ಹೆಣ್ಣುಮಕ್ಕಳಿಗೆ ಸಿಗಬೇಕಾದ ಸಮಾನ ಹಕ್ಕುಗಳನ್ನು ನಿರಾಕರಿಸುವುದನ್ನು ಒಪ್ಪಲಾಗದು. ಮಹಿಳೆಯರಿಗೆ ಧಾರ್ಮಿಕ ಆಚರಣೆಗಳ ಸಮಾನ ಅವಕಾಶ ಸಮಾನ ಹಕ್ಕುಗಳಿಗಾಗಿ, ಮತ್ತು ಪೂಜಾಸ್ಥಳಗಳ ಪ್ರವೇಶದ ಅವಕಾಶಕ್ಕಾಗಿ ಜನವಾದಿಯಂಥಹ ಸಂಘಟನೆಗಳು ಬಹಳ ಕಾಲದಿಂದ ಮಾತನಾಡುತ್ತಲೇ ಇವೆ. ಈಗ ಸುಪ್ರಿಂಕೋರ್ಟ್ ನೀಡಿದ ಬಹುಮತದ ತೀರ್ಪು ಒಂದು ಉತ್ತಮ ಬೆಳವಣಿಗೆ ಎಂದೆ ಗುರುತಿಸಬೇಕು.

ಈ ತೀರ್ಪಿಗೆ ಹಲವು ರೀತಿಯ ಪ್ರತಿಕ್ರಿಯೆಗಳು ಬರುತ್ತಿವೆ. ಈ ಸಮಾಜದಲ್ಲಿ ರೂಢಿಗತವಾಗಿರುವ ಪುರುಷ ಪಾರಮ್ಯದ ವಿರುದ್ಧ ಬಂದ ಈ ತೀರ್ಪನ್ನು ಮಹಿಳೆಯರೇ ವಿರೋಧಿಸುತ್ತಿರುವುದು ಅಚ್ಚರಿಯ ಸಂಗತಿಯೇನಲ್ಲ. ನ್ಯಾಯಾಧೀಶರಲ್ಲಿ ಒಬ್ಬರಾಗಿದ್ದ ಇಂದು ಮಲ್ಹೋತ್ರ ರವರೇ ಧಾರ್ಮಿಕ ನಂಬಿಕೆಗಳ ವಿಷಯದಲ್ಲಿ ನ್ಯಾಯಾಲಯದ ಮಧ್ಯಪ್ರವೇಶ ಸಲ್ಲದು ಎಂದು ಹೇಳಿದ್ದಾರೆ. ಕೇರಳದಲ್ಲಿ ಸಾವಿರಾರು ಮಹಿಳೆಯರೇ ಈ ತೀರ್ಮಾನದ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ಸುದ್ದಿಗಳೂ ಬರುತ್ತಿವೆ. ಇಲ್ಲಿ ಇದನ್ನು ಮಹಿಳೆಯರು ಮಹಿಳಾ ಹಕ್ಕುಗಳ ವಿರುದ್ಧ ಎಂಬಂತೆ ನೋಡದೇ ಪಾಳೇಯಗಾರಿ ಮೌಲ್ಯಗಳು ಮುಕ್ಕಾಗದಂತೆ ಮುಂದುವರೆಸಲು ಈ ಸಮಾಜ ವಾಹಕರನ್ನಾಗಿ ಮಹಿಳೆಯರನ್ನೇ ಬಳಸುವ ಒಂದು ಉದಾಹರಣೆಯಾಗಿ ನೋಡಬೇಕು. ಇನ್ನೂ ಕೆಲವು ಅಂಶಗಳು ನಮ್ಮ ಸುತ್ತ ಹರಿದಾಡುತ್ತವೆ.

'ಟ್ರೂ ಇಂಡಿಯನ್ ವುಮನ್' ಎಂದು ಕರೆದುಕೊಳ್ಳುವ ಕೆಲವರು ಕೇರಳವೊಂದು ಮಾತೃಪ್ರಧಾನ ವ್ಯವಸ್ಥೆಯನ್ನು ಹೊಂದಿದಂಥಹ ಸಮಾಜವಾಗಿದ್ದು ಅಲ್ಲಿ ಹಲವಾರು ಆಚರಣೆಗಳು, ದೇವಾಲಯಗಳು ಕೇವಲ ಮಹಿಳೆಯರಿಗೆ ಮಾತ್ರ ಇವೆ. ಅಲ್ಲಿ ಪುರುಷರಿಗೆ ಪ್ರವೇಶವೇ ಇಲ್ಲವೆಂದು ಉದಾಹರಣೆಗಳನ್ನು ನೀಡುತ್ತಾರೆ. ಮತ್ತು ಶಬರಿಮಲೈ ಗೆ ಮಹಿಳೆಯರಿಗೆ ನಿಷೇಧವಿರುವುದನ್ನು ಸಮರ್ಥಿಸುತ್ತಾರೆ. ಅದನ್ನು ಸಾಮಾಜಿಕ ಮಾಧ್ಯಮದಲ್ಲಿ ಹರಿಬಿಟ್ಟು ಈ ವಿಷಯದ ಮೂಲ ಅಂಶ ಮರೆಮಾಚಲು ಪ್ರಯತ್ನಿಸುತ್ತಾರೆ. ಅದನ್ನು ಹಂಚಿ ಸುಖಿಸುವ ಜನರಿಗೆ ಪರಮಾನ್ನದಂತೆ ಅದು. ಆದರೆ ಅವರು ಅರ್ಥ ಮಾಡಿಕೊಳ್ಳಬೇಕಾದದ್ದು ಶಬರಿಮಲೈಗೆ ನಿರ್ದಿಷ್ಟ ವಯಸ್ಸಿನ ಮಹಿಳೆಯರಿಗೆ ನಿಷಿದ್ಧ ವಿಧಿಸಿರುವುದು ಅವರು ಮುಟ್ಟಾಗುತ್ತಾರೆ, ಆದ್ದರಿಂದ ಮೈಲಿಗೆಯಾಗುತ್ತದೆ ಎಂದು. ಇಂಥಹ ಅವೈಜ್ಞಾನಿಕ, ಅವೈಚಾರಿಕ ಸಂಗತಿಗಳನ್ನು ಸಾರ್ವಜನಿಕವಾಗಿಯೇ ಹರಿಬಿಡುವಷ್ಟು ಹಿಂದುಳಿದಿರುವ ಜನ ಸಮೂಹವೇ ಸುತ್ತ ಸುತ್ತಿಕೊಂಡಿರುವ ಸಮಾಜಕ್ಕೆ ಈ ಕೆಲವು ತೀರ್ಪುಗಳು ಬಿಡುಗಡೆಯ ದಾರಿಯನ್ನು ತೋರಿಸುತ್ತಿವೆ. ಪ್ರಜಾಪ್ರಭುತ್ವ ಎಂದರೆ ಕೇವಲ ಚುನಾವಣೆ ನಡೆಸಿ ಜನರು ಮತ ಹಾಕಿ ಬಿದ್ದ ಮತಗಳಲ್ಲಿ ಹೆಚ್ಚು ಮತ ಪಡೆದವರು ಅಧಿಕಾರ ನಡೆಸುವುದು ಎಂಬ ಕಲ್ಪನೆಗೆ ಬದಲಾಗಿ ನಿಜವಾದ ಪ್ರಜಾಪ್ರಭುತ್ವ ಎಂದರೆ ದೇಶದ ಎಲ್ಲ ಪ್ರಜೆಗಳಿಗೂ, ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ನೆಲೆಗಳಲ್ಲಿ ದಕ್ಕುವ ಸಮಾನ ಅವಕಾಶ, ಸಮಾನ ಹಕ್ಕು ಸಮಾನ ಅಧಿಕಾರ. ಅದನ್ನು ಸಾಧಿಸಲು ಪ್ರಯತ್ನಿಸುವುದೇ ಸಾಂವಿಧಾನಿಕ ನೈತಿಕತೆಯನ್ನು ರೂಢಿಸಿಕೊಳ್ಳುವುದು ಎಂದರ್ಥ. ●



ಜನಶಕ್ತಿ ಫೇಸ್ ಬುಕ್ ಪುಟ : ಇನ್ನೊಂದು ಮೈಲಿಗಲ್ಲು ಪೇಜ್ ಲೈಕ್ 8 ಸಾವಿರ+, ವೈರಲ್ ವಿಡಿಯೊ 2+ ಲಕ್ಷ ವ್ಯೂ

ಜನಶಕ್ತಿ ವಾರಪತ್ರಿಕೆ ಅಲ್ಲದೆ ವೆಬ್ ಪೇಜ್, ಫೇಸ್ ಬುಕ್ ಪುಟ, ಯೂ ಟ್ಯೂಬ್ ಚಾನೆಲುಗಳನ್ನೂ ನಡೆಸುತ್ತಿದೆ. ವಾರಪತ್ರಿಕೆ ಹಾಗೂ ಉಳಿದ ಎಲ್ಲವನ್ನು ಸ್ವತಂತ್ರ ಕಂಟೆಂಟ್ ಜತೆ ಅಪ್‌ಡೇಟ್ ಮಾಡಲು ಪ್ರಯತ್ನಿಸುತ್ತಿದ್ದೇವೆ. ಜನಶಕ್ತಿ ಮೀಡಿಯಾ ಫೇಸ್ ಬುಕ್ ಪುಟದಲ್ಲಿ ನಿರಂತರ ಸುದ್ದಿ ಕೊಡಬೇಕು ಎಂದು ಪ್ರಯತ್ನಿಸುತ್ತಿದ್ದು ಕಳೆದ 3 ವಾರಗಳಲ್ಲಿ ಇದನ್ನು ಬಹಳ ಮಟ್ಟಿಗೆ ಜಾರಿ ಮಾಡಲು ಸಾಧ್ಯವಾಗಿದೆ.

ಈ ಪ್ರಯತ್ನ ಆರಂಭವಾದ ಕಳೆದ 3 ವಾರಗಳಲ್ಲಿ ಜನಶಕ್ತಿ ಮೀಡಿಯಾ ಫೇಸ್ ಬುಕ್ ಪುಟದ ಪ್ರತಿದಿನದ ಸರಾಸರಿ reach 46,338.. ಅದರ ಹಿಂದಿನ 3 ವಾರದ್ದು 6020 ಅಂದರೆ **reach** ಸುಮಾರು 7 ಪಟ್ಟು ಆಗಿದೆ. ಇದರಲ್ಲಿ ವೈರಲ್ ಆದ ಕೆಲವು ವಿಡಿಯೋಗಳ ಪಾತ್ರವೂ ಇದೆ. ಪೇಜ್ ಲೈಕುಗಳು ಸಹ ಕಳೆದ 3 ವಾರಗಳಲ್ಲಿ 7369ರಿಂದ 8145ಕ್ಕೆ (ಅಂದರೆ 776ರಷ್ಟು) ಜಿಗಿದಿದೆ. ಅಗಸ್ಟ 15 ರಂದು 7 ಸಾವಿರ ದಾಟಿದ್ದ ಪೇಜ್ ಲೈಕ್ ಮುಂದಿನ 1 ಸಾವಿರ ಲೈಕುಗಳನ್ನು ಕೇವಲ 1.5 ತಿಂಗಳುಗಳಲ್ಲಿ ಪಡೆದಿದೆ. ಪೇಜ್ ಲೈಕುಗಳು 6 ಸಾವಿರದಿಂದ 7 ಸಾವಿರಕ್ಕೇರಲು ಹಿಂದೆ 8 ತಿಂಗಳು ತೆಗೆದುಕೊಂಡಿತ್ತು.

ಕಾರ್ಯಕ್ರಮ ಒಂದರಲ್ಲಿ ಇತಿಹಾಸದ ತಲೆಕೆಳಗು ಭಾಷ್ಯ ಕೊಟ್ಟ ಚಕ್ರವರ್ತಿ ಸೂಲಿಬೆಲೆಗೆ, ಸರಿಯಾಗಿ ಇತಿಹಾಸ ಕ್ಲಾಸು ತೆಗೆದುಕೊಂಡ ಪತ್ರಕರ್ತರಾದ ಬಿ.ಎಂ.ಹನೀಫ್ ಅವರ ವೀಡಿಯೋ ವೈರಲ್ ಆದ ವಿಡಿಯೋ. ಈ ವಿಡಿಯೋವನ್ನು ಕೇವಲ 6 ದಿನಗಳಲ್ಲಿ (ಅಕ್ಟೋಬರ್ 6 ರಾತ್ರಿ 10ಗಂಟೆ ಹೊತ್ತಿಗೆ) 2.33 ಲಕ್ಷಕ್ಕೂ ಹೆಚ್ಚು ಜನ ನೋಡಿದ್ದಾರೆ. 4200 ಜನ ಲೈಕು ಮಾಡಿದ್ದಾರೆ. 3661 ಜನ ಶೇರ್ ಮಾಡಿದ್ದಾರೆ.

ಮುಂದಿನ ದಿನಗಳಲ್ಲಿ ವಿಭಿನ್ನ, ವಿಶಿಷ್ಟ ರೀತಿಯ ಪ್ರಯೋಗಗಳೊಂದಿಗೆ ಜನಶಕ್ತಿ ಮೀಡಿಯಾ ನಿಮ್ಮ ಮುಂದೆ ಬರಲಿದೆ. ನಿರೀಕ್ಷಿಸಿ. ನೀವು ನಿರಂತರ ಸುದ್ದಿಗಾಗಿ ಜನಶಕ್ತಿ ಮೀಡಿಯಾ ಫೇಸ್ ಬುಕ್ ಪುಟ ನೋಡುತ್ತಿರಿ ಮತ್ತು ವಾರದ ಸುದ್ದಿ ವಿಶ್ಲೇಷಣೆಗಾಗಿ ವಾರಪತ್ರಿಕೆ ಓದುತ್ತಿರಿ. ನಿಮ್ಮ ಸ್ನೇಹಿತರನ್ನು ಹಾಗೆ ಮಾಡಲು ಆಹ್ವಾನಿಸಿ.

ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ....... ಪುಟ 8 ರಿಂದ

ತನ್ನ ಹೆಸರನ್ನು ರಾಮ್ ಮುಹಮದ್ ಅಜಾದ್ ಸಿಂಗ್ ಎಂದು ಆತ ಹೇಳಿಕೊಂಡಿದ್ದ.

ಜೂನ್ 12, 1940 ರಂದು ಉದಮ್ ಸಿಂಗ್‌ನನ್ನು ಗಲ್ಲಿಗೇರಿಸಿದ ಸಂದರ್ಭದಲ್ಲಿ ಆತ ಹೇಳಿದ್ದು "ನಾನು ಹೀಗೆ ಮಾಡಿರುವುದಕ್ಕೆ ಕಾರಣ ಅವನ ಮೇಲಿನ ದ್ವೇಷ. ಅವನು ಹತ್ಯಾಕಾಂಡಕ್ಕೆ ಕಾರಣಕರ್ತ, ನಿಜವಾದ ಅಪರಾಧಿ ಮತ್ತು ಜನರನ್ನು ಹತ್ತಿಕ್ಕಿದ್ದ. ಆದ್ದರಿಂದ ಶಿಕ್ಷೆಗೆ ಅರ್ಹವಾಗಿದ್ದಾನೆ. ಕಳೆದ 21 ವರ್ಷಗಳಿಂದ ದ್ವೇಷ ಸಾಧಿಸಲು ಅವಕಾಶಕ್ಕಾಗಿ ಕಾಯುತ್ತಿದ್ದೆ. ನನ್ನ ಕೆಲಸ ಮುಗಿದಿರುವುದಕ್ಕೆ ಸಂತೋಷವಾಗಿದೆ. ನನಗೆ ಸಾವಿನ ಭಯವಿಲ್ಲ. ನಾನು ದೇಶಕ್ಕಾಗಿ ಸಾಯುತ್ತಿದ್ದೇನೆ. ನನ್ನ ಜನ ಬ್ರಿಟೀಷರ ಆಳ್ವಿಕೆಯಲ್ಲಿ ಹಸಿವಿನಿಂದ ನರಳುತ್ತಿದ್ದಾರೆ. ಅದನ್ನು ಪ್ರತಿಭಟಿಸಿದ್ದೇನೆ. ಅದು ನನ್ನ ಕರ್ತವ್ಯ. ತಾಯ್ನಾಡಿಗೆ ಗಲ್ಲಿಗೇರುವುದಕ್ಕಿಂತ ನನಗೆ ಸಲ್ಲಬಹುದಾದ ದೊಡ್ಡ ಗೌರವ ಯಾವುದೂ ಇಲ್ಲ." ಜನರಲ್ ಡೈರ್ ಮೊದಲೇ 1927 ರಲ್ಲೇ ಸತ್ತಿದ್ದ.

ಹತ್ಯಾಕಾಂಡ ನಡೆದಾಗ ಭಗತ್ ಸಿಂಗ್ 12 ವರ್ಷದ ಲಾಹೋರ್‌ನಲ್ಲಿ ವಿದ್ಯಾರ್ಥಿ. ಜಲಿಯಾನ್ ವಾಲಾ ಬಾಗ್‌ಗೆ ಭೇಟಿಯಿತ್ತು. ರಕ್ತಸಿಕ್ತ ಮಣ್ಣನ್ನು ಸಂಗ್ರಹಿಸಿಟ್ಟು ಕೊಂಡಿದ್ದ. ಇಂದೂ ಅದನ್ನು ಭಗತ್‌ಸಿಂಗ್ ಸ್ಮಾರಕ ಸಂಗ್ರಹಾಲಯದಲ್ಲಿ ಇರಿಸಲಾಗಿದೆ. ಹತ್ಯಾಕಾಂಡ ಯುವ ಕ್ರಾಂತಿಕಾರಿಗಳ ಮೇಲೆ ಮಾಸದ ನೆನಪನ್ನು ಉಳಿಸಿತು.

ಕಾ॥ ಹರಕಿಶನ್‌ಸಿಂಗ್ ಸುರ್ಜಿತ್ ಹತ್ಯಾಕಾಂಡದ 79ನೇ ವರ್ಷದ ಸಂದರ್ಭದಲ್ಲಿ ಹೇಳಿದ್ದನ್ನು ಇಲ್ಲಿ ನೆನೆಸಿಕೊಳ್ಳಬಹುದು "ನಾವು ದೇಶದ ಐಕ್ಯತೆ ಮತ್ತು ಸ್ವಾತಂತ್ರ್ಯದ ಸಂದೇಶ ನೀಡುತ್ತಾ ತಮ್ಮ ರಕ್ತ ಚೆಲ್ಲಿದ ಜನರಿಗೆ ವಂದಿಸುತ್ತೇವೆ. ಹಸಿವಿನಿಂದ ಸ್ವಾತಂತ್ರ್ಯ, ಬಡತನದಿಂದ ಸ್ವಾತಂತ್ರ್ಯ ಮುಂತಾದ ನಿಜವಾದ ಸ್ವಾತಂತ್ರ್ಯದ ಆಶಯ ಹೊಂದಿದ್ದು ಅದಕ್ಕಾಗಿ ಮಡಿದವರನ್ನು ನಾವು ಸ್ಮರಿಸುತ್ತೇವೆ. ಜಲಿಯಾನ್ ವಾಲಾ ಬಾಗ್ ಮುಂದಿನ ಉತ್ತಮ ಹಾಗೂ ಉಜ್ವಲ ಭವಿಷ್ಯಕ್ಕಾಗಿ ದುಡಿಯುವ ನಮ್ಮ ದೇಶದ ಜನತೆಗೆ ಎಂದೆಂದಿಗೂ ಸ್ಫೂರ್ತಿಯ ಚಿಲುಮೆಯಾಗಿರುತ್ತದೆ. ಹುತಾತ್ಮರ ತ್ಯಾಗ ಬಲಿದಾನಗಳನ್ನು ನಾವು ಎಂದೆಂದೂ ಮರೆಯುವುದಿಲ್ಲ." ●

ಕೊಪ್ಪಳ ರೈತನ ಆತ್ಮಹತ್ಯೆ



ಕೊಪ್ಪಳದಲ್ಲಿ ಮುಂದುವರೆದ ರೈತರ ಆತ್ಮಹತ್ಯೆ ಸರಣಿ. ಸಾಲ ಭಾದೆಗೆ ಮತ್ತೊಬ್ಬ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮುಂಗಾರು ಮಳೆ ವಿಫಲವಾದ ಕಾರಣ ಬೆಳೆ ನಷ್ಟವಾದ್ದರಿಂದ ಮನನೊಂದು ಜಮೀನಿನಲ್ಲಿ ವಿಷ ಸೇವಿಸಿ ಸಾವಿಗೆ ಶರಣಾಗಿದ್ದಾರೆ.

ಯಲ್ಲಪ್ಪ ಬಂಡಿ(55) ಆತ್ಮಹತ್ಯೆ ಗೆ ಶರಣಾದ ರೈತ. ಕೊಪ್ಪಳ ತಾಲೂಕಿನ ಯತ್ನಟ್ಟಿ ಸೀಮಾದ ಜಮೀನಿನಲ್ಲಿ ಈ ಘಟನೆ ನಡೆದಿದೆ. ಭಾಗ್ಯನಗರದ ನಿವಾಸಿಯಾಗಿದ್ದ ಯಲ್ಲಪ್ಪ ಮೆಕ್ಕೆ ಹೋಳಕ್ಕೆ ಕೀಟ ನಾಶಕ ಸಿಂಪಡಿಸಲು ತೆರಳಿದ್ದ ವೇಳೆಯಲ್ಲಿ ವಿಷ ಸೇವಿಸಿದ್ದಾರೆ ಎಂದು ಹೇಳಲಾಗಿದೆ. ಕೊಪ್ಪಳ ಗ್ರಾಮೀಣ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಮೆಕ್ಕೆಜೋಳ ಬೆಳೆ ರೋಗಕ್ಕೆ ತುತ್ತಾದ್ದರಿಂದ ರೈತ ಕಂಗಾಲಾಗಿದ್ದ. ಕುಣಿಕೇರಿಯ ಕೆನರಾ ಬ್ಯಾಂಕ್ ನಲ್ಲಿ 1.5 ಲಕ್ಷ. ಹಾಗೂ ಇತರೆ ಖಾಸಗಿ ವ್ಯಕ್ತಿಗಳಿಂದ ಲಕ್ಷಾಂತರ ರೂ ಸಾಲ ಪಡೆದು ಮಗಳ ಮದುವೆ ಮಾಡಿದ್ದ. ಸರಕಾರ ಸಾಲಮನ್ನ ಮಾಡುತ್ತೇವೆ ಎಂದು ಆರು ತಿಂಗಳಿಂದ ಹೇಳುತ್ತಿದೆ. ಆದರೆ ಜಾರಿಗೆ ಯಾವ ಕ್ರಮ ವಹಿಸುತ್ತಿದೆ ಎಂದು ರೈತರಿಗೆ ಅರ್ಥ ಮಾಡಿಸುವಲ್ಲಿ ವಿಫಲವಾಗಿದೆ. ಮಳೆ ಕೈ ಕೊಟ್ಟಾಗ ರೈತರಿಗೆ ವಿಶೇಷ ಪ್ಯಾಕೇಜ್ ಮೂಲಕ ಆ ಕುಟುಂಬಗಳನ್ನು ರಕ್ಷಿಸಲು ಮುಂದಾಗಬೇಕು.

ಬೆಂಗಳೂರು ವಿಭಜನೆ ಅಲ್ಲ, ಪುನರ್ರಚನೆ........ ಪುಟ 16 ರಿಂದ

ಆಡಳಿತವನ್ನು ಅಮೂಲಾಗ್ರವಾಗಿ ಬದಲಾಯಿಸುವ ಹಾಗು ಬದಲಿ ವ್ಯವಸ್ಥೆಯ ಪ್ರಸ್ತಾಪ ಮಾಡುತ್ತದೆ. ಹಾಗೆಯೇ ವರದಿಯಲ್ಲಿನ ಶಿಫಾರಸ್ಸುಗಳನ್ನು ಚರ್ಚೆ, ಸಂವಾದದ ಮೂಲಕ ಇನ್ನಷ್ಟು ಉತ್ಕೃಷ್ಟಗೊಳಿಸಲು ಹಾಗು ಸರಿ ಕಾಣದ್ದನ್ನು ಕೈಬಿಡಲು ಮುಕ್ತ ಅವಕಾಶವನ್ನೂ ನೀಡಿದೆ.

ಯಾವುದೇ ವರದಿ ಶೇಕಡಾ ನೂರರಷ್ಟು ಸಮಗ್ರವಾದ ಶಿಫಾರಸ್ಸು ನೀಡಲು ಸಾಧ್ಯವಿಲ್ಲ. ಅನುಭವದಲ್ಲಿ ಕಲಿಯುತ್ತಾ, ಕಾಲಕ್ಕೆ, ಪರಿಸ್ಥಿತಿ ತಕ್ಕ ಮಾರ್ಪಾಡುಗಳನ್ನು ಮಾಡಿಕೊಳ್ಳುತ್ತಾ ಸಾಗಬೇಕಾಗುತ್ತದೆ. ಅಂತಿಮವಾಗಿ ಜನ ಬಯಸುವುದು, ನೆಮ್ಮದಿಯಿಂದ ಬದುಕಬಹುದಾದ ಉತ್ತಮ ವಾತಾವರಣವನ್ನು ಮಾತ್ರವೆ! ಅದನ್ನು ನೀಡಬೇಕಾದುದು ಯಾವುದೇ ನಾಗರಿಕ ಸರ್ಕಾರದ ಜವಾಬ್ದಾರಿಯೂ ಹೌದು. ಶೈತ್ಯಾಗಾರದಲ್ಲಿರುವ ಈ ವರದಿಯನ್ನು ಹೊರತೆಗೆದು, ಬ್ಯೂರೋಕ್ರಸಿ ಹಾಗು ರಾಜಕೀಯ ನಾಯಕರು ಹಾಗು ಜನಪ್ರತಿನಿಧಿಗಳು ಮೊದಲು ಓದಿ, ನಂತರ ಸರಿ ಎನಿಸಿದ್ದಲ್ಲಿ ಅನುಷ್ಠಾನಕ್ಕೆ ತನ್ನಿ ಎಂಬುದು ಬಿಎಸ್ ಪಾಟೀಲ್ ಅವರ ಮನವಿ. ಹಾಗೆಯೇ, ಬೆಂಗಳೂರಿನ ನಾಗರಿಕರೂ ಈ ವರದಿಯನ್ನು ಓದಿ ಸಲಹೆಗಳನ್ನು ನೀಡಲು ಕೋರಿದೆ. ಬೃಹತ್ ವರದಿಯ ಸಾರಾಂಶವನ್ನು 22 ಪುಟಗಳಿಗೆ ಇಳಿಸಿ, ಸಾಮಾನ್ಯರೂ ಓದಿ ಅರ್ಥಮಾಡಿಕೊಳ್ಳುವಂತೆ ತಯಾರಿಸಿ www.bbmprestructuring.org ಎಂಬ ವೆಬ್‌ಸೈಟ್‌ನಲ್ಲಿ ಹಾಕಲಾಗಿದೆ. ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಗಳಲ್ಲೂ ಲಭ್ಯವಿದೆ.

ಇದೀಗ ಓದುವ ಸರದಿ ನಿಮ್ಮದು! ●



'ಕ್ವಿಟ್ ಇಂಡಿಯಾ ಮೂವ್ ಮೆಂಟ್'ಗೆ ಮತ್ತೊಬ್ಬ ದೇಶಭಕ್ತನ ತಯಾರಿ?



ಅನಿಲ್ ಅಂಬಾನಿ ದೇಶ ಬಿಟ್ಟು ಹೊರ ಹೋಗದಂತೆ ತಡೆಯಬೇಕು ಎಂದು ಸ್ವೀಡನ್ನಿನ ಎರಿಕ್ಸನ್ ಕಂಪೆನಿ ಸುಪ್ರೀಂ ಕೋರ್ಟಿಗೆ ಪಿಟಿಷನ್ ಹಾಕಿದೆ. ಅಂಬಾನಿ ಎರಿಕ್ಸನ್ ಕಂಪೆನಿಗೆ 1600 ಕೋಟಿ ರುಪಾಯಿ ಕೊಡಬೇಕಾಗಿದ್ದು ಅದನ್ನು ಕೊಡಲಾಗದೇ ಕೋರ್ಟಿನ ಮೊರೆ ಹೋದಾಗ ಕೋರ್ಟು ಅದನ್ನು 550 ಕೋಟಿ ರುಪಾಯಿಗೆ ಇಳಿಸಿ, ಕಳೆದ ಸೆಪ್ಟಂಬರ್ 30ರೊಳಗೆ ಪಾವತಿ ಮಾಡಬೇಕು ಎಂದು ಆದೇಶಿಸಿತ್ತು. ಆದರೆ, ಅಂಬಾನಿ ಅದನ್ನೂ ಕೊಡದಿದ್ದಾಗ ಎರಿಕ್ಸನ್ ಕಂಪೆನಿ ಕೋರ್ಟಿಗೆ ದೂರು ನೀಡಿ ಈ ರೀತಿ ಪಿಟಿಷನ್ ಹಾಕಿದೆ.

ಅನಿಲ್ ಅಂಬಾನಿಯ ರಿಲಯನ್ಸ್ ಕಂಪೆನಿ 45000 ಕೋಟಿ ರುಪಾಯಿ ಸಾಲ ಬಾಕಿ ಇರಿಸಿಕೊಂಡಿದೆ. ಅಣ್ಣ ಅಂಬಾನಿ ತಮ್ಮ ಅಂಬಾನಿಯ ಕೆಲವು ಕಂಪೆನಿಗಳನ್ನು ಖರೀದಿಸಿ 25000 ಕೋಟಿ ರುಪಾಯಿ ಕೊಡಲು ಒಪ್ಪಿದ್ದರು. ಆದರೆ, ಈ ವ್ಯವಹಾರ ಕುದುರಿಸುವ ಮೊದಲು ಅನಿಲ್ ಅಂಬಾನಿ 2900 ಕೋಟಿ ರುಪಾಯಿ ಬ್ಯಾಂಕ್ ಗ್ಯಾರಂಟಿ ನೀಡಬೇಕು ಅಂತ ಟೆಲಿಕಾಮ್ ಮಿನಿಸ್ಟ್ರಿ ಷರತ್ತು ಹಾಕಿತ್ತು. ಅಷ್ಟು ಹಣ ಹೊಂದಿಸುವ ಸ್ಥಿತಿಯಲ್ಲೂ ಅನಿಲ್ ಅಂಬಾನಿಯ ಕಂಪೆನಿ ಇಲ್ಲದಿರುವುದರಿಂದ ಇನ್ನೂ ಈ ವ್ಯವಹಾರ ಕುದುರಿಲ್ಲ.

ಇಂತಹ ಪಾಪರ್ ಕಂಪೆನಿಯೊಂದು ಅಷ್ಟೊಂದು ದುಬಾರಿ ಬೆಲೆಯ ರಫೇಲ್ ಯುದ್ಧ ವಿಮಾನಗಳನ್ನು ತಯಾರಿಸಬಹುದೆಂಬುವುದು ಸೋಜಿಗವಲ್ಲವೇ! ಇಂತಹ ಸೋಜಿಗ ರಾಮರಾಜ್ಯದಲ್ಲಲ್ಲದೆ ಮತ್ತೆಲ್ಲಿ ನಡೆಯಲು ಸಾಧ್ಯ!

– ಪಂಜು ಗಂಗೊಳ್ಳಿ

ಮಾತೆಂದರೆ ಇದು

ರಾಷ್ಟ್ರಪಿತನನ್ನು ಸ್ಯಾನಿಟರಿ ಇನಸ್ಪೆಕ್ಟರ್ ಮಟ್ಟಕ್ಕೆ ಇಳಿಸಿದ್ದಾರೆ

"ಆರೆಸ್ಸೆಸ್ ಮತ್ತು ಅದರ ಸರಕಾರ ರಾಷ್ಟ್ರಪಿತ ಗಾಂಧಿಯನ್ನು ಸೀನಿಯರ್ ಸ್ಯಾನಿಟರ್ ಇನಸ್ಪೆಕ್ಟರ್ ಸ್ಥಾನಕ್ಕೆ ಇಳಿಸಿರುವಾಗ, ನಾವು ಮಹಾತ್ಮ ಗಾಂಧಿಯವರ ರಾಷ್ಟ್ರವಾದ ಈಗಿನ ಆಳುವವರಿಗಿಂತ ಭಿನ್ನವಾಗಿತ್ತು ಎಂದು ಸಾರಿ ಹೇಳುವ ಮೂಲಕ ಆಚರಿಸಬೇಕಾಗಿದೆ. ರಾಷ್ಟ್ರವಾದ ಎಂದರೆ ನೆರೆಯವರ ಜತೆ ಜಗಳಕ್ಕೆ ಹೋಗುವುದಲ್ಲ. ನೆರೆಯ ಮತ್ತು ನಮ್ಮ ದೇಶದ ಜನತೆಯ ಬಗ್ಗೆ ಕಾಳಜಿ ಅನುಕಂಪ ಎಂಬ ಮಹತ್ತರ ರಾಷ್ಟ್ರವಾದವನ್ನು ಸಾರಿ ಹೇಳಬೇಕಾಗಿದೆ. ಒಂದೋ ಮೋಸ ಅಥವಾ ಇಲ್ಲವೇ ಅಂತರ್ರಾಷ್ಟ್ರೀಯ ಕಾನೂನಿನ ಉಲ್ಲಂಘನೆಯಾಗಿರುವ 'ಸರ್ಜಿಕಲ್ ಸ್ಟ್ರೈಕ್'ನ್ನು ವಿ.ವಿ.ಗಳಲ್ಲಿ ಸಂಭ್ರಮಿಸಲು ಸರಕಾರ ಹೊರಟಿರುವಾಗ, ಗಾಂಧೀಜಿ (ಕೋಮುವಾದದ ವಿರುದ್ಧ)ಕೊನೆಯ ಉಪವಾಸ ಆರಂಭಿಸಿದ ಜನವರಿ 13ನ್ನು ಅವರ ರಾಷ್ಟ್ರವಾದವನ್ನು ಸಾರಿ ಹೇಳುವ ದಿನವಾಗಿ ಆಚರಿಸಬೇಕಾಗಿದೆ."

– ಪ್ರೊ. ಇರ್ಫಾನ್ ಹಬೀಬ್



(ಗಾಂಧಿ ಜಯಂತಿಯ ಸಂದರ್ಭದಲ್ಲಿ 'ಸಹಮತ್' ಸಂಘಟಿಸಿದ 'ಗಾಂಧಿ ಮತ್ತು ರಾಷ್ಟ್ರೀಯ ಪ್ರಶ್ನೆ' ಬಗ್ಗೆ ಆಡಿದ ಭಾಷಣದ ವಿಡಿಯೋದಲ್ಲಿ)

4 ವರ್ಷಗಳಲ್ಲಿ ಕಾರ್ಪೊರೇಟ್‌ಗಳಿಂದ ಸಾಲ-ವಸೂಲಿಯ 7 ಪಟ್ಟು ಸಾಲ-ವಜಾ

ಸಂಸದೀಯ ಹಣಕಾಸು ಸ್ಥಾಯಿ ಸಮಿತಿಯ ಮುಂದೆ ಭಾರತೀಯ ರಿಝರ್ವ್ ಬ್ಯಾಂಕ್ ಸಲ್ಲಿಸಿದ ಮಾಹಿತಿಯ ಪ್ರಕಾರ ಅಚ್ಛೇದಿನ್‌ಗಳ ನಾಲ್ಕು ವರ್ಷಗಳಲ್ಲಿ, ಅಂದರೆ ಎಪ್ರಿಲ್ 2014ರಿಂದ ಎಪ್ರಿಲ್ 2018ರ ನಡುವೆ ಸಾರ್ವಜನಿಕ ವಲಯದ ಬ್ಯಾಂಕುಗಳು 3,16,500 ಕೋಟಿ ರೂ.ಗಳ ಸಾಲಗಳನ್ನು ವಜಾ ಮಾಡಿವೆ, ಅಂದರೆ ಲೆಕ್ಕದಿಂದ ತೆಗೆದು ಪಕ್ಕಕ್ಕಿಟ್ಟು ತಮ್ಮ ಲೆಕ್ಕಾಚಾರಗಳನ್ನು 'ಚೊಕ್ಕ'ಗೊಳಿಸಿವೆ.

ಇದು 2018-19ರ ಕೇಂದ್ರ ಬಜೆಟಿನಲ್ಲಿ ಸರಕಾರದ ವೆಚ್ಚದ ಮುಖ್ಯ ಬಾಬ್ತುಗಳಾದ ಶಿಕ್ಷಣ ,ಆರೋಗ್ಯ ಮತ್ತು ಸಾಮಾಜಿಕ ರಕ್ಷಣೆಗೆಂದು ಇಟ್ಟಿರುವ ಹಣದ(1.38ಲಕ್ಷ ಕೋಟಿ ರೂ.) 2.3 ಪಟ್ಟು.. ಅಂದರೆ ಕೋಟ್ಯಂತರ ಜನಸಾಮಾನ್ಯರ ಆರೋಗ್ಯ ಶಿಕ್ಷಣ ಮತ್ತು ಸಾಮಾಜಿಕ ಭದ್ರತೆಗೆ ಖರ್ಚು ಮಾಡಿದ ಮೊತ್ತದಷ್ಟು ಕೆಲವೇ ದೊಡ್ಡ ಕಾರ್ಪೊರೇಟ್‌ಗಳ ಸಾಲಬಾಕಿಗಳನ್ನು ಅವರಿಂದ ವಸೂಲಿ ಮಾಡುವ ಬದಲು ಬಿಟ್ಟುಕೊಡಲಾಗಿದೆ.

2017-18ರ ಒಂದೇ ವರ್ಷದಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳು 1.44 ಲಕ್ಷ ಕೋಟಿ ರೂ.ಗಳ ಸಾಲ-ವಜಾ ಮಾಡಿದವು ಎಂದು ಈ ಹಿಂದೆ ವರದಿಯಾಗಿತ್ತು. ಅಂದರೆ 2018-19ರ ಬಜೆಟಿನಲ್ಲಿ ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಭದ್ರತೆಗೆ ಇಟ್ಟಿರುವ ಹಣಕ್ಕಿಂತಲೂ ಹೆಚ್ಚು.

ಎಂಎಸ್‌ಪಿಯ ಆಶ್ವಾಸನೆಯ ಹೊರತಾಗಿಯೂ, ತಮ್ಮ ಬೆಳೆಗಳಿಗೆ ಸಿಗಬೇಕಾದ ಬೆಲೆ ಸಿಗದೆ ಸಾಲದ ಹೊರೆ ಹೊತ್ತಿರುವ ರೈತರ ಸಾಲಮನ್ನಾದ ಬೇಡಿಕೆಯನ್ನು ಈಡೇರಿಸಲು ಹಣ ಇಲ್ಲ ಎನ್ನುವ ಸರಕಾರ ದೊಡ್ಡ ಕಾರ್ಪೊರೇಟ್ ಕುಳಗಳಿಗೆ ಇಷೊಂದು ದೊಡ್ಡ ಪ್ರಮಾಣದಲ್ಲಿ ಸಾಲಮನ್ನಾ ಹೇಗೆ, ಏಕೆ ಮಾಡುತ್ತದೆ ಎಂಬ ಪ್ರಶ್ನೆ ಕೇಳಿದಾಗಲೆಲ್ಲ ಸರಕಾರ ಕೊಡುವ ಉತ್ತರ ಇದು ಸಾಲಮನ್ನಾ ಅಲ್ಲ, ಸಾಲ-ವಜಾ ಮಾತ್ರ ಎಂದು. ಅಂದರೆ ಈ ಸಾಲಗಳನ್ನು ಮನ್ನಾ ಮಾಡಿಲ್ಲ, ಅವು ಲೆಕ್ಕದಲ್ಲಿ ಇಲ್ಲ ಅಷ್ಟೇ, ಆದರೆ ಅವುಗಳ ವಸೂಲಾತಿ ಪ್ರಯತ್ನ ಮುಂದುವರೆಯುತ್ತಿರುತ್ತದೆ ಎಂಬುದು ಸರಕಾರದ ವಾದ.


ಹಣಕಾಸು ಮಂತ್ರಿಗಳು ಇತ್ತೀಚೆಗೂ ಇದೇ ವಾದವನ್ನು ಮುಂದಿಟ್ಟಿದ್ದಾರೆ. ಆದರೆ ರಿಝರ್ವ್ ಬ್ಯಾಂಕ್ ಮುಂದಿಟ್ಟ ಮಾಹಿತಿಗಳ ಪ್ರಕಾರ ಕಳೆದ ನಾಲ್ಕು ವರ್ಷಗಳಲ್ಲಿ ವಸೂಲಾದದ್ದು ಕೇವಲ 44,900 ಕೋಟಿ ರೂ. ಮಾತ್ರ. ಅಂದರೆ ವಜಾ ಆದ/ಮಾಡಿದ ಮೊತ್ತದ ಏಳನೇ ಒಂದಂಶದಷ್ಟು ಮಾತ್ರ!

ಇದಲ್ಲದೆ, ರಿಝರ್ವ್ ಬ್ಯಾಂಕ್ ಮಾಹಿತಿ ಪ್ರಕಾರ ಮೊದಲ ಕಂತಿನಲ್ಲಿ 1.75ಲಕ್ಷ ಕೋಟಿ ರೂ.ಗಳ ಮೊತ್ತದ ಸುಸ್ತಿ ಸಾಲಗಳನ್ನು ಎನ್‌ಸಿಎಲ್‌ಟಿ (ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ)ಗೆ ವಹಿಸಲಾಗಿತ್ತು, ನಂತರ ಇನ್ನೂ 90,000 ಕೋಟಿರೂ. ಮೊತ್ತದ ಸುಸ್ತಿಸಾಲಗಳನ್ನು ವಹಿಸಲಾಯಿತು. ಈ ಎನ್‌ಸಿಎಲ್‌ಟಿಯಲ್ಲಿ ಸಾಮಾನ್ಯವಾಗಿ ಬ್ಯಾಂಕುಗಳು ತಮಗೆ ಬರಬೇಕಾದ ಸಾಲದಲ್ಲಿ ಒಂದಂಶವನ್ನು ಕಳಕೊಳ್ಳಬೇಕಾಗುತ್ತದೆ. ಇದನ್ನು 'ಹೇರ್‌ಕಟ್' (ಚೌರ?) ಎನ್ನುತ್ತಾರೆ. ಇದು 20%ದಿಂದ 90%ದ ವರೆಗೂ ಹೋಗುತ್ತದಂತೆ. ಸರಾಸರಿ 60%ದಷ್ಟಾದರೂ 'ಚೌರ'ವನ್ನು ಸಾರ್ವಜನಿಕ ವಲಯದ ಬ್ಯಾಂಕುಗಳು, ಅಂದರೆ ವಾಸ್ತವವಾಗಿ ಸಾರ್ವಜನಿಕರು ಎದುರಿಸಬೇಕಾಗುತ್ತದೆ.

ಐಎಲ್&ಎಫ್‌ಎಸ್ ಆಡಳಿತ ಮಂಡಳಿ ವಜಾ – ಬ್ಯಾಂಕುಗಳಿಗೆ ಇನ್ನಷ್ಟು 'ಚೌರ'ದ ಕ್ರಮ?

ಕಳೆದ ವಾರ ಸರಕಾರ ಐಎಲ್&ಎಫ್‌ಎಸ್‌ನ ಆಡಳಿತ ಮಂಡಳಿಯನ್ನು ವಜಾ ಮಾಡಿ ತನ್ನ ಕೈಗೆ ತೆಗೆದುಕೊಳ್ಳಲು ಎನ್‌ಸಿಎಲ್‌ಟಿಗೆ ಅರ್ಜಿ ಹಾಕಿ ಅನುಮತಿ ಪಡೆದಿರುವುದು ಈಗ ದೊಡ್ಡ ಸುದ್ದಿಯಾಗಿದೆ. ಈ ಐಎಲ್‌ಎಫ್‌ಎಸ್, ಇನ್‌ಫ್ರಾಸ್ಟ್ರಕ್ಚರ್ ಲೀಸಿಂಗ್ ಅಂಡ್ ಫಿನಾನ್ಸಿಂಗ್ ಸರ್ವಿಸಸ್ ನವ-ಉದಾರವಾದಿಗಳ ಪ್ರಿಯ 'ಪಿಪಿಪಿ' (ಸಾರ್ವಜನಿಕ-ಖಾಸಗೀ ಭಾಗೀದಾರಿಕೆ)ಯ ಒಂದು ಈಗ ಅಕ್ಷರಶಃ 'ಜ್ವಲಂತ'ವಾದ ಮಾದರಿ. ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಸಾಲ ಪಡೆದು ತನ್ನ 169 ಉಪಕಂಪನಿಗಳ ಮೂಲಕ ಹೆದ್ದಾರಿಗಳು, ಸುರಂಗಗಳು, ಬಂದರುಗಳು, ಇಂಧನ, ಮುಂತಾದ ಮೂಲರಚನೆ ವಲಯದ ಪ್ರಾಜೆಕ್ಟ್‌ಗಳಿಗೆ ಸಾಲ ಒದಗಿಸುವಂತದ್ದು. ಇದರ ತಲೆಯ ಮೇಲೆ ಇದೀಗ 91,000 ಕೋಟಿ ಸಾಲ ಬಾಕಿ ಹೊರೆಯಿದೆಯಂತೆ. ಈ ವರ್ಷವೇ ಇದು 20,000 ಕೋಟಿರೂ.ಗಳಷ್ಟು ಸಾಲಗಳನ್ನು ತೀರಿಸಬೇಕಾಗಿದೆ. ಆದರೆ ಅಷ್ಟು ಆದಾಯ ಅದಕ್ಕಿಲ್ಲ. ಅದರಿಂದ ಅದು ಕುಸಿದರೆ ಇಡೀ ಹಣಕಾಸು ವಲಯದಲ್ಲಿ ಅಲ್ಲೋಲ-ಕಲ್ಲೋಲವಾದೀತು ಎಂದು ಸರಕಾರ ಈ ಕ್ರಮ ಕೈಗೊಂಡಿದೆ ಎನ್ನಲಾಗಿದೆ.

ಅದರ ಈ ಕ್ರಮ ಯಶಸ್ವಿಯಾಗಬೇಕಾದರೆ ಈ ಕಂಪನಿಗೆ ದೊಡ್ಡ ಪ್ರಮಾಣದಲ್ಲಿ ಸಾಲ ನೀಡಿದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ, ಬ್ಯಾಂಕ್ ಆಫ್ ಇಂಡಿಯ, ಪಂಜಾಬ್ ನ್ಯಾಶನಲ್ ಬ್ಯಾಂಕ್ ಇತ್ಯಾದಿಗಳು ದೊಡ್ಡ ಪ್ರಮಾಣದ 'ಚೌರ'ವನ್ನು ಮತ್ತೆ ಎದುರಿಸಬೇಕಾಗುತ್ತದೆ ಎಂದು ಪರಿಣಿತರು ಹೇಳುತ್ತಾರೆ. **ವಾಸ್ತವವಾಗಿ ಇದು ಈಗ ಅನಾವರಣಗೊಳ್ಳುತ್ತಿರುವ ಚಮಚಾ ಬಂಡವಾಳಶಾಹಿ ಹಗರಣದ ಭಾಗ ಎಂದು ಕೆಲವು ವಿಶ್ಲೇಷಕರು ಹೇಳುತ್ತಿದ್ದಾರೆ.**



ಅಚ್ಛೇ ದಿನ್‌ಗಳಲ್ಲಿ ಗಾಂಧಿ ಜಯಂತಿ: ಇಬ್ಬರು ಮಹಿಳೆಯರ ಭಿನ್ನ-ಭಿನ್ನಮತ

ಈ ವಾರ ದೇಶಾದ್ಯಂತ ಗಾಂಧಿ ಜಯಂತಿ ಆಚರಿಸಲಾಯಿತು. ಈ ವರ್ಷದ ಗಾಂಧಿ ಜಯಂತಿಗೆ ಒಂದು ವಿಶೇಷತೆಯಿತ್ತು. ಏಕೆಂದರೆ ಇದು ಅವರ 150ನೇ ಜನ್ಮ ದಿನಾಚರಣೆ, ಆದರೆ ಗಾಂಧೀಜಿಯನ್ನು 'ಸ್ವಚ್ಛತೆ'ಗೆ ಮಾತ್ರ ಸೀಮಿತಗೊಳಿಸಿರುವ ಅಚ್ಛೇ ದಿನಗಳಲ್ಲಿ ಈ ವರ್ಷವೂ ಅದು ಆ ಮಿತಿಯನ್ನು ದಾಟಲಿಲ್ಲ. ಈ ಬಗ್ಗೆ ಈ ವರ್ಷ ಇಬ್ಬರು ಮಹಿಳೆಯರ ಉದ್ಗಾರಗಳು ಗಮನ ಸೆಳೆದಿವೆ.

ಇವರಲ್ಲಿ ಒಬ್ಬರು ದೇಶದ ಹಿರಿಯ ಆರ್ಥಿಕ ತಜ್ಞೆ ದೇವಕಿ ಜೈನ್. **"ಗಾಂಧೀಜಿ ಅಂದರೆ ಸ್ವಚ್ಛತೆ ಮಾತ್ರವೇ? ನಿಜವಾಗಿಯೂ?"** ಎಂದು ಪ್ರಶ್ನಿಸಿರುವ ಅವರು ಇದೊಂದು ಮನನೋಯಿಸುವ ಪ್ರಚಾರ ಎಂದಿದ್ದಾರೆ. 150ನೇ ದಿನಾಚರಣೆಯಲ್ಲಿ ಭಾರತ ಸರಕಾರ ಶೌಚಾಲಯಗಳ ಮೇಲೆ ಮತ್ತು ಬಹಿರಂಗ ಶೌಚದ ಮೇಲೆಯೇ ಗಮನ ಕೇಂದ್ರೀಕರಿಸಿದ್ದು ಸಂಕಟ ಉಂಟು ಮಾಡಿದೆ ಎಂದು ಅವರು ಹೇಳಿದ್ದಾರೆ. ಗಾಂಧೀಜಿಯ ಪ್ರಖ್ಯಾತ ಕನ್ನಡಕದೊಂದಿಗೆ ಆರಂಭಿಸಿದ ಈ 'ಸ್ವಚ್ಛ ಭಾರತ'ದಲ್ಲಿ ಬಡತನ ನಿವಾರಣೆ, ಜೀವನ ಮಾರ್ಗ, ಸರ್ವ ಧರ್ಮ ಸಮಾನತೆ ಇತ್ಯಾದಿಗಳಲ್ಲಿ ಗಾಂಧೀಜಿಯ ಅಪ್ರತಿಮ ಕೊಡುಗೆಗಳು ಕಾಣೆಯಾಗಿವೆ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಇನ್ನೊಬ್ಬ ಮಹಿಳೆಯ ಹೆಸರು ಸಾವಿತ್ರಿ ಬಾಯಿ ಪುಲೆ., ದೇಶದಲ್ಲಿ ಮಹಿಳಾ ಸಾಕ್ಷರತೆಗೆ, ಮಹಿಳಾ ಶಿಕ್ಷಣಕ್ಕೆ ತನ್ನ ಬದುಕನ್ನು ಅರ್ಪಿಸಿದ ದೇಶದ ಮೊದಲ ಮಹಿಳಾ ಶಿಕ್ಷಕಿಯೆನಿಸಿದ ಸಾವಿತ್ರಿ ಬಾಯಿ ಪುಲೆ ಅಲ್ಲ. ಬಹುಶಃ ಅವರ ಪ್ರೇರಣೆಯಿಂದ ಈ ಹೆಸರು ಪಡೆದ 37ವರ್ಷದ ಸಂಸತ್ ಸದಸ್ಯೆ. ಅದೂ ಬಿಜೆಪಿಯಿಂದ ಉತ್ತರಪ್ರದೇಶದ ಬಹರಾಯಿಚ್ ಮೀಸಲು ಕ್ಷೇತ್ರದಿಂದ ಚುನಾಯಿತರಾದವರು. **ಗಾಂಧಿ ಜಯಂತಿಯ ಮುನ್ನಾದಿನ ಸರಕಾರದ ಸ್ವಚ್ಛತಾ ಆಂದೋಲನ ಒಂದು 'ಪ್ರಚಾರ ಸ್ಟಂಟ್' ಎಂದು ಧಿಕ್ಕರಿಸುತ್ತ, ಬಹರಾಯಿಚ್‌ನ ಆರ್.ಟಿ.ಒ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪೊರಕೆ ಹಿಡಿದು ಪೋಸು ಕೊಡಲು ಅವರು ನಿರಾಕರಿಸಿದರು** ಎಂದು ಹಿಂದುಸ್ತಾನ್ ಟೈಮ್ಸ್(ಅಕ್ಟೋಬರ್2) ವರದಿ ಮಾಡಿದೆ.


ಬಡ ಪರಿಶಿಷ್ಟ ಜಾತಿ ಜನಗಳು, ಮುಸ್ಲಿಮರು ಇನ್ನು ಪೊರಕೆ ಹಿಡಿಯುವುದಿಲ್ಲ, ಅವರಿಗೆ ಉದ್ಯೋಗ ಭದ್ರತೆ ಮತ್ತು ಸಾಮಾಜಿಕ ಗೌರವ ಬೇಕಾಗಿದೆ, ಪೊರಕೆ ಬೇಕಾಗಿಲ್ಲ, ಸಮಾನ ಹಕ್ಕುಗಳು, ಸಮಾನ ಅವಕಾಶ ಬೇಕಾಗಿದೆ ಎಂದು ಅವರು ಗುಡುಗಿದರಂತೆ. ಈ ಸ್ವಚ್ಛತಾ ಆಂದೋಲನ ಇತರ ಮುಖ್ಯಪ್ರಶ್ನೆಗಳಿಂದ ಜನಗಳ ' ಗಮನವನ್ನು ಬೇರೆಡೆಗೆ ತಿರುಗಿಸಲಿಕ್ಕಾಗಿ; ಕಾರ್ಯಾಂಗ ಮತ್ತು ಶಾಸಕಾಂಗ ಮೊದಲು ಸಮಾಜದ ಬಗ್ಗೆ ಒಂದು ಸ್ವಚ್ಛ ಹೃದಯವನ್ನು ಹೊಂದಿರಬೇಕು ಎನ್ನುತ್ತ ಈ ಕಾರ್ಯಕ್ರಮವನ್ನು ಏರ್ಪಡಿಸಿದ್ದ ಆರ್‌ಟಿಒ ಅಧಿಕಾರಿಗಳಿಗೆ ಚರಂಡಿಗಳಲ್ಲಿ ಇಳಿದು ಅವನ್ನು ಸ್ವಚ್ಛ ಮಾಡಿ ಎಂದು ಸವಾಲು ಹಾಕಿದರು. ಆರ್ಥಿಕವಾಗಿ ದುರ್ಬಲರಾಗಿರುವವರು, ಅಂಚಿಗೆ ತಳ್ಳಲ್ಪಟ್ಟವರ ಬದಲಿಗೆ ಮೀಸಲಾತಿಯನ್ನು ಮತ್ತು ಸಂವಿಧಾನವನ್ನು ವಿರೋಧಿಸುವವರು ಕಸ ಗುಡಿಸಲಿ ಎಂದು ಅವರು ಹೇಳಿರುವುದಾಗಿ ಈ ವರದಿ ಹೇಳುತ್ತದೆ.

ಈ ಬಗ್ಗೆ 'ಭಕ್ತ ಮಂಡಳಿ'ಯ ಮತ್ತು ದೇಶದ 'ಪ್ರಧಾನ ಸೇವಕ'ರ 'ಮನದ ಮಾತು' ಏನು ಎಂದು ತಿಳಿದು ಬಂದಿಲ್ಲ. ಆದರೆ ಇದಕ್ಕೆ ಮೊದಲು ರಾಷ್ಟ್ರಪತಿಗಳು ಸ್ವಚ್ಛ ಭಾರತ ಆಂದೋಲನ ಒಂದು ಸಾಮೂಹಿಕ ಆಂದೋಲನವಾಗಿದೆ, ನಮ್ಮ ಕಣ್ಣೆದುರು ನಡೆಯುತ್ತಿರುವ ಒಂದು ಕ್ರಾಂತಿಯಾಗಿದೆ ಎಂದು ಹಾಡಿ ಹೊಗಳಿದರು ಎಂದೂ ವರದಿಯಾಗಿದೆ.

ಈಗ ಅಂಬಾನಿ ಆರೋಗ್ಯ ವಿಮೆ....?

ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲರ ಆಡಳಿತ ಕಳೆದ ವಾರ ತನ್ನ ಸಿಬ್ಬಂದಿಗೆ ಒಂದು ಗುಂಪು ಆರೋಗ್ಯ ವಿಮೆ ಪ್ರಕಟಿಸಿತು. ಈ ಗುಂಪು ವಿಮೆ ಸಾರ್ವಜನಿಕ ವಲಯದ ವಿಮಾ ಕಂಪನಿಯಿಂದಲ್ಲ, ಬದಲಿಗೆ ಅನಿಲ್ ಅಂಬಾನಿ ಗುಂಪಿನ ಕಂಪನಿಯೊಂದಿಗೆ. ಇದೇನೂ ವಿಶೇಷ ಸಂಗತಿಯಲ್ಲದಿದ್ದರೂ ಎರಡು ದಿನಗಳ ಹಿಂದೆಯಷ್ಟೇ ಈ ಗುಂಪು ತನ್ನ ಸಾಮಾನ್ಯ ವಿಮಾ ಕಂಪನಿಯಿಂದ ಪ್ರತ್ಯೇಕವಾದ ರಿಲಯನ್ಸ್ ಹೆಲ್ತ್ ಇಂಶೂರೆನ್ಸ್ ಎಂಬ ಕಂಪನಿಯನ್ನು ಆರಂಭಿಸಿತ್ತು ಎಂಬುದೊಂದು ವಿಶೇಷ. "ಆಯುಷ್ಮಾನ್ ಭಾರತ" ಯೋಜನೆ ಆರಂಭವಾಗಿ ಆರೋಗ್ಯ ವಿಮೆಗೆ ಭಾರೀ ಮಾರುಕಟ್ಟೆ ಬರಲಿರುವುದರಿಂದ ಈ ಪ್ರತ್ಯೇಕ ಆರೋಗ್ಯ ವಿಮಾ ಕಂಪನಿಯನ್ನು ಆರಂಭಿಸಲಾಗಿದೆಯಂತೆ.

ಆದರೆ ಈ ವಿಮಾಯೋಜನೆಯ ಬಗ್ಗೆ ಜಮ್ಮು ಮತ್ತು ಕಾಶ್ಮೀರದ ನೌಕರರ ಜಂಟಿ ಕ್ರಿಯಾಸಮಿತಿ (ಇಜೆಎಸಿ) ಆಕ್ಷೇಪ ವ್ಯಕ್ತಪಡಿಸಿದೆಯಂತೆ. ಕಾರಣ ಇದು ಅಂಬಾನಿ ಗುಂಪಿಗೆ ಮಾತ್ರ ಪ್ರಯೋಜನ ಒದಗಿಸುವ ಯೋಜನೆಯೆಂಬುದಕ್ಕಷ್ಟೇ ಅಲ್ಲ. ಈ ಯೋಜನೆಯೊಂದಿಗೆ ಅವರಿಗೆ ಇದುವರೆಗೆ ಇದ್ದ ಮಾಸಿಕ ವೈದ್ಯಕೀಯ ಭತ್ಯೆ ಇಲ್ಲವಾಗುತ್ತದೆ. ಈ ಯೋಜನೆ ಆಸ್ಪತ್ರೆಗೆ ದಾಖಲಾದರೆ ಮಾತ್ರ ಅನ್ವಯವಾಗುವಂತದ್ದು. ಅಲ್ಲದೇ ಪ್ರೀಮಿಯಂ ಮೊತ್ತ ಕೂಡ ಬಹಳ ಹೆಚ್ಚು ಮತ್ತು ಸಂಬಳಕ್ಕೆ ಅನುಗುಣವಾಗಿಲ್ಲದೆ ಎಲ್ಲರಿಗೂ ಒಂದೇ ಪ್ರೀಮಿಯಂ ಮೊತ್ತ. ಇದರಿಂದ ಕಡಿಮೆ ಸಂಬಳದ ನೌಕರರಿಗೆ ಹೆಚ್ಚಿನ ಹೊರೆ ಬೀಳುತ್ತದೆ ಎಂದು ಇದಕ್ಕೆ ವಿರೋಧ ವ್ಯಕ್ತವಾಗಿದೆಯಂತೆ.



ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್‌ಪೋಸ್ಟ್

2016 ರ ಸರ್ಜಿಕಲ್ ಸ್ಟ್ರೈಕ್ ಯಶಸ್ವಿಯಾಗಿದ್ದರೆ ಇನ್ನೊಂದು ಯಾಕೆ?

ಸಪ್ಟಂಬರ್ 29ನ್ನು 'ಮಿಂಚಿನ ಪ್ರಹಾರದದ ದಿನ' ವಾಗಿ ಆಚರಿಸಬೇಕು ಎಂದು ಯುಜಿಸಿ ಮೂಲಕ ಎಲ್ಲ ವಿಶ್ವವಿದ್ಯಾಲಯಗಳಿಗೆ ಯುಜಿಸಿ ಸುತ್ತೋಲೆ ಹೋಯ್ತು . ಈ ಬಗ್ಗೆ ಆಕ್ಷೇಪಗಳು ಬಂದಾಗ ಅದು ಕಡ್ಡಾಯವಲ್ಲ ಎಂದು ಹೇಳಲಾಯಿತು. ಆದರೂ ಆ ದಿನವನ್ನು ಆಳುವ ಪಕ್ಷ 'ಪರಾಕ್ರಮ ದಿನ'ವಾಗಿ ಆಚರಿಸಿತು. ಆದಿನ ಆಳುವ ವಲಯದಿಂದ ಹಲವು ದನಿಗಳು ಕೇಳಬಂದವು.

"ದೊಡ್ಡದೇನೋ ಸಂಭವಿಸಿದೆ" ಎಂದು ಗೃಹಮಂತ್ರಿಗಳು ಹೇಳಿದರು. ನಮ್ಮ ಸೈನಿಕರಿಗೆ ಈಗ ಪಾಕಿಸ್ತಾನಕ್ಕೆ ಸೂಕ್ತ ಉತ್ತರ ಕೊಡಲು ಅವಕಾಶ ನೀಡಲು ನಿರ್ಧರಿಸಲಾಗಿದೆ ಎಂದರು ಪ್ರಧಾನಿಗಳು. ಈ ನಡುವೆ ಭೂಸೇನಾಧ್ಯಕ್ಷರು ಇನ್ನೊಂದು ಸರ್ಜಿಕಲ್ ಸ್ಟ್ರೈಕ್ ಅಂದರೆ ಮಿಂಚಿನ ಪ್ರಹಾರ ಬೇಕಾಗಿದೆ ಎಂದರು.

ಈ ಎಲ್ಲ ದನಿಗಳ ಅರ್ಥ 2016ರ 'ಮಿಂಚಿನ ಪ್ರಹಾರ' ವಿಫಲವಾಗಿದೆ, ಅಥವ ಸೂಕ್ತ ಫಲ ನೀಡಿಲ್ಲ ಎಂದು ಭಾವಿಸಬೇಕೇ ಎಂದೊಬ್ಬ ಪತ್ರಕರ್ತರು ಪ್ರಶ್ನಿಸಿದ್ದಾರೆ. ಅಂಕಿ-ಅಂಶಗಳು ಸರಕಾರಕ್ಕೂ ಇರುವಂತೆ ಕಾಣುವ ಸಂದೇಹವನ್ನು ಬಲಪಡಿಸುತ್ತವೆ. ಈ ಕೆಳಗಿನ ಕೋಷ್ಟಕ ನೋಡಿ:

ಜಮ್ಮು ಮತ್ತು ಕಾಶ್ಮೀರ ಹತೋಟಿ ರೇಖೆಯ ಬಳಿ ಕಳೆದ ಐದು ವರ್ಷಗಳು

	ಕದನವಿರಾಮ ಉಲ್ಲಂಘನೆಗಳು	ನುಸುಳುವ ಪ್ರಯತ್ನಗಳು	ಸಾಯಿಸಿದ ಭಯೋತ್ಪಾದಕರು	ಭದ್ರತಾ ಪಡೆಗಳ ಸಾವುಗಳು
2014	153	222	110	51
2015	152	121	113	41
2016	228	371	165	88
2017	860	406	218	83
2018*	1046	140	173	71

* ಇದುವರೆಗೆ (ಕೃಪೆ: ದಿ ಟ್ರಿಬ್ಯೂನ್, ಸಪ್ಟಂಬರ್ 27)

ಪೆಟ್ರೋಲ್-ಡೀಸೆಲ್ ಮೇಲೆ 2ರೂ. ಅಭಕಾರಿ ಸುಂಕ ಕಡಿತ-ಸುದ್ದಿ
ಜನವರಿ 2016ರಿಂದ ಅಬಕಾರಿ ಸುಂಕ ಹೆಚ್ಚಿಸಿ ಬಳಕೆದಾರರಿಂದಮಾಡಿದ ಹೆಚ್ಚುವರಿ ವಸೂಲಿ ಪಟ್ರೋಲ್‌ನಲ್ಲಿ ರೂ. 12 ಮತ್ತು ಡೀಸೆಲ್‌ನಲ್ಲಿ 13.68 ರೂ.
ಕಡಿತ ಮಾಡಿದ್ದು ಒಟ್ಟು ರೂ.3.50 -ಅಕ್ಟೊಬರ್ 2017ರಲ್ಲಿ 2ರೂ., ಅಕ್ಟೋಬರ್ 4, 2018ರಲ್ಲಿ 1.50
-ಸುದ್ದಿ ವಿಶ್ಲೇಷಣೆ
ರೂಪಾಯಿ ಬೆಲೆ ಇಳಿಕೆಯಲ್ಲಿ ಮತ್ತೊಂದು ಹೊಸ ದಾಖಲೆ
-ಅಲ್ಟೋಬರ್ 5ರಂದು ಡಾಲರಿಗೆ ರೂ.74.13 -ಸುದ್ದಿ 2

ಚೌಕೀದಾರ-ಭಾಗೀದಾರ: ನಾಲ್ಕು ವರ್ಷಗಳ ಕಸ ಸ್ವಚ್ಛ ಮಾಡುವ ಕೆಲಸ ಆರಂಭ!



ವ್ಯಂಗ್ಯಚಿತ್ರ: ಅಲೋಕ್ ನಿರಂತರ್

‘ಆಯುಷ್ಮಾನ್ ಭಾರತ’ ಎಂಬೊಂದು ಕ್ರೂರ ವ್ಯಂಗ್ಯ





ಸಪ್ಟಂಬರ್ 23 ರಂದು ಪ್ರಧಾನ ಮಂತ್ರಿಗಳು ವಿಧ್ಯುಕ್ತವಾಗಿ ಉದ್ಘಾಟಿಸಿರುವ ‘ಆಯುಷ್ಮಾನ್ ಭಾರತ’ ಜಗತ್ತಿನ ಅತ್ಯಂತ ದೊಡ್ಡ ಆರೋಗ್ಯ ಯೋಜನೆ ಎಂದು ಬೆನ್ನು ತಟ್ಟಿಕೊಂಡಿದ್ದಾರೆ. ಅವರ ಈ ದಾವೆ, ಅವರ ಸರಕಾರ ಇದಕ್ಕೆ ಆರಿಸಿರುವ ವಿಮಾ ದಾರಿಯ ದೃಷ್ಟಿಯಿಂದಲೂ, ಮತ್ತು ಈ ದಾರಿಯಲ್ಲಿ ಅದಕ್ಕೆ ನೀಡಿರುವ ಅತ್ಯಲ್ಪ ಮೊತ್ತದ ದೃಷ್ಟಿಯಿಂದಲೂ ತಪ್ಪಾಗಿದೆ, ಅದೊಂದು ಕ್ರೂರ ವ್ಯಂಗ್ಯ ಎನ್ನುತ್ತಾರೆ

ಪ್ರೊ.ಪ್ರಭಾತ್ ಪಟ್ನಾಯಕ್

ಇತ್ತೀಚೆಗೆ ಆರಂಭಿಸಿದ “ಆಯುಷ್ಮಾನ್ ಭಾರತ” ಸ್ಕೀಮ್ ಕುರಿತಂತೆ ಮೋದಿ ಸರಕಾರದ ದಾವೆಗಳಲ್ಲಿನ ಮೋಸ ಅದರ ಈ ಹಿಂದಿನ ಎಲ್ಲ ಪ್ರಯತ್ನಗಳನ್ನೂ ಮೀರಿದ್ದು. ಇದರಲ್ಲಿ ಅಶ್ಚರ್ಯವೇನಿಲ್ಲ. ಏಕೆಂದರೆ ಈ ಸರಕಾರಕ್ಕೆ ಬೇಕಾಗಿರುವುದು ವಾಸ್ತವವಾಗಿ ತಾನು ಏನು ಮಾಡಿದ್ದೇನೆ ಎಂಬುದಲ್ಲ, ಬದಲಿಗೆ, ತನ್ನ ಕೆಲಸದ ಬಗ್ಗೆ ಎಂತಹ ಗ್ರಹಿಕೆಯನ್ನು ಸೃಷ್ಟಿಸಿದ್ದೇನೆ ಎಂಬುದೇ ಮುಖ್ಯ.

‘ಆಯುಷ್ಮಾನ್ ಭಾರತ್’ನಲ್ಲಿ ಎರಡು ಪ್ರತ್ಯೇಕ ಭಾಗಗಳಿವೆ. ಒಂದು, 1,50,000 “ಆರೋಗ್ಯ ಮತ್ತು ಕ್ಷೇಮ ಕೇಂದ್ರ” ಗಳ ನಿರ್ಮಾಣ. ವಾಸ್ತವವಾಗಿ ಇವು ಈ ಹಿಂದಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳೇ. ಅವಕ್ಕೆ ಹೊಸದೊಂದು ಅಲಂಕಾರದ ಹೆಸರು ಕೊಡಲಾಗಿದೆಯಷ್ಟೇ. ಇವಕ್ಕೆ 2018–19ರ ಬಜೆಟಿನಲ್ಲಿ ಕೊಟ್ಟಿರುವುದು ಕೇವಲ ತಲಾ 80,000ರೂ. ಇದನ್ನೊಂದು ದೊಡ್ಡ ಹೊಸ ಮುತುವರ್ಜಿ ಎಂದೇನೂ ಬಿಂಬಿಸಲು ಸಾಧ್ಯವಿಲ್ಲ ಎಂಬುದಂತೂ ಸ್ಪಷ್ಟ.

ಇದರ ಇನ್ನೊಂದು ಭಾಗವನ್ನು ‘ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನಾ’(ಪಿಎಂಜೆಎವೈ) ಎಂದು ಮಾರಾಟ ಮಾಡಲಾಗುತ್ತಿದೆ. ಇದೂ ಹಳೆಯ ‘ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನಾ’(ಆರ್‌ಎಸ್‌ಬಿವೈ) ದ ಒಂದು ಹೊಸ ಅವತಾರವಷ್ಟೇ. ಈ ಹೊಸ ಸ್ಕೀಮ್ 10 ಕೋಟಿ ಕುಟುಂಬ(ಅಥವ 50 ಕೋಟಿ ವ್ಯಕ್ತಿ) ಗಳನ್ನು ಒಳಗೊಳ್ಳುತ್ತದೆ, ಮತ್ತು ಪ್ರತಿ ಕುಟುಂಬಕ್ಕೆ ವರ್ಷಕ್ಕೆ 5 ಲಕ್ಷ ರೂ.ಗಳ ಆರೋಗ್ಯ ವಿಮೆ ಒದಗಿಸುತ್ತದೆ ಎನ್ನಲಾಗಿದೆ.

ಇದು ಜಗತ್ತಿನಲ್ಲೇ ಅತಿ ದೊಡ್ಡ ಆರೋಗ್ಯ ವಿಮೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಆದರೂ ಇಂತಹ ಯೋಜನೆಗೆ 2018–19ರ ಬಜೆಟಿನಲ್ಲಿ ಕೊಟ್ಟಿರುವುದು ಕೇವಲ 2000 ಕೋಟಿ ರೂ. ಇದು ತಲಾ ವರ್ಷಕ್ಕೆ 40ರೂ. ಆಗುತ್ತದೆ. ರಾಜ್ಯಗಳು ಇದರ ಖರ್ಚಿನ 40% ಕೊಡಬೇಕಂದಿದೆ. ಇದನ್ನು ಸೇರಿಸಿಕೊಂಡರೂ ತಲಾ 67 ರೂ. ಅಗುತ್ತದಷ್ಟೇ.

ಬಜೆಟಿನಲ್ಲಿ ಏನೇನೂ ಹೆಚ್ಚಳ ಬೇಕಿಲ್ಲದ ಬೃಹತ್ ಯೋಜನೆ!

ತಮಾಷೆಯೆಂದರೆ ಜಗತ್ತಿನ ಅತಿ ದೊಡ್ಡ ಆರೋಗ್ಯ ವಿಮೆಯನ್ನು ಆರಂಭಿಸಲಾಗುತ್ತಿದೆ ಎಂದಿರುವ ಈ ವರ್ಷದ ಬಜೆಟಿನಲ್ಲಿ ಆರೋಗ್ಯ ಬಾಬ್ತಿಗೆ ಕೊಟ್ಟಿರುವ ಹಣದಲ್ಲಿ ಹೆಚ್ಚಳವೇನೂ ಹಿಂದಿನ ಬಜೆಟಿಗೆ ಹೋಲಿಸಿದರೆ ಕಾಣುತ್ತಿಲ್ಲ. 2017–18ರಲ್ಲಿ ಪರಿಷ್ಕೃತ ವೆಚ್ಚ ರೂ. 50,079.6 ಕೋಟಿಯಾದರೆ, 2018–19ರ ಬಜೆಟ್ ನೀಡಿರುವುದು ರೂ.52,800 ಕೋಟಿ. ಅಂದರೆ 5% ದಷ್ಟು ಹೆಚ್ಚು. ಅಂದರೆ ಹಣದುಬ್ಬರವನ್ನು ಲೆಕ್ಕಕ್ಕೆ ತಗೊಂಡರೆ ನಿಜವಾದ ಹೆಚ್ಚಳ ಸುಮಾರು ಸೊನ್ನೆ ಶೇಕಡಾ!

ನೀತಿ ಆಯೋಗ ಅಂತಿಮವಾಗಿ ಇದನ್ನು 10,000 ಕೋಟಿ ರೂ.ಗೆ ಏರಿಸಲಾಗುವುದು ಎಂದಿದೆ. ಅದೇ ಉಸಿರಿನಲ್ಲಿ, ಈ ಯೋಜನೆಗೆ ಬೇಕಾಗಿರುವುದು ಇಷ್ಟೇ, 50 ಕೋಟಿ ವ್ಯಕ್ತಿಗಳಿಗೆ ವರ್ಷಕ್ಕೆ ತಲಾ 1 ಲಕ್ಷ ರೂ.ವರೆಗಿನ ಆರೋಗ್ಯ ವಿಮೆ ಕೊಡಲು ಇದು ಬೇಕಾದಷ್ಟಾಯಿತು ಎಂದೂ ಅದು ಹೇಳಿದೆ.

ಇದು ಹಾಸ್ಯಾಸ್ಪದ ಲೆಕ್ಕಾಚಾರ. ಈ ಯೋಜನೆಗೆ ತೆರುವ ಒಟ್ಟು ವಿಮಾ ಪ್ರೀಮಿಯಂ ಮೊತ್ತ, ಇದರ ಅಡಿಯಲ್ಲಿ ಒಟ್ಟಾಗಿ ಫಲಾನುಭವಿಗಳಿಗೆ ಮಾಡಿದ ವೆಚ್ಚ ಎಂದಿಟ್ಟುಕೊಳ್ಳೋಣ. ಅಂದರೆ 50 ಕೋಟಿ ವ್ಯಕ್ತಿಗಳಿಗೆ 10,000 ಕೋಟಿ ರೂ.ಗಳ ವೆಚ್ಚ. ಇದು ತಲಾ ವರ್ಷಕ್ಕೆ 200ರೂ. ಆಗುತ್ತದೆ. ಸರಕಾರೀ ಆಸ್ಪತ್ರೆಗಳನ್ನು ಬಿಟ್ಟು, ಯಾವುದೇ ಖಾಸಗಿ ಅಸ್ಪತ್ರೆಗೆ ಹೋದರೆ ಒಂದು ಬಾರಿ ಡಾಕ್ಟರನ್ನು ನೋಡಲಿಕ್ಕೇ ಕನಿಷ್ಟ 500 ರೂ. ಬೇಕು, ಇನ್ನು ಔಷಧಿಗಳಿಗೆ ಪ್ರತ್ಯೇಕ ಖರ್ಚಾಗುತ್ತದೆ(ನಿಜ, ಸರಕಾರೀ ಅಸ್ಪತ್ರೆಗಳಿಗೆ ಹೋದರೆ ಈ ಖರ್ಚು ಇರುವುದಿಲ್ಲ, ಆದರೆ ಅವುಗಳ ಸಂಖ್ಯೆ ಬಹಳ ಕಡಿಮೆ, ಸಾಕಷ್ಟಿದ್ದಿದ್ದರೆ ಈ ವಿಮಾ ಯೋಜನೆಯ ಅಗತ್ಯವೇ ಇರುತ್ತಿರಲಿಲ್ಲವಲ್ಲ). ಅಂದರೆ 10,000 ಕೋಟಿ ರೂ.ಗಳು ಒಂದು ಬಾರಿ ಆಸ್ಪತ್ರೆಗೆ ಹೋಗಿ ಬರುವ ವೆಚ್ಚಕ್ಕೂ ಸಾಲದು. ಆದರೂ ನೀತಿ ಆಯೋಗ ಪ್ರತಿ ಕುಟುಂಬಕ್ಕೆ 5ಲಕ್ಷರೂ.ಗಳಂತೆ 10 ಕೋಟಿ ಕುಟುಂಬಗಳಿಗೆ ವಿಮೆ ಒದಗಿಸಲು ಇದು ಸಾಕಷ್ಟಾಗುತ್ತದೆ ಎನ್ನುತ್ತದೆ!

ಸ್ವತಂತ್ರ ಸಂಶೋಧಕರ ಪ್ರಕಾರ 10 ಕೋಟಿ ಕುಟುಂಬಗಳಿಗೆ ವರ್ಷಕ್ಕೆ 5 ಲಕ್ಷ ರೂ. ವರೆಗೆ ಆರೋಗ್ಯ ವಿಮೆ ಒದಗಿಸಬೇಕಾದರೆ ಸುಮಾರು 1.2ಲಕ್ಷ ಕೋಟಿ ರೂ. ಬೇಕು. ಅಂದರೆ ನೀತಿ ಆಯೋಗ ಅಂತಿಮವಾಗಿ ಕೊಡಬಹುದು ಎಂದು ಹೇಳಿರುವ ಮೊತ್ತದ 12 ಪಟ್ಟು, ಮತ್ತು 2018–19ರ ಬಜೆಟಿನಲ್ಲಿ ಕೊಟ್ಟಿರುವುದರ 60 ಪಟ್ಟು. ಆದ್ದರಿಂದ ಇಂತಹ ಸುಮಾರಾಗಿ ಏನೂ ಸಂಪನ್ಮೂಲಗಳನ್ನೇ ಒದಗಿಸದ ಒಂದು ಸ್ಕೀಮನ್ನು ಭೂಮಿಯನ್ನೇ ನಡುಗಿಸುವ ಘಟನೆ ಎನ್ನುವುದು ಕೇವಲ ಒಂದು ಚುನಾವಣಾ–ಪೂರ್ವ ಬಾಯಿಚಳಕ ಅಷ್ಟೇ; ಅದು ಸಾರ್ವತ್ರಿಕ ಆರೋಗ್ಯ ಪಾಲನೆಗಾಗಿ ಸರಕಾರದ ಒಂದು ನಿಜವಾಗಿಯೂ ಅರ್ಥಪೂರ್ಣ ವಾದ ಪ್ರಯತ್ನ ಎನ್ನಲು ಸಾಧ್ಯವಿಲ್ಲ.

ವಿಮಾ ಮಾದರಿ ಉತ್ತಮವಲ್ಲ

ನಿಜವಾಗಿ ಸಾರ್ವತ್ರಿಕ ಆರೋಗ್ಯಪಾಲನೆಗೆ ಬ್ರಿಟಿಶ್ ಅಥವ ಸ್ಕೇಂಡಿನೇವಿಯನ್ ದೇಶಗಳಲ್ಲಿರುವ ಒಂದು ರಾಷ್ಟ್ರೀಯ ಆರೋಗ್ಯ ಸೇವೆಯ ಮಾದರಿ ವಿಮಾ ಮಾದರಿಗಿಂತ ಎಷ್ಟೋ ಉತ್ತಮ. ಉದಾಹರಣೆಗೆ, ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಜಿಡಿಪಿಯ ಶೇಕಡಾವಾರಾಗಿ ಆರೋಗ್ಯ ಪಾಲನೆಯ ಖರ್ಚು ಜಗತ್ತಿನಲ್ಲೇ ಅತಿ ಹೆಚ್ಚು. ಸ್ಕೇಂಡಿನೇವಿಯನ್ ಅಥವ ಯುರೋಪಿನ ಯಾವುದೇ ದೇಶಕ್ಕೆ ಹೋಲಿಸಿದರೂ ಈ ಅನುಪಾತ ಎಷ್ಟೋ ಹೆಚ್ಚು. 2016ರಲ್ಲಿ ಆರೋಗ್ಯಪಾಲನೆ ವೆಚ್ಚ ಅಲ್ಲಿ ಜಿಡಿಪಿಯ 17.2ಶೇ. ಆಗಿದ್ದರೆ, ಜರ್ಮನಿಯಲ್ಲಿ 11.3ಶೇ., ಸ್ವೀಡನ್‌ನಲ್ಲಿ 11ಶೇ., ಫ್ರಾನ್ಸ್‌ನಲ್ಲೂ 11ಶೇ. ಮತ್ತು ಬ್ರಿಟನ್ನಿನಲ್ಲಿ 9.7ಶೇ. ಆದರೆ ಗುಣಮಟ್ಟದ ಸಾರ್ವತ್ರಿಕ ಆರೋಗ್ಯಪಾಲನೆ ಒದಗಿಸುವಲ್ಲಿ ಅಮೆರಿಕವು ಯುರೋಪಿಯನ್ ದೇಶಗಳಿಗಿಂತ ಬಹಳ ಹಿಂದೆ ಬಿದ್ದಿದೆ ಎಂಬುದು ಸಾಮಾನ್ಯವಾಗಿ ಗುರುತಿಸುವ ಸಂಗತಿ. ಇದಕ್ಕೆ ಕಾರಣ ಅದು ಹಿಡಿದಿರುವ ವಿಮೆಯ ದಾರಿ.

ಈ ದಾರಿಯಲ್ಲಿ ಆರೋಗ್ಯಪಾಲನೆಯ ಗುಣಮಟ್ಟ ಕೆಡುತ್ತದೆ. ಏಕೆಂದರೆ ವಿಮಾ ಕಂಪನಿಗಳು ದಾವೆಗಳನ್ನು ಇತ್ಯರ್ಥ ಮಾಡುವ ಬದಲು ವಕೀಲರನ್ನು ನೇಮಿಸಿಕೊಳ್ಳಲೆಂದೇ ಅಪಾರ ಹಣ ವೆಚ್ಚ ಮಾಡುತ್ತವೆ. ಅ ಮೂಲಕ ರೋಗಿಗಳ ಶುಶ್ರೂಷೆಗೆ ಆಸ್ಪತ್ರೆಗಳು ವಿಮಾ ಹಣ ಕೊಡುವ ಅಗತ್ಯ ಬರದಂತೆ ಮಾಡುತ್ತವೆ. ಅಂದರೆ ಆಸ್ಪತ್ರೆಗಳು ಎಷ್ಟು ಸಾಧ್ಯವೋ ಅಷ್ಟು ಬೇಗ ರೋಗಿಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತವೆ. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಆರೋಗ್ಯಪಾಲನೆಯ ವ್ಯಾಪ್ತಿ ಸದಾ ಸೀಮಿತವಾಗಿಯೇ ಇತ್ತು. ಒಬಾಮ, ಭಾರೀ ವಿರೋಧದ ನಡುವೆ ಆರೋಗ್ಯಪಾಲನೆಯನ್ನು ಸಾರ್ವತ್ರಿಕಗೊಳಿಸಲು ಪ್ರಯತ್ನಿಸಿದರು. ಈಗ ಟ್ರಂಪ್ ಆಡಳಿತ ಅದನ್ನು ವಿಫಲಗೊಳಿಸುತ್ತಿದೆ.

ಟೊಳ್ಳು ಹೆಗ್ಗಳಿಕೆ

ಆರೋಗ್ಯಪಾಲನೆಯಲ್ಲಿ ವಿಮಾ ದಾರಿಯಲ್ಲಿ ರೋಗಿಗಳಿಗಿಂತ ವಿಮಾಕಂಪನಿಗಳಿಗೇ ಹೆಚ್ಚು ಪ್ರಯೋಜನ. ಅದರಿಂದ ಖಾಸಗಿ ಆಸ್ಪತ್ರೆಗಳಿಗೂ ಹೆಚ್ಚು ಪ್ರಯೋಜನವಾಗುತ್ತದೆ. ನಿಜವಾಗಿಯೂ ಏನೇನೂ ಅಗತ್ಯವಿಲ್ಲದ ಹತ್ತಾರು ಪರೀಕ್ಷೆಗಳು ಮತ್ತು ಸಮಾಲೋಚನೆಗಳ ಮೂಲಕ ಅವುಗಳ ಆದಾಯ ವಿಸ್ತಾರಗೊಳ್ಳುತ್ತದೆ. ಆದ್ದರಿಂದ ಬಡಜನರಿಗೆ ಲಭ್ಯವಿರುವ ಆರೋಗ್ಯಪಾಲನೆಯನ್ನು ವ್ಯಾಪಕಗೊಳಿಸಲಾಗುತ್ತಿದೆ ಎಂಬ ಮೋದಿ ಸರಕಾರದ ದಾವೆ, ಅದು ಆರಿಸಿರುವ ವಿಮಾ ದಾರಿಯ ದೃಷ್ಟಿಯಿಂದಲೂ, ಮತ್ತು ಈ ದಾರಿಯಲ್ಲಿ ಅದಕ್ಕೆ ನೀಡಿರುವ ಅತ್ಯಲ್ಪ ಮೊತ್ತದ ದೃಷ್ಟಿಯಿಂದಲೂ ತಪ್ಪಾಗಿದೆ.

ಇದಲ್ಲದೆ ದೇಶದ ಬಹಳಷ್ಟು ಭಾಗಗಳಲ್ಲಿ ಆಸ್ಪತ್ರೆಗಳೇ ಇಲ್ಲ. ಆದ್ದರಿಂದ ಆಸ್ಪತ್ರೆ ಖರ್ಚುಗಳನ್ನು ಭರಿಸುವ ವಿಮೆ ನಿಷ್ಪ್ರಯೋಜಕ. ಬಹುಶಃ ಅದರಿಂದಾಗಿಯೇ ಸರಕಾರ ಒಂದೆಡೆ ಬಹು ದೊಡ್ಡ ಸಂಖ್ಯೆಯಲ್ಲಿ ಜನಗಳನ್ನು ಈ ಯೋಜನೆಯಲ್ಲಿ ಒಳಗೊಳ್ಳಲಾಗುತ್ತದೆ ಎನ್ನುತ್ತಲೇ ತಾನು ಹೆಚ್ಚೇನೂ ಖರ್ಚು ಮಾಡಬೇಕಿಲ್ಲ ಎಂದು ನಂಬಿದೆ. ಅಂದರೆ ತಾನು ಜಗತ್ತಿನ ಒಂದು ಅತಿ ದೊಡ್ಡ ಆರೋಗ್ಯಪಾಲನೆ ಯೋಜನೆಯನ್ನು ಆರಂಭಿಸುತ್ತಿದ್ದೇನೆ ಎಂಬ ಅದರ ಹೆಗ್ಗಳಿಕೆ ಸಂಪೂರ್ಣ ಟೊಳ್ಳಾಗಿದೆ.

ಕೇಂದ್ರ ಮತ್ತು ರಾಜ್ಯ ಸರಕಾರಗಳು ಒಟ್ಟಾಗಿ ಆರೋಗ್ಯಪಾಲನೆಗೆ ಮಾಡುವ ಖರ್ಚಿನ ಪ್ರಮಾಣ ಈಗ ಜಿಡಿಪಿಯ 1.15% ದಷ್ಟಿದೆ. ಅದನ್ನು 2025ರ ವೇಳೆಗೆ 2.5%ಕ್ಕೆ ಏರಿಸಲಾಗುವುದು ಎಂದು 2017ರಲ್ಲಿ ಅನಾವರಣಗೊಂಡ ರಾಷ್ಟ್ರೀಯ ಆರೋಗ್ಯ ಧೋರಣೆ ಹೇಳಿತ್ತು. ಕೇಂದ್ರ ಸರಕಾರ ಈ ಗುರಿಯನ್ನು ಗಂಭೀರವಾಗಿ ಪರಿಗಣಿಸಿದ್ದರೆ, ಕೇಂದ್ರದ ಬಜೆಟಿನಲ್ಲಿ ಆರೋಗ್ಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹಣ ಒದಗಿಸಬೇಕಾಗಿತ್ತು, ಅದರ ಬದಲು ಕೇಂದ್ರ ಸರಕಾರದ ಒಟ್ಟು ಬಜೆಟಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ನೀಡಿರುವ ಮೊತ್ತದ ಪ್ರಮಾಣ 2017–18ರ ಪರಿಷ್ಕೃತ ಬಜೆಟಿನಲ್ಲಿ 2.4% ಇದ್ದದ್ದು, 2018–19ರ ಬಜೆಟ್ ಅಂದಾಜಿನಲ್ಲಿ 2.1% ಕ್ಕೆ ಇಳಿದಿದೆ.

ವಂಚಿತ ವಿಭಾಗಗಳ ಬಗ್ಗೆ ಮುಂದುವರೆಯುತ್ತಿರುವ ಅಲಕ್ಷ್ಯ


2025ರಲ್ಲಿ ಆರೋಗ್ಯದ ಮೇಲೆ ಸರಕಾರ ಮಾಡಬೇಕಾದ ವೆಚ್ಚದ ಪ್ರಮಾಣ ಜಿಡಿಪಿಯ 2.5% ಇರಬೇಕು ಎಂಬ ಗುರಿಯೇ ಬಹಳ ಕಡಿಮೆ. ಅಕ್ಟೋಬರ್ 2010ರಲ್ಲಿ ಸಾರ್ವತ್ರಿಕ ಆರೋಗ್ಯಪಾಲನೆ ಕುರಿತ ಒಂದು ಉನ್ನತ ಮಟ್ಟದ ಪರಿಣತರ ಸಮಿತಿ ಯೋಜನಾ ಆಯೋಗಕ್ಕೆ ಸಲ್ಲಿಸಿದ ವರದಿಯ ಪ್ರಕಾರ 12ನೇ ಯೋಜನೆಯ ಅಂತ್ಯದ ವೇಳೆಗೇ(ಅಂದರೆ 2017ರಲ್ಲಿ) ಇದು 2.5% ಇರಬೇಕಾಗಿತ್ತು, 2022ರ ವೇಳೆಗೆ 3% ಕ್ಕೆ ಏರಬೇಕಾಗಿತ್ತು. ಆದರೆ 12ನೇ ಯೋಜನೆಯ ಅಂತ್ಯದ ವೇಳೆಗೂ(2017ರಲ್ಲಿ) ಅದು 2010 ಕ್ಕಿಂತ ಹೆಚ್ಚೇನೂ ಆಗಿಲ್ಲ, ಈಗ 2.5% ದ ಗುರಿಯನ್ನು 2017ರಿಂದ 2025ಕ್ಕೆ ತಳ್ಳಲಾಗಿದೆ ಎಂಬ ಸಂಗತಿಯೇ ದಿಲ್ಲಿಯಲ್ಲಿ ಬಂದ ಸರಕಾರಗಳು ಆರೋಗ್ಯಪಾಲನೆ ಒದಗಿಸುವ ಬಗ್ಗೆ ಎಷ್ಟು ಗಂಭೀರವಾಗಿದ್ದವು ಎಂಬುದರ ಬಗ್ಗೆ ಬಹಳಷ್ಟು ಹೇಳುತ್ತದೆ.

ಅಲ್ಲದೆ ಈಗಲೂ ಕೇಂದ್ರ ಸರಕಾರದ ಬಜೆಟಿನಲ್ಲಿ ಆರೋಗ್ಯಪಾಲನೆಗೆ ಒದಗಿಸುವ ಮೊತ್ತದ ಪ್ರಮಾಣ ಏರುವ ಲಕ್ಷಣಗಳೂ ಇಲ್ಲ, ಬದಲಾಗಿ 2018–19ರ ಬಜೆಟಿನಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ಇಳಿದಿದೆ ಎಂಬುದು ಸರಕಾರ ವಂಚಿತ ವಿಭಾಗಗಳ ಆರೋಗ್ಯದ ಪ್ರಶ್ನೆಯ ಬಗ್ಗೆ ಎಂತಹ ನಿರ್ಲಕ್ಷ್ಯ ಹೊಂದಿದೆ ಎಂಬುದನ್ನು ಎತ್ತಿ ತೋರುತ್ತದೆ.

ಪರಿಸ್ಥಿತಿ ಹೀಗಿರುವಾಗ, ಮೋದಿ ಸರಕಾರ ತಾನು ಜಗತ್ತಿನ ಅತ್ಯಂತ ದೊಡ್ಡ ಆರೋಗ್ಯ ಯೋಜನೆಯನ್ನು ಉದ್ಘಾಟಿಸಿದ್ದೇನೆ ಎಂದು ಹೇಳಿಕೊಳ್ಳುತ್ತಿರುವುದು ಒಂದು ಕ್ರೂರ ವ್ಯಂಗ್ಯವಷ್ಟೇ.

●

ಸಾರ್ವಜನಿಕ ಆರೋಗ್ಯ ಯೋಜನೆಯೋ–ಆರೋಗ್ಯ ವಿಮೆಯೋ? ಆರೋಗ್ಯಪಾಲನೆಗೆ ಅತಿ ಹೆಚ್ಚು ಖರ್ಚು ಮಾಡುವ ಅಮೆರಿಕಾದಲ್ಲಿ ಈ ಚರ್ಚೆಯ ಸಂದರ್ಭದಲ್ಲಿನ ಒಂದು ವ್ಯಂಗ್ಯಚಿತ್ರ





ಮೋದೀಕೇರ್–ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಭೀತಿಯ ಕಾರ್ಮೋಡಗಳನ್ನು ಚದುರಿಸಿದ ಬಿಪಿಎಂಒ 'ಅಧಿಕಾರ ಜಾತಾ'



ಬಂಗಾಲ ಸಾಮೂಹಿಕ ಸಂಘಟನೆಗಳ ವೇದಿಕೆ, ಬಿಪಿಎಂಒ ಸಂಘಟಿಸಿದ್ದ 23 ದಿನಗಳ 'ಅಧಿಕಾರ ಜಾತಾ' ಅಕ್ಟೋಬರ್ 1 ಮತ್ತು 2ರಂದು ಒಟ್ಟು ಮೂರು ಬೃಹತ್ ಸಾರ್ವಜನಿಕ ಸಭೆಗಳೊಂದಿಗೆ ಸಮಾರೋಪಗೊಂಡಿದೆ. ಈ 23 ದಿನಗಳಲ್ಲಿ 57000ಕ್ಕೂ ಹೆಚ್ಚು ಮತಗಟ್ಟೆಗಳನ್ನು ತಲುಪಿದ ಈ ಜಾಥಾ ಪಶ್ಚಿಮ ಬಂಗಾಲದಲ್ಲಿ ಟಿಎಂಸಿ ಮತ್ತು ಈಗ ಬಿಜೆಪಿ ಉಂಟು ಮಾಡಿರುವ ಭೀತಿಯನ್ನು ಮೀರಿ ನಿಲ್ಲುವ ಬುನಾದಿಯನ್ನು ಹಾಕಿದೆ ಎಂದು ವಿಶ್ಲೇಷಿಸಲಾಗಿದೆ.

ಮುಖ್ಯ ಜಾತಾಗಳು ಮತ್ತು ಅದನ್ನು ಸೇರಿಕೊಂಡ ಸ್ಥಳೀಯ ಜಾಥಾಗಳು ಜನಗಳು ದೈನಂದಿನ ರಾಜಕೀಯವನ್ನು ಮೀರಿ ನಿಂತು ತಮ್ಮ ಬದುಕಿನ ಬೇಡಿಕೆಗಳಿಗೆ ದನಿ ನೀಡಲು ಅವಕಾಶ ಮಾಡಿಕೊಟ್ಟವು.

ಸಪ್ಟಂಬರ್ 11 ರಂದು ಕೂಚ್‌ಬೆಹಾರ್‌ನಿಂದ ಆರಂಭವಾದ ಜಾಥಾ ರಾಜ್ಯದ ಉತ್ತರಭಾಗದ ಜಿಲ್ಲೆಗಳಲ್ಲಿ ಕೃಷಿ ಪ್ರದೇಶಗಳು, ಚಹಾತೋಟಗಳು, ಕೈಗಾರಿಕಾ ಪಟ್ಟಣಗಳು ಮತ್ತು ಮಧ್ಯಮವರ್ಗದ ಪ್ರದೇಶಗಳ ಮೂಲಕ ಹಾದು ಬಂದವು. ರೈತರು, ಕೃಷಿಕೂಲಿಕಾರರು, ಅಸಂಘಟಿತ ಕಾರ್ಮಿಕರು, ವಿದ್ಯಾರ್ಥಿಗಳು, ಯುವಜನರು ಮತ್ತು ಗಮನಾರ್ಹ ಪ್ರಮಾಣದಲ್ಲಿ ಮಹಿಳೆಯರು ಇದರಲ್ಲಿ ಭಾಗವಹಿಸಿದರು. ಮಾಲ್ಡಾ ದಲ್ಲಿ ಬಿಪಿಎಂಒ ರಾಜ್ಯ ಮುಖಂಡರು ಮತ್ತು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಸೂರ್ಯಕಾಂತ್



ಮಿಶ್ರ ಜಾತಾದಲ್ಲಿ ಭಾಗವಹಿಸಿದರು. ಬೃಹತ್ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ, ಹೆಚ್ಚುತ್ತಿರುವ ಜನಗಳ ಹೋರಾಟಗಳನ್ನು ವಿಫಲಗೊಳಿಸಲು ಕಾಶ್ಮೀರ ಮತ್ತು ಗಡಿ ಪ್ರದೇಶಗಳಲ್ಲಿ ಸಮಸ್ಯೆ ಸೃಷ್ಟಿಸಲು ಪ್ರಯತ್ನಿಸಲಾಗುತ್ತಿದೆ, ಕೋಮುಧ್ರುವೀಕರಣಕ್ಕೆ ಆರೆಸ್ಸೆಸ್–ಬಿಜೆಪಿ ರಥಯಾತ್ರೆ ಯೋಜಿಸುತ್ತಿವೆ ಎಂದು ಎಚ್ಚರಿಸಿದರು.

ಬೀರ್‌ಭೂಮ್‌ನಲ್ಲಿ ಜಿಲ್ಲೆಯ ನಾಲ್ಕು ಮೂಲೆಗಳಿಂದ ಹೊರಟ 'ಲಾಂಗ್ ಮಾರ್ಚ್' ಜಾತಾಗಳು ಅಕ್ಟೋಬರ್ 2ರಂದು ಸಿಲಿಗುರಿಯಲ್ಲಿ ಒಂದಾದವು. ಅವು ಮಾಫಿಯಾ ರಾಜ್ಯಭಾರವಿದ್ದ ಭೀತಿಗ್ರಸ್ತ ಪ್ರದೇಶಗಳ ಮೂಲಕ ಹಾದು ಬಂದವು. ಅಲ್ಲಿಯೂ ಕೊನೆಯಲ್ಲಿ ನಡೆದ ಬಹಿರಂಗ ರ್‍ಯಾಲಿಯನ್ನು ಉದ್ದೇಶಿಸಿ ಮಾತಾಡುತ್ತ ಸೂರ್ಯಕಾಂತ್ ಮಿಶ್ರ ರಾಜ್ಯದಲ್ಲಿ ಲೂಟಿಯ ರಾಜ್ಯಭಾರ ನಡೆದಿದೆ, ಪಂಚಾಯತುಗಳಲ್ಲಿ ಮತಗಳ ಲೂಟಿಯ ಉದ್ದೇಶ ರಾಜ್ಯದ ಸಂಪತ್ತಿನ ಲೂಟಿ ಎಂದರು.

ದಕ್ಷಿಣ ಮತ್ತು ಮಧ್ಯ ಬಂಗಾಲದ ಜಾತಾಗಳು ಅಕ್ಟೋಬರ್ 2ರಂದು ಕೊಲ್ಕತಾದಲ್ಲಿ ಒಂದುಗೂಡಿದವು. ಐತಿಹಾಸಿಕ ಶಹೀದ್ ಮೀನಾರ್‌ನಲ್ಲಿ ಒಂದು ಬೃಹತ್ ರ್‍ಯಾಲಿ ನಡೆಯಿತು. ಪ್ರತಿಷ್ಠಿತ ಕಾನೂನುವಿದರು, ಕವಿಗಳು, ನಾಟಕರಂಗದ ಕಲಾವಿದರು, ಚಿತ್ರ ನಿರ್ದೇಶಕರು ಮತ್ತು ಸಾಮೂಹಿಕ ಸಂಘಟನೆಗಳ ಮುಖಂಡರಿದ್ದ ಅಧ್ಯಕ್ಷ ಮಂಡಳಿ ಬಹಿರಂಗ ಸಭೆಯನ್ನು ನಡೆಸಿ ಕೊಟ್ಟಿತು. ಸೂರ್ಯಕಾಂತ್ ಮಿಶ್ರ ಈ ಸಭೆಯನ್ನುದ್ದೇಶಿಸಿ ಮಾತಾಡುತ್ತ ಹೋರಾಟದ ಮುಂದಿನ ಹಂತಕ್ಕೆ ಸಿದ್ಧರಾಗಬೇಕು ಎಂದು ಕರೆ ನೀಡಿದರು.

ವಾತಾವರಣ ಬದಲಾಗುತ್ತಿದೆ, ಜನಸಾಮಾನ್ಯರು, ವಿಶೇಷವಾಗಿ ಹಳ್ಳಿಗಳಲ್ಲಿ ಭಯದ ಅಂಶವನ್ನು ಮೀರಿ ನಿಲ್ಲುತ್ತಿದ್ದಾರೆ, ಇದು ರಾಜ್ಯದಲ್ಲಿ ಎಡ ಮತ್ತು ಪ್ರಗತಿಶೀಲ ಶಕ್ತಿಗಳಿಗೆ ಮತ್ತೆ ಹುರುಪು ತುಂಬುವ ಸಂಗತಿ ಎಂದು ಜಾತಾಗಳಲ್ಲಿ ಭಾಗವಹಿಸಿದ ಹಿರಿಯ ಕಾರ್ಯಕರ್ತರೆಲ್ಲರ ಅನಿಸಿಕೆ ಎಂದು ವರದಿಯಾಗಿದೆ.

ತ್ರಿಪುರಾದಲ್ಲಿ ಪತ್ರಿಕಾ ಸ್ವಾತಂತ್ರ್ಯದ ಮೇಲೆ ನಗ್ನ ದಾಳಿ

ಈ ರಾಜ್ಯದಲ್ಲಿ ಬಿಜೆಪಿ–ಐಪಿಎಫ್‌ಟಿ ಆಳ್ವಿಕೆ ಆರಂಭವಾದ ದಿನದಿಂದಲೇ ರಾಜ್ಯದ ಎರಡನೇ ಅತ್ಯಧಿಕ ಪ್ರಸಾರದ ಪ್ರಗತಿಶೀಲ ದೈನಿಕ 'ದೇಶೇರ್ ಕಥಾ" ಮೇಲೆ ದಾಳಿಗಳು ಆರಂಭವಾದವು. ಇದು ಅಕ್ಟೋಬರ್ 1 ರಂದು ಪತ್ರಿಕೆಯ ಪ್ರಕಟಣೆಯನ್ನೇ ನಿಲ್ಲಿಸುವ ಹಂತ ತಲುಪಿದೆ.

ಮಾರ್ಚ್ 4 ರಿಂದಲೇ ಈ ದೈನಿಕದ ಪ್ರತಿಗಳನ್ನು ಸಬ್‌ಡಿವಿಜನ್‌ಗಳಿಗೆ ಒಯ್ಯಲು ಅಡ್ಡಿಪಡಿಸುವ ಕ್ರಮಗಳು ಆರಂಭವಾದವು. ಪತ್ರಿಕೆಯ ಬಂಡಲ್‌ಗಳನ್ನು ಸುಟ್ಟು ಹಾಕುವುದು, ಅದನ್ನು ಮಾರುವವರು, ಏಜನ್ಸಿಗಳು ಮತ್ತು ಚಂದಾದಾರರ ಮೇಲೂ ದಾಳಿಗಳನ್ನು ನಡೆಸುವುದು, ಇತ್ಯಾದಿಗಳಿಂದಾಗಿ ಪತ್ರಿಕೆಯ ಪ್ರಸಾರದಲ್ಲಿ 45,000 ದಷ್ಟು ಇಳಿಕೆಯಾಯಿತು. ವರದಿಗಾರರ ಮೇಲೂ ಹಲ್ಲೆಗಳನ್ನು ನಡೆಸಲಾಯಿತು, ಸರಕಾರೀ ಜಾಹೀರಾತುಗಳನ್ನು ನಿಲ್ಲಿಸಲಾಯಿತು.

ದೂರುಗಳನ್ನು ದಾಖಲಿಸಿದ ನಂತರ ಜಾಹೀರಾತುಗಳು ಮತ್ತೆ ಸಿಗಲಾರಂಬಿಸಿದವು. ಪತ್ರಿಕೆ ಸರಕಾರದ ಕುಕೃತ್ಯಗಳನ್ನು ಬಯಲಿಗೆಳೆಯುವುದನ್ನು ಮುಂದುವರೆಸಿತು. ಪತ್ರಿಕಾ ಸ್ವಾತಂತ್ರ್ಯದ ಮೇಲಿನ ಈ ಎಲ್ಲ ದಾಳಿಗಳನ್ನು ಭಾರತದ ಪ್ರತಿಕಾ ಮಂಡಳಿಯ ಗಮನಕ್ಕೆ ತರಲಾಗಿದ್ದು, ಅದು ರಾಜ್ಯ ಸರಕಾರಕ್ಕೆ ಈಗಾಗಲೇ ನೋಟೀಸು ಕಳಿಸಿದೆ.

ಈ ಹಿನ್ನೆಲೆಯಲ್ಲಿ ಪತ್ರಿಕೆಯ ಪ್ರಕಟಣೆಯನ್ನೇ ನಿಲ್ಲಿಸುವ ಹುನ್ನಾರ ನಡೆದಿದೆ. ಅದಕ್ಕೆ ಕೆಲವು ತಾಂತ್ರಿಕ ಕಾರಣಗಳನ್ನು ಬಳಸಲಾಗಿದೆ. ಈ ಬಗ್ಗೆ ಪತ್ರಿಕಾ ಸಮ್ಮೇಳನವೊಂದರಲ್ಲಿ ಈ ಪತ್ರಿಕೆಯನ್ನು ಈಗ ನಡೆಸುತ್ತಿರುವ 'ಡೈಲಿ ದೇಶೇರ್ ಕಥಾ ಟ್ರಸ್ಟ್'ನ ಅಧ್ಯಕ್ಷ ಗೌತಮ್ ದೇಬ್ ಈ ಕೆಳಗಿನ ವಿವರಗಳನ್ನು ಕೊಟ್ಟಿದ್ದಾರೆ:

ಸಿಪಿಐ(ಎಂ) ತ್ರಿಪುರಾ ರಾಜ್ಯಸಮಿತಿ ಈ ದೈನಿಕವನ್ನು ಆಗಸ್ಟ್ 15, 1979ರ ಸ್ವಾತಂತ್ರ್ಯ ದಿನದಂದು ಆರಂಭಿಸಿತು. ಅದಕ್ಕೆ ಭಾರತದ ಪತ್ರಿಕಾ ನೋಂದಾವಣಿ (ಆರ್‌ಎನ್‌ಐ) ಕಚೇರಿಯ ನೋಂದಾವಣೆ ಆಗಿತ್ತು. 1984ರಲ್ಲಿ ಪ್ರಿಂಟಿಂಗ್ ಪ್ರೆಸ್ ವಿಳಾಸದಲ್ಲಿ ಬದಲಾವಣೆಯಾಯಿತು. ಅದನ್ನು ಆರ್‌ಎನ್‌ಐಗೆ ತಿಳಿಸಲಾಯಿತು. 1994ರಲ್ಲಿ ಒಂದು ಹೊಸ ಪ್ರೆಸ್‌ನಲ್ಲಿ ಇದರ ಮುದ್ರಣ ಆರಂಭವಾಯಿತು. ಇದನ್ನೂ ಆರ್‌ಎನ್‌ಐಗೆ ನಿಯಮಗಳ ಪ್ರಕಾರ ತಿಳಿಸಲಾಗಿತ್ತು.


দেশের কথা
ছাপ্পা ভোট, হামলার পঞ্চায়েত উপনির্বাচন

2012ರಲ್ಲಿ ಪಕ್ಷ ಈ ಪತ್ರಿಕೆಯ ಪ್ರಕಾಶನವನ್ನು 'ಡೈಲಿ ದೇಶೇರ್ ಕಥಾ ಸೊಸೈಟಿ'ಗೆ ವಹಿಸಿ ಕೊಟ್ಟಿತು. ಇದನ್ನೂ ಆರ್‌ಎನ್‌ಐಗೆ ತಿಳಿಸಲಾಗಿತ್ತು. ಆದರೆ ಅದು ತನ್ನ ವೆಬ್‌ಸೈಟಿನಲ್ಲಿ ಈ ಬದಲಾವಣೆಯನ್ನು ಮಾಡಿರಲಿಲ್ಲ. ಇದನ್ನು ಅವರ ಗಮನಕ್ಕೆ ತಂದಾಗ ಅವರು ಇನ್ನೂ ಕೆಲವು ದಾಖಲೆಗಳನ್ನು ಕೇಳಿದರು. ಅದನ್ನು ಜುಲೈ16ರಂದು ಸಲ್ಲಿಸಲಾಯಿತು.

ಸಪ್ಟಂಬರ್ 1ರಿಂದ ಈ ಪತ್ರಿಕೆಯನ್ನು 'ಡೈಲಿ ದೇಶೇರ್ ಕಥಾ ಟ್ರಸ್ಟ್' ಪ್ರಕಟಿಸುತ್ತಿದೆ. ಈ ಹಿಂದಿನ ಸೊಸೈಟಿ ಮಾಲಕತ್ವವನ್ನು ಪಕ್ಷಕ್ಕೆ ಹಿಂದಿರುಗಿಸಿತು, ಪಕ್ಷ ಅದನ್ನು ಈ ಟ್ರಸ್ಟ್‌ಗೆ ವಹಿಸಿತು. ಇವೆಲ್ಲದರಲ್ಲೂ ಕಾನೂನು ವಿಧಿ–ವಿಧಾನಗಳನ್ನು ಚಾಚೂ ತಪ್ಪದೆ ಅನುಸರಿಲಾಯಿತು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಆರ್‌ಎನ್‌ಐಗೆ ಸಲ್ಲಿಸಲಾಗಿತ್ತು.

ಈ ನಡುವೆ ಮೇ 26ರಂದು ಆರ್‌ಎನ್‌ಐ ನಲ್ಲಿ ಇರುವ ಪತ್ರಿಕೆಗಳ ವಿವರಗಳು ಪತ್ರಿಕೆಯಲ್ಲಿ ಮುದ್ರಿಸಲಾಗಿರುವ ವಿವರಗಳಿಗಿಂತ ಭಿನ್ನವಾಗಿದೆ ಎಂದು ತಮಗೆ ದೂರು ಬಂದಿದೆ ಎಂದು ಪಶ್ಚಿಮ ತ್ರಿಪುರಾ ಜಿಲ್ಲಾ ಮ್ಯಾಜಿಸ್ಟ್ರೇಟ್(ಡಿಎಂ) ತಿಳಿಸಿದರು. ಈ ಬಗ್ಗೆ ಸಪ್ಟಂಬರ್ 12ರಂದು ವಿಚಾರಣೆಗೆ ಕರೆದರು ಹಾಗೂ ಅಕ್ಟೋಬರ್ 1 ರ ವರೆಗೆ ಸಮಯ ಕೊಟ್ಟು ಆರ್‌ಎನ್‌ಐ ಪ್ರಮಾಣ ಪತ್ರ ಸಲ್ಲಿಸುವಂತೆ ಹೇಳಲಾಯಿತು. ಅದರಂತೆ ಎಲ್ಲ ದಾಖಲೆಗಳನ್ನು ಆರ್‌ಎನ್‌ಐಗೆ ಮತ್ತೆ ಸಲ್ಲಿಸಿದ ಮೇಲೆ ಅಕ್ಟೋಬರ್ 1ರಂದು ಆರ್‌ಎನ್‌ಐ ಪರಿಷ್ಕೃತ ಪ್ರಮಾಣ ಪತ್ರವನ್ನು ನೀಡಿತು.

ಅದನ್ನು ಅದೇ ದಿನ ಡಿಎಂ ಗೆ ಸಲ್ಲಿಸಲಾಯಿತು. 15 ನಿಮಿಷಗಳ ನಂತರ ಅವರು ಆದೇಶ ನೀಡುವುದಾಗಿ ತಿಳಿಸಲಾಯಿತು.

ಅಲ್ಲಿಗೆ ಈ ಪ್ರಕರಣ ಮುಗಿಯಬೇಕಾಗಿತ್ತು. ಆದರೆ ಆಗ ಹೊಸದೊಂದು ನಾಟಕವನ್ನು ಆರಂಭಿಸಲಾಯಿತು. ತ್ರಿಪುರಾ ಸದರ್‌ನ ಎಸ್‌ಡಿಎಂರನ್ನು ಕರೆಸಿ ಈ ಟ್ರಸ್ಟ್‌ನ ಡೀಡ್‌ಗೆ ಪ್ರಮಾಣ ಪತ್ರವನ್ನು ನೀಡಿದ ಬಗ್ಗೆ ಅವರನ್ನು ತರಾಟೆಗೆ ತೆಗೆದುಕೊಂಡರು. ಅದನ್ನು ರದ್ದು ಮಾಡುವಂತೆ ಆತನ ಮೇಲೆ ಒತ್ತಡ ಹಾಕಲಾಯಿತು. ಆರ್‌ಎನ್‌ಐ ಹೇಗೆ ಪರಿಷ್ಕೃತ ಪ್ರಮಾಣ ಪತ್ರವನ್ನು ನೀಡಿತು ಎನ್ನುವ ವರೆಗೂ ವರೆಗೂ ಪಶ್ಚಿಮ ತ್ರಿಪುರಾ ಡಿಎಂ ಹೋದರು.

ಅಕ್ಟೋಬರ್ 1 ರ ರಾತ್ರಿ 10 ಗಂಟೆಯ ವೇಳೆಗೆ ಆರ್‌ಎನ್‌ಐ ತಾನೇ ಆ ದಿನ ಬೆಳಿಗ್ಯೆ ನೀಡಿದ ಪ್ರಮಾಣ ಪತ್ರವನ್ನು ಹಿಂತೆಗೆದುಕೊಂಡಿರುವುದಾಗಿ ತಿಳಿಸಿತು. ರಾತ್ರಿ 11.35ಕ್ಕೆ ಪಶ್ಚಿಮ ತ್ರಿಪುರಾ ಡಿಎಂ ಪತ್ರಿಕೆಯ ಪ್ರಕಟಣೆಯನ್ನು ನಿಲ್ಲಿಸುವಂತೆ ಆದೇಶ ಹೊರಡಿಸಿದರು.

15 ನಿಮಿಷದಲ್ಲಿ ಆದೇಶ ನೀಡುವುದಾಗಿ ಹೇಳಿದ್ದ ಡಿಎಂ ಈ ಹೊಸ ಆದೇಶ ನೀಡಲು ಐದೂವರೆ ಗಂಟೆ ತೆಗೆದುಕೊಂಡರು. ಈ ನಡುವೆ ರಾಜ್ಯ ಬಿಜೆಪಿ ಮುಖಂಡರುಗಳು ಅವರನ್ನು ಮತ್ತು ಎಸ್‌ಪಿಯವರನ್ನು ಭೇಟಿ ಮಾಡಿ ದೀರ್ಘ ಸಭೆ ನಡೆಸಿದರು, ಇದರ ನಂತರ ಡಿಎಂ ತನ್ನ ಆದೇಶ ನೀಡಿದರು ಎಂದು ಗೌತಮ್ ದೇಬ್ ಹೇಳಿದ್ದಾರೆ.

ಸ್ವಾತಂತ್ರ್ಯ ದಿನದಂದು ಆರಂಭವಾಗಿ ಸುಮಾರು ನಾಲ್ಕು ದಶಕಗಳ ಕಾಲ ಸತತವಾಗಿ ಪ್ರಕಟವಾಗುತ್ತಿದ್ದ ಒಂದು ಜನಪ್ರಿಯ ಪತ್ರಿಕೆಯನ್ನು ಬಿಜೆಪಿ ನೇತೃತ್ವದ ರಾಜ್ಯ ಸರಕಾರ ಪಶ್ಚಿಮ ತ್ರಿಪುರಾ ಡಿಎಂ ಮತ್ತು ಕಲೆಕ್ಟರ್ ಆದೇಶದ ಮೂಲಕ ಗಾಂಧಿ ಜಯಂತಿ ದಿನದಂದು ಬಲವಂತವಾಗಿ ನಿಲ್ಲಿಸಿದೆ. ಇದು ಭಾರತದ ಸ್ವಾತಂತ್ರ್ಯೋತ್ತರ ಪತ್ರಿಕಾರಂಗದ ಇತಿಹಾಸದಲ್ಲಿ ಒಂದು ಕರಾಳ ದಿನವಾಗಿ ದಾಖಲಾಗುತ್ತದೆ ಎಂದು ಗೌತಮ್ ದೇಬ್ ಹೇಳಿದ್ದಾರೆ.

ಈಗಾಗಲೇ ವರದಿಯಾಗಿರುವಂತೆ ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ ಇದನ್ನು ಖಂಡಿಸಿದೆ. ಇದು ಕೇವಲ ಸಂಪಾದಕರು, ಮುದ್ರಕರು ಮತ್ತು ಪ್ರಕಾಶಕರ ವಿವರಗಳು ತಾಳೆಯಾಗುವುದಿಲ್ಲ ಎಂಬುದಕ್ಕೆ ಮಿತಿ ಮೀರಿದ ಪ್ರತಿಕ್ರಿಯೆಯಷ್ಟೇ ಅಲ್ಲ, ಪತ್ರಿಕಾಸ್ವಾತಂತ್ರ್ಯದ ಕತ್ತು ಹಿಸುಕುವ ಒಂದು ಕರಾಳ ಕ್ರಮ ಎಂದು ದೇಶದ ಪ್ರಖ್ಯಾತ ಪತ್ರಕರ್ತರೂ ಆಗಿರುವ ಈ ಗಿಲ್ಡ್‌ನ ಅಧ್ಯಕ್ಷ ಶೇಖರ್ ಗುಪ್ತ ಮತ್ತು ಪ್ರಧಾನ ಕಾರ್ಯದರ್ಶಿ ಎ.ಕೆ.ಭಟ್ಟಾಚಾರ್ಯ ಸಹಿ ಹಾಕಿರುವ ಹೇಳಿಕೆ ಖಂಡಿಸಿದೆ. ಸರಿಯಾದ ಮಾಹಿತಿ ಕೊಟ್ಟಿಲ್ಲ ಎಂಬುದರ ಬಗ್ಗೆ ಆಮೂಲಾಗ್ರ ತನಿಖೆ ನಡೆಸಬೇಕು, ಈ ನಡುವೆ ತಕ್ಷಣವೇ ನೋಂದಾವಣೆ ರದ್ದು ಮಾಡುವ ಆದೇಶವನ್ನು ಹಿಂತೆಗೆದುಕೊಳ್ಳಬೇಕು ಎಂದು ಇವರು ಆಗ್ರಹಿಸಿದ್ದಾರೆ.

ಇತರ ಹಲವು ಪತ್ರಕರ್ತರ ಸಂಘಟನೆಗಳೂ ಈ ಕ್ರಮವನ್ನು ಖಂಡಿಸಿವೆ.

'ಪೀಪಲ್ಸ್ ಡೆಮಾಕ್ರಸಿ' ಕರೆ

"ದೇಶೇರ್ ಕಥಾ" ಮತ್ತು ಸಿಪಿಐ(ಎಂ) ಈ ಪ್ರಜಾಪ್ರಭುತ್ವ–ವಿರೋಧಿ ದಾಳಿಗೆ ತಲೆಬಾಗುವುದಿಲ್ಲ. ಒಂದು ಪತ್ರಿಕೆಯನ್ನು ಪ್ರಕಟಿಸುವುದು ಮತ್ತು ಜನಗಳಿಗೆ ಸುದ್ದಿ ಮತ್ತು ಅಭಿಪ್ರಾಯಗಳನ್ನು ತಿಳಿಸುವುದು ಸಂವಿಧಾನ ಆಶ್ವಾಸನೆ ಕೊಟ್ಟಿರುವ ಒಂದು ಮೂಲಭೂತ ಹಕ್ಕು. ಈ ಹೊಲಸು ನಿಷೇಧವನ್ನು ಕಿತ್ತೆಸೆಯಲು ಸಿಪಿಐ(ಎಂ) ಕಾನೂನಾತ್ಮಕವಾಗಿಯೂ, ರಾಜಕೀಯವಾಗಿಯೂ ಹೋರಾಡುತ್ತದೆ" ಎಂದು ಸಿಪಿಐ(ಎಂ)ನ ಕೇಂದ್ರ ಸಮಿತಿಯು ಪತ್ರಿಕೆಯಾದ 'ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯ ಹೇಳಿದೆ.

ದೇಶೇರ್ ಕಥಾದ ಮೇಲೆ ದಾಳಿ ಈ ಬಿಜೆಪಿ ಆಳ್ವಿಕೆಯಲ್ಲಿ ಯಾವ ಹಕ್ಕೂ ಸುರಕ್ಷಿತವಾಗಿಲ್ಲ ಎಂಬುದರ ಒಂದು ಎಚ್ಚರಿಕೆ, ಪ್ರಜಾಪ್ರಭುತ್ವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಕಾಳಜಿ ಇರುವ ಎಲ್ಲರೂ ಪತ್ರಿಕಾ ಸ್ವಾತಂತ್ರ್ಯಕ್ಕೆ ಒಡ್ಡಿರುವ ಈ ಅಪಾಯದ ವಿರುದ್ಧ ದನಿಯೆತ್ತಬೇಕು ಎಂದು ಅದು ಹೇಳಿದೆ.

ಪೋರ್ಚುಗಲ್ ಕಮ್ಯುನಿಸ್ಟ್ ಪಕ್ಷದ ಜತೆ ದ್ವಿಪಕ್ಷೀಯ ಚರ್ಚೆ

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ನೇತೃತ್ವದಲ್ಲಿ, ಬ್ರಿಟನ್ ನಲ್ಲಿರುವ ಭಾರತೀಯ ಕಮ್ಯೂನಿಸ್ಟರ ಒಕ್ಕೂಟದ ಕಾರ್ಯದರ್ಶಿ ಹರಸೇವ ಬೇನ್ಸ್ ರನ್ನು ಒಳಗೊಂಡಿದ್ದ ನಿಯೋಗವೊಂದು, ಮೂರು ದಿನಗಳ (ಸೆಪ್ಟೆಂಬರ್ 18–20) ಕಾಲ ಪೋರ್ಚುಗಲ್ ಗೆ ದ್ವಿಪಕ್ಷೀಯ ಮಾತುಕತೆ ನಡೆಸಲು, ಪೋರ್ಚುಗೀಸ್ ಕಮ್ಯೂನಿಸ್ಟ್ ಪಕ್ಷ (ಪಿಸಿಪಿ) ಆಹ್ವಾನದ ಮೇರೆಗೆ ಭೇಟಿ ಕೊಟ್ಟಿತ್ತು.

ಚರ್ಚೆಯಲ್ಲಿ ಪಿಸಿಪಿಯ ಪ್ರಧಾನ ಕಾರ್ಯದರ್ಶಿ ಜೆರೋನಿಮೊ ಡಿಸೌಸ ಮತ್ತು ಪೊಲಿಟ್ ಬ್ಯೂರೊ ಸದಸ್ಯರುಗಳಾದ ಪೆಡ್ರ ಗುರೆರೆರೋ ಮತ್ತು ಏಂಜೆಲೊ ಅಲ್ವೆಸ್ ರನ್ನು ಒಳಗೊಂಡಿದ್ದ ಪಿಸಿಪಿ ನಿಯೋಗ ಚರ್ಚೆಯಲ್ಲಿ ಭಾಗವಹಿಸಿತು. 1993 ರಲ್ಲಿ ಕೊಲ್ಕತ್ತಾ ದಲ್ಲಿ ನಡೆದಿದ್ದ ಕಮ್ಯೂನಿಸ್ಟ್ ಪಕ್ಷಗಳ ಅಂತರಾಷ್ಟ್ರೀಯ ಸಭೆಯ ನಂತರ ಈ ಎರಡು ದೇಶಗಳ ನಡುವೆ ನಡೆಯುತ್ತಿರುವ ಮಹತ್ವಪೂರ್ಣ ಭೇಟಿ ಇದಾಗಿತ್ತು. ಎರಡು ನಿಯೋಗಗಳು ಸುದೀರ್ಘವಾಗಿ ಹಲವು ಪ್ರಮುಖ ಅಂತರಾಷ್ಟ್ರೀಯ ವಿಚಾರಗಳ ಕುರಿತಂತೆ ಆಳವಾದ ಚರ್ಚೆಗಳನ್ನು ನಡೆಸಿದ್ದಾರೆ. ಸಿಪಿಐ(ಎಂ) ನಿಯೋಗವು ಪಿಸಿಪಿಯ ಅಂತರಾಷ್ಟ್ರೀಯ ಇಲಾಖೆಯೊಂದಿಗೆ ಪ್ರತ್ಯೇಕ ಚರ್ಚೆಯನ್ನು ನಡೆಸಿತು.

ಅಂತರಾಷ್ಟ್ರೀಯ ವಿದ್ಯಮಾನಗಳ ಬಗ್ಗೆ ಚರ್ಚೆ

ಆರ್ಥಿಕ ಬಿಕ್ಕಟ್ಟಿನ ದುಷ್ಪರಿಣಾಮಗಳ ವಿರುದ್ಧ ಎದ್ದ ಜನರ ಪ್ರತಿರೋಧ ಒಂದು ಕಡೆಯಾದರೆ, ಮತ್ತೊಂದೆಡೆ ಉಗ್ರ ಬಲಪಂಥೀಯ ರಾಜಕೀಯ ತಿರುವು ಇದರ ಫಲವಾಗಿ, ಡೊನಾಲ್ಡ್ ಟ್ರಂಪ್ ಮತ್ತು ಲೇ ಪೆನ್ ಇನ್ನಿತರರು ಮುನ್ನೆಲೆಗೆ ಬಂದ ಬಗ್ಗೆ ಚರ್ಚಿಸಲಾಯಿತು. ಇಂತಹ ಪರಿಸ್ಥಿತಿಗೆ ಪ್ರತಿರೋಧವಾಗಿ ಎಡಪಂಥೀಯ ಸಂಘಟನೆಗಳ ರಾಜಕೀಯ ಬೆಳವಣಿಗೆಯ ಬಗ್ಗೆಯೂ ಚರ್ಚೆ ಸುದೀರ್ಘವಾಗಿ ನಡೆಯಿತು. ದ್ವಿಪಕ್ಷೀಯ ಚರ್ಚೆಯಲ್ಲಿ ಪ್ರಮುಖವಾಗಿ – ಸಾಮ್ರಾಜ್ಯಶಾಹಿ ಶಿಬಿರದೊಳಗೆ ಬೆಳೆಯುತ್ತಿರುವ ವೈರುಧ್ಯಗಳು; ನೆರೆ ಹೊರೆಯೊಂದಿಗೆ ಭಾರತದ ದುರ್ಬಲ ಸಂಬಂಧಗಳು; ಭಾರತದ ವಿದೇಶಾಂಗ ನೀತಿಯಲ್ಲಿ ತಿರುವು ಅಲಿಪ್ತ ನೀತಿಯಿಂದ ಇದೀಗ ಅಮೆರಿಕದ ವ್ಯೂಹಾತ್ಮಕ ಜೂನಿಯರ್ ಪಾಲುದಾರನಾಗಿ ಭಾರತದ ಪರಿವರ್ತನೆ – ಇವೆಲ್ಲಾ ವಿಚಾರಗಳು ಒಳಗೊಂಡಿದ್ದವು. ಜೊತೆಗೆ, ಯುರೋಪಿಯನ್ ಕೂಟದ ಬದಲಾದ ಯೋಜನೆಗಳು; ಪ್ರಮುಖವಾಗಿ ಕೂಟದ ರಾಜಕೀಯ, ಆರ್ಥಿಕ ಹಾಗೂ ಮಿಲಿಟರೀಕರಣದ ಆಕಾಂಕ್ಷೆಗಳು; 2019 ರೊಳಗೆ ಯುರೋಪಿಯನ್ ಒಕ್ಕೂಟದಿಂದ ಬ್ರಿಟನ್ ನಿರ್ಗಮನ (ಬ್ರೆಕ್ಸಿಟ್); ಐರ್ಲೆಂಡ್ ಗಡಿಯಲ್ಲಿ ಇದರ ಪರಿಣಾಮ; ಸಿರಿಯಾದ ವಿರುದ್ಧ ಅಮೆರಿಕಾದ ಆಕ್ರಮಣಶೀಲತೆ; ಲ್ಯಾಟಿನ್ ಅಮೆರಿಕ ದೇಶಗಳಲ್ಲಿನ ಬೆಳವಣಿಗೆಗಳು; ಬ್ರೆಜಿಲ್, ಕ್ಯೂಬಾ ಮತ್ತು ವೆನೆಜುವೆಲಾ ಗಳ ಅಂತರ್‍ರಾಷ್ಟ್ರೀಯ ಚಳುವಳಿಗಳು; ಹಾಗೆಯೇ, ಚೀನಾ, ರಷ್ಯಾ ಮತ್ತು ಉತ್ತರ ಕೊರಿಯಾ ಗಳತ್ತ ಅಮೆರಿಕದ ಆಕ್ರಮಣಕಾರಿ ನೀತಿಗಳು; ಹೀಗೆ, ಹತ್ತು ಹಲವಾರು ಪ್ರಮುಖ ವಿಷಯಗಳನ್ನು ಚರ್ಚೆ ಒಳಗೊಂಡಿತ್ತು. ಬಲಪಂಥೀಯ ತಿರುವು ತೆಗೆದುಕೊಳ್ಳುತ್ತಿರುವ ರಾಜಕೀಯ, ಸಾಮ್ರಾಜ್ಯಶಾಹಿ ಹಾಗೂ ನವ ಉದಾರವಾದ ನೀತಿಗಳ ವಿರುದ್ಧ ಜಾಗತಿಕ ಮಟ್ಟದಲ್ಲಿ ನಾವೆಲ್ಲಾ ಮತ್ತಷ್ಟು ಒಗ್ಗಟ್ಟಿನಿಂದ ಹೋರಾಟ ಬೇಕೆಂಬುದು ಯೆಚೂರಿ ಒತ್ತುಕೊಟ್ಟು ಹೇಳಿದರು.

ಪಿಸಿಪಿಯ ಅಭಿಪ್ರಾಯಗಳನ್ನು ಸಭೆಯಲ್ಲಿ ಪೆಡ್ರೊ ರವರು ಹಂಚಿಕೊಳ್ಳುತ್ತಾ, ಸಾಮ್ರಾಜ್ಯಶಾಹಿಗಳ ನಡುವಿನ ಸಂಬಂಧಗಳಲ್ಲಿ ತಿಕ್ಕಾಟ ಹಾಗೂ ಕೂಡುನಡೆ ಎರಡನ್ನೂ ಕಾಣಬಹುದಾಗಿದೆ. ಜಾಗತಿಕವಾಗಿ ಅಮೆರಿಕದ ಯಜಮಾನಿಕೆಯ ಪ್ರಭಾವ ಕುಸಿಯುತ್ತಿದ್ದರೂ ಅದು ಇನ್ನೂ ಅತಿ ದೊಡ್ಡ ಮಿಲಿಟರಿ ಪವರ್. ಈ ಹಿನ್ನೆಲೆಯಲ್ಲಿ ಹೊಸ ಮಾದರಿಯ ಆಕ್ರಮಣವನ್ನು ಆರಂಭಿಸಿದೆ. ಟ್ರಂಪ್ ರ ನೇತೃತ್ವದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿ, ಸಾರ್ವಭೌಮತ್ವ ಎತ್ತಿ ಹಿಡಿಯುವ ದೇಶಗಳೊಂದಿಗೆ ಘರ್ಷಣೆ, ಆರ್ಥಿಕ ದಿಗ್ಬಂದನ ಹೇರಿ ಆ ದೇಶಗಳ ಆರ್ಥಿಕ ತೆಯನ್ನು ಅಸ್ಥಿರಗೊಳಿಸುವುದು, ವಿಶ್ವಸಂಸ್ಥೆಯ ಎಲ್ಲಾ ನಿರ್ಣಯಗಳನ್ನು ಹಾಗೂ ಅಂತರಾಷ್ಟ್ರೀಯ ನಿಬಂಧನೆಗಳನ್ನು ಸಹಾ ಸಾರಾಸಗಟಾಗಿ ಉಲಂಘನೆ ಮಾಡುವುದು – ಹೀಗೆ ತನ್ನ ಆಕ್ರಮಣವನ್ನು ಮುಂದುವರಿಸುತ್ತಿದೆ. ಈ ಹಿನ್ನೆಲೆಯಲ್ಲಿ, ಅಂತರಾಷ್ಟ್ರೀಯವಾಗಿ ಅದಕ್ಕೆ ಪ್ರತಿರೋಧ ಒಡ್ಡುವ ಶಕ್ತಿಗಳನ್ನು ಒಂದಾಗಿಸುವ ಮೂಲಕ ಈ ಸವಾಲನ್ನು ಎದುರಿಸಬೇಕಾಗಿದೆ ಎಂಬುದನ್ನು ಪಿಸಿಪಿ ಒಪ್ಪುತ್ತದೆ ಎಂದರು.

ಸಾಮ್ರಾಜ್ಯಶಾಹಿ ಅಮೆರಿಕಾವು ಘರ್ಷಣೆಗಳನ್ನು ಹುಟ್ಟು ಹಾಕುವ ಮೂಲಕ, ಯುದ್ಧವನ್ನು ನಡೆಸಲು ತಯಾರಿ ನಡೆಸುತ್ತಿದ್ದು, ಪರಮಾಣು ಬೆದರಿಕೆಯನ್ನು ಹೆಚ್ಚಿಸುತ್ತಿದೆ. ಕ್ಯೂಬಾ, ವೆನೆಜುವೆಲಾ, ಉತ್ತರ ಕೊರಿಯಾ, ಇರಾನ್, ಸಿರಿಯಾ, ಮತ್ತು ಬ್ರೆಜಿಲ್ ದೇಶಗಳ ಆರ್ಥಿಕತೆಯನ್ನು ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿದೆ. ಇದರ ವಿರುದ್ಧ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರತಿರೋಧ ನಿರ್ಮಿಸಬೇಕಾದ ತುರ್ತು ಅಗತ್ಯವಿದೆ ಎಂದು ಉಭಯ ನಿಯೋಗಗಳು ಅಭಿಪ್ರಾಯಕ್ಕೆ ಬಂದವು.

ಯುರೋಪಿಯನ್ ಪಾರ್ಲಿಮೆಂಟಿನಲ್ಲಿ ಪಿಸಿಪಿ 3 ಸದಸ್ಯರನ್ನುಹೊಂದಿದೆ.ಯುರೋಪಿಯನ್ ಕೂಟದಲ್ಲಿ ಅಧಿಕಾರದ ವಿಪರೀತ ಕೇಂದ್ರೀಕರಣವಾಗಿದ್ದು, ಬಲಪಂಥೀಯ ಪ್ರತಿಗಾಮಿ ಶಕ್ತಿಗಳ ಬೆಳವಣಿಗೆಯನ್ನು ಬಳಸಿಕೊಂಡು ಯುರೋಪಿಯನ್ ಪಾರ್ಲಿಮೆಂಟಿನ ಮೂಲಕ ಪ್ರತಿಗಾಮಿ ನೀತಿಗಳನ್ನು ಯುರೋಪಿನ ಜನತೆಯ ಮೇಲೆ ಹೊರಿಸಲಾಗುತ್ತಿದೆ, ಎಂದು ಪಿಸಿಪಿ ತಿಳಿಸಿದೆ.

ಈ ಸಂದರ್ಭದಲ್ಲಿ ಪಿಸಿಪಿಯ ವಾರಪತ್ರಿಕೆ 'ಅವಂತೆ' ಕಾಮ್ರೇಡ್ ಸೀತಾರಾಮ್ ಯೆಚೂರಿ ಯವರ ದೀರ್ಘ ಸಂದರ್ಶನ ನಡೆಸಿದ್ದು ವಿಶೇಷವಾಗಿತ್ತು.

ಜೆರೊನಿಮೊ ಡಿ.ಸೌಸ ಜತೆ ನಿಯೋಗ ಚರ್ಚೆ

ದ್ವಿಪಕ್ಷೀಯ ಚರ್ಚೆಯ ಎರಡನೇ ದಿನವನ್ನು ಪ್ರಧಾನ ಕಾರ್ಯದರ್ಶಿ ಜೆರೊನಿಮೊ ಡಿ ಸೌಸ ಅವರೊಂದಿಗಿನ ಚರ್ಚೆಗಾಗಿಯೇ ಮೀಸಲಿಡಲಾಗಿತ್ತು. ಜೆರೊನಿಮೊ ರವರು ಈ ಹಿಂದೆ ಟ್ರೇಡ್ ಯೂನಿಯನ್ ನಾಯಕರಾಗಿದ್ದವರು. 40 ವರುಷಗಳ ಕಾಲ ಸಂಸತ್ತಿನಲ್ಲಿ ಸೇವೆ ಸಲ್ಲಿಸಿದ ಅನುಭವ ಹೊಂದಿದವರು. ಇವರು ನಿಯೋಗವನ್ನು ಹೃತ್ಪೂರ್ವಕ ವಾಗಿ ಸ್ವಾಗತಿಸುತ್ತಾ, ಸಿಪಿಐ(ಎಂ) ಮತ್ತು ಪಿಸಿಪಿಯ ನಡುವಿನ ಹಳೆಯ ಬಾಂಧವ್ಯವನ್ನು ನೆನಪಿಸಿಕೊಂಡರು. ಸಿಪಿಐ(ಎಂ)ನ ಹಿಂದಿನ ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಮತ್ತು ಅವರ ಸಮಕಾಲೀನ ಪಿಸಿಪಿಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಅಲ್ವಾರೊ ಕುನ್ಹಾಲ್ – ಈ ಇಬ್ಬರು ನಾಯಕರುಗಳು ಉಭಯ ಪಕ್ಷಗಳ ನಡುವೆ ಅಭಿವೃದ್ಧಿ ಪಡಿಸಿದ ಸಹಕಾರ ಮತ್ತು ತಿಳುವಳಿಕೆಯನ್ನು ಹೆಮ್ಮೆಯಿಂದ ನೆನಪಿಸಿಕೊಂಡರು. ಸೋವಿಯತ್ ಒಕ್ಕೂಟದ ಪತನದ ನಂತರ ಉಭಯ ಪಕ್ಷಗಳನ್ನು ಒಟ್ಟಿಗೆ ಸೇರಿಸುವಲ್ಲಿ ಮತ್ತು ಅಂತರಾಷ್ಟ್ರೀಯ ಕಮ್ಯೂನಿಸ್ಟ್ ಚಳವಳಿಯ ಸೌಹಾರ್ದತೆಯನ್ನು ಮರು ರೂಪಿಸುವಲ್ಲಿ ಈ ಶ್ರೇಷ್ಠ ಮೇಧಾವಿಗಳ ಪಾತ್ರವನ್ನು ಜೆರೊನಿಮೊ ಸಭೆಯಲ್ಲಿ ಗುರುತಿಸಿದ್ದು ವಿಶೇಷವಾಗಿತ್ತು. ಈ ಹಿನ್ನೆಲೆಯಲ್ಲಿ ನಮ್ಮ ಭೇಟಿಯು ನಮ್ಮ ಆ ಗ್ರಹಿಕೆಯನ್ನು ಗಾಢವಾಗಿಸುವ ಹಾಗೂ ನಮ್ಮ ಪಕ್ಷಗಳ ಸಂಬಂಧವನ್ನು ಮತ್ತಷ್ಟು ಬಲಪಡಿಸಲು ಒಂದು ವಿಶಿಷ್ಟವಾದ ಅವಕಾಶ ಎಂದರು

ಪೋರ್ಚುಗಲ್ ಬೆಳವಣಿಗೆಗಳು

ಪೋರ್ಚುಗಲ್ ನಲ್ಲಿ 2015 ರಲ್ಲಿ ನಡೆದ ಚುನಾವಣಾ ನಂತರದ ಬೆಳವಣಿಗೆಯಲ್ಲಿ ಪಿಸಿಪಿಯ ನಿರ್ಣಾಯಕ ಪಾತ್ರದ ಬಗ್ಗೆ ಜೆರೊನಿಮೊ ರವರು ನಿಯೋಗಕ್ಕೆ ಸುದೀರ್ಘವಾಗಿ ವಿವರಿಸಿದರು. ಪ್ರಮಾಣಾತ್ಮಕ ಪ್ರಾತಿನಿಧ್ಯ ವನ್ನು ಆಧರಿಸಿ ಫಲಿತಾಂಶಗಳನ್ನುಪ್ರಕಟಿಸಲಾಯಿತು. ಅಧಿಕಾರದಲ್ಲಿದ್ದ ಸೋಷಿಯಲ್ ಡೆಮಾಕ್ರಟಿಕ್ ಪಕ್ಷ (ಪಿ.ಎಸ್.ಡಿ /ಸಿ.ಡಿ.ಎಸ್) ಒಕ್ಕೂಟದ ಆಡಳಿತವನ್ನು ಕಿತ್ತು ಹಾಕಲು ಪೋರ್ಚುಗಲ್ ಜನರು ಮತ ಹಾಕಿದ್ದರು. ಏಕೆಂದರೆ, ಹಿಂದಿನ ನಾಲ್ಕು ವರ್ಷಗಳ ಕಾಲ ಪ್ರಮುಖವಾಗಿ ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸಿ ನಾಶದತ್ತ ಕೊಂಡೊಯ್ಯಲಾಗಿತ್ತು. ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳ ಅಂತ್ಯವಾಗಿತ್ತು. ಐಎಂಎಫ್, ಯುರೋಪಿಯನ್ ಒಕ್ಕೂಟದ ಕಮಿಷನ್ ಹಾಗೂ ವಿಶ್ವ ಬ್ಯಾಂಕ್ ಗಳ ನಿರ್ದೇಶನದಂತೆ, ಸಾರ್ವಜನಿಕ ವಲಯಗಳನ್ನು ಖಾಸಗೀಕರಣ ಗೊಳಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಪಿಸಿಪಿಯ ನೇತೃತ್ವದ ಕಾರ್ಮಿಕರ ದೀರ್ಘ ಮತ್ತು ನಿರಂತರ ಹೋರಾಟದ ಪರಿಣಾಮವಾಗಿ ಸರಕಾರ ಸಂಸತ್ತಿನಲ್ಲಿ ಬಹುಮತವನ್ನು ಕಳೆದುಕೊಂಡಿತು.

ಚುನಾವಣೆಯ ನಂತರ ಪಿಸಿಪಿ ಯು ಸಂಸತ್ತಿನಲ್ಲಿ ಹೊಸ ಮೈತ್ರಿಕೂಟದ ಸಂಬಂಧಗಳ ಬಲಾ ಬಲವನ್ನು ವಿಶ್ಲೇಷಣೆ ಮಾಡಿತು. ಸಮಾಜವಾದಿ ಪಕ್ಷ ದೊಂದಿಗೆ, ಎಡ ಪಕ್ಷಗಳು ಹಾಗೂ ಹೊರಗಿನಿಂದ ಪಿಸಿಪಿ ಬೆಂಬಲದೊಂದಿಗೆ ಅಲ್ಪಸಂಖ್ಯಾತ ಸಮಾಜವಾದಿ ಸರ್ಕಾರ ರಚನೆಯಾಯಿತು. ಈ ಸರ್ಕಾರದ ಮೂಲಕ ಪಿಸಿಪಿ ಯು ಜನರಿಗೆ ತನ್ನ ಬದ್ಧತೆ ಯನ್ನು ನೀಡುವಲ್ಲಿ ಯಶಸ್ವಿಯಾಯಿತು ಎಂದು ಜೆರೊನಿಮೊ ಹೇಳಿದರು. ಅದೇ ಸಮಯದಲ್ಲಿ ದೇಶಪ್ರೇಮಿ ಎಡ ಬದಲಿ ಕೊಡುವ ರಾಜಕೀಯ ರಂಗ ಕಟ್ಟುವುದುಕ್ಕೆ ಪಿಸಿಪಿ ಬದ್ಧವಾಗಿದೆ ಎಂದರು.

ಈ ನಿಟ್ಟಿನಲ್ಲಿ ಪಿಸಿಪಿ ಯು ತನ್ನ ಬದ್ಧತೆಗಳಲ್ಲಿ ಮೊದಲ ಆದ್ಯತೆಯಾಗಿ ಪೋರ್ಚುಗಲ್ ನ ಕಾರ್ಮಿಕರ ಮತ್ತು ಜನರ ಹಕ್ಕುಗಳ ಪುನರ್ ಸ್ಥಾಪನೆ, ವೇತನ ಹೆಚ್ಚಳ, ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳಿಗೆ ಬೆಂಬಲ ನೀಡಿ, ಖಾಸಗೀಕರಣ ಪ್ರಕ್ರಿಯೆಯನ್ನು ನಿಲ್ಲಿಸುವ ಎಲ್ಲಾ ಧನಾತ್ಮಕ ನೀತಿಗಳನ್ನು ಬೆಂಬಲಿಸಿತು. ಇದಕ್ಕೆ ವಿರುದ್ಧವಾದ ನೀತಿಗಳನ್ನು ಟೀಕಿಸುತ್ತದೆ. ಹೊಸ ಅಲ್ಪಸಂಖ್ಯಾತ ಸರಕಾರಕ್ಕೆ ಪಿಸಿಪಿಯ ಬೆಂಬಲದ ನೀತಿಯನ್ನು ಹಲವರು ಟೀಕಿಸಿದ್ದಾರೆ. (ಅದೇ ರೀತಿಯಾಗಿ ಭಾರತದಲ್ಲಿ ಪ್ರಸ್ತುತ ಅಧಿಕಾರದಲ್ಲಿರುವ ಆರ್. ಎಸ್.ಎಸ್. ಕಾರ್ಯಸೂಚಿಯನ್ನು ಜಾರಿಗೆ ತರಲು ಆಡಳಿತ ನಡೆಸುತ್ತಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರವನ್ನು ಕಿತ್ತು ಹಾಕಲು ಸಿಪಿಐ(ಎಂ) ಪ್ರಯತ್ನ ನಡೆಸುತ್ತಿದೆ ಎಂಬ ಹೋಲಿಕೆ ಮಾಡಲಾಯಿತು.) ಈಗ ಪಿಸಿಪಿ ಯು ಪಕ್ಷದ ಸಂಘಟನೆಯನ್ನು ಬಲಪಡಿಸಲು ಕಾರ್ಯೋನ್ಮುಖವಾಗಿದೆ. ಹೊಸ ಸದಸ್ಯರನ್ನು ನೇಮಕ ಮಾಡುವುದು, ಸಾಮಾಜಿಕ ಮತ್ತು ಚುನಾವಣಾ ಕ್ಷೇತ್ರಗಳಲ್ಲಿ ಚಟುವಟಿಕೆಗಳನ್ನು ಹೆಚ್ಚಿಸುವ ಕಡೆ ಮಹತ್ವ ನೀಡುತ್ತಿದೆ ಎಂದು ಜೆರೊನಿಮೊರವರು ನಿಯೋಗ ದೊಂದಿಗೆ ತಮ್ಮ ಕಾರ್ಯ ತಂತ್ರಗಳನ್ನು ಹಂಚಿಕೊಂಡರು. "ಅಂತಿಮ ಗೆಲುವು ಕಷ್ಟವಾಗಬಹುದು, ಆದರೆ ಅಸಾಧ್ಯವೇನು ಅಲ್ಲ" ಎಂಬ ದೃಢವಿಶ್ವಾಸ ವ್ಯಕ್ತಪಡಿಸಿದರು. ●

ವಿಯೆಟ್ನಾಂ ಅಧ್ಯಕ್ಷ ಟ್ರಾನ್ ಡಾಯ್ ಕ್ವಾಂಗ್ ಗೆ ಶ್ರದ್ಧಾಂಜಲಿ



ಸೆಪ್ಟೆಂಬರ್ 21 ರಂದು ತಮ್ಮ 62ನೇ ವಯಸ್ಸಿನಲ್ಲಿ ಹಠಾತ್ತಾಗಿ ನಿಧನ ಹೊಂದಿದ ವಿಯೆಟ್ನಾಂನ ಅಧ್ಯಕ್ಷರಾದ ಟ್ರಾನ್ ಡಾಯ್ ಕ್ವಾಂಗ್ ರವರಿಗೆ ಸಿಪಿಐ(ಎಂ), ದುಃಖವನ್ನು ವ್ಯಕ್ತಪಡಿಸಿ, ಭಾವ ಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿದೆ.

ಕಾಮ್ರೇಡ್ ಟ್ರಾನ್ ಡಾಯ್ ಕ್ವಾಂಗ್ ರವರು 'ನಿನ್ ಬಿನ್ಹಿ' ನಲ್ಲಿನ ಕೃಷಿ ಕುಟುಂಬದ ಸಮುದಾಯದಲ್ಲಿ ಜನಿಸಿ, ರಾಷ್ಟ್ರದ ಅತ್ಯುನ್ನತ ಸ್ಥಾನಕ್ಕೆ ಏರುವ ಮುನ್ನಾ ಪಕ್ಷದ ಕೆಳ ಹಂತದ ಹಲವು ಸ್ಥಾನಗಳಲ್ಲಿ ದುಡಿದು, ಪೊಲಿಟ್ ಬ್ಯೂರೊ ಸದಸ್ಯರಾಗಿದ್ದರು. ಆರಂಭದಲ್ಲಿ, ಪ್ರಾಧ್ಯಾಪಕರಾಗಿ ಕಾನೂನಿನಲ್ಲಿ ಡಾಕ್ಟರೇಟ್ ಪದವಿ ಹೊಂದಿದ್ದ ಇವರು, ವಿಯೆಟ್ನಾಮಿನ ಅಧ್ಯಕ್ಷರಾಗುವ ಮುನ್ನಾ ಅನೇಕ ಉನ್ನತ ಸ್ಥಾನಗಳಲ್ಲಿ ದುಡಿದು ಅಪಾರ ಅನುಭವ ಹೊಂದಿದ್ದರು.

ವಿಯೆಟ್ನಾಂನಲ್ಲಿ ಪಕ್ಷದ ಕಾರ್ಯ ಮತ್ತು ಬೆಳವಣಿಗೆಗೆ ಹಾಗೂ ದೇಶದ ಭದ್ರತೆಯನ್ನು ಬಲಪಡಿಸುವುದಕ್ಕಾಗಿ ಹಾಗೂ ವಿಯೆಟ್ನಾಂ ಜನರ ಹಿತಾಸಕ್ತಿಗಳನ್ನು ಮತ್ತು ಸಮಾಜವಾದಿ ಸಮಾಜವನ್ನು ನಿರ್ಮಿಸಲು ಕೆಲಸ ಮಾಡಿದ್ದರು. ಸಮಾಜವಾದಿ ವ್ಯವಸ್ಥೆಯ ಬಗ್ಗೆ ಅವರಿಗಿದ್ದ ದೂರದೃಷ್ಟಿ ಮತ್ತು ರಾಜಕೀಯ ಜ್ಞಾನ ಅವರಿಗೆ ಹೆಚ್ಚಿನ ಗೌರವವನ್ನು ತಂದು ಕೊಟ್ಟಿತು. ಕಾಮ್ರೇಡ್ ಕ್ವಾಂಗ್ ಈ ವರ್ಷದ ಮಾರ್ಚ್ ನಲ್ಲಿ ಭಾರತಕ್ಕೆ ಬೇಟಿ ನೀಡಿದ್ದರು. ಉಭಯ ದೇಶಗಳ ಸಂಬಂಧ ಮತ್ತಷ್ಟು ಬಲಪಡಿಸಲು ಈ ಭೇಟಿ ಸಹಕಾರಿಯಾಗಿತ್ತು.

ಸಿಪಿಐ(ಎಂ) ಪಕ್ಷವು ಕ್ವಾಂಗ್ ರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತಾ, ಕುಟುಂಬದ ಸದಸ್ಯರಿಗೆ ಹಾಗೂ ವಿಯಟ್ನಾಂ ನ ಕಮ್ಯೂನಿಸ್ಟ್ ಪಕ್ಷ ಮತ್ತು ವಿಯಟ್ನಾಂ ನ ಜನರಿಗೆ ಸಹಾನುಭೂತಿ ವ್ಯಕ್ತಪಡಿಸುತ್ತದೆ. ಇವರ ಅಗಲಿಕೆಯ ದುಃಖವನ್ನು ವಿಯಟ್ನಾಂ ಜನರು ಜಯಿಸಿ ಸರಕಾರದ ಮತ್ತು ಪಕ್ಷದ ಬಲಿಷ್ಟವಾದ ನಾಯಕತ್ವದಲ್ಲಿ ವಿಯೆಟ್ನಾಂ ಸಮಾಜವಾದಿ ನಿರ್ಮಾಣದ ಮಾರ್ಗವನ್ನು ಅತ್ಯುತ್ತಮವಾಗಿ ಮುನ್ನಡೆಸುತ್ತಾರೆ. ಇವರು ಬಿಟ್ಟು ಹೋಗಿರುವ ಕಾರ್ಯಗಳನ್ನು ಪೂರೈಸುತ್ತಾರೆಂಬ ನಂಬಿಕೆ ಯನ್ನು ಸಿಪಿಐ(ಎಂ) ವ್ಯಕ್ತಪಡಿಸಿದೆ.

ಬೆಂಗಳೂರು ವಿಭಜನೆ ಅಲ್ಲ, ಪುನರ್‍ರಚನೆ! ನೆನೆಗುದಿಯಲ್ಲಿ ಬಿ.ಎಸ್.ಪಾಟೀಲ್ ವರದಿ

ಸೆಪ್ಟೆಂಬರ್ 23 ರಂದು ಬಿ.ಬಿ.ಎಂ.ಪಿ. ಪುನರ್‍ರಚನೆ ಬಗ್ಗೆ ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಬಸವನಗುಡಿಯ ಜ್ಯೋತಿ ಬಸು ಭವನದಲ್ಲಿ ಒಂದು ಚರ್ಚೆ ಏರ್ಪಡಿಸಿತ್ತು. ರಾಜಕೀಯ ಪಕ್ಷಗಳು ಮತ್ತು ನಾಗರಿಕ ಸಂಘಟನೆಗಳ ಪ್ರತಿನಿಧಿಗಳನ್ನು ಈ ಸಭೆಗೆ ಆಹ್ವಾನಿಸಲಾಗಿತ್ತು. ಸಭೆಯಲ್ಲಿ ಬಿ.ಬಿ.ಎಂ.ಪಿ. ಪುನರ್‍ರಚನೆ ಬಗ್ಗೆ ಹಿಂದಿನ ಸರಕಾರ ರಚಿಸಿದ್ದ ಸಮಿತಿಯ ಅಧ್ಯಕ್ಷ ಮತ್ತು ಮಾಜಿ ಮುಖ್ಯ ಕಾರ್ಯದರ್ಶಿ ಬಿ.ಎಸ್. ಪಾಟೀಲ್ ತಾವು ಮಂಡಿಸಿದ್ದ ವರದಿಯ ಮುಖ್ಯ ಅಂಶಗಳು ಇಲ್ಲಿದೆ. ಇದರ ಬಗ್ಗೆ ವ್ಯಾಪಕ ಚರ್ಚೆ ಆಗಬೇಕಾಗಿದೆ.

ಲಿಂಗರಾಜು, ಬೆಂಗಳೂರು



ಒಂದು ಕೋಟಿ ಜನಸಂಖ್ಯೆ ಗಡಿದಾಟಿರುವ ಬೆಂಗಳೂರು, ಮುಂಬರುವ 20 ವರ್ಷಗಳಲ್ಲಿ ಇದು 2 ಕೋಟಿ ತಲುಪುವ ಸಾಧ್ಯತೆಯನ್ನು ತಜ್ಞರ ವರದಿಗಳು ಹೇಳುತ್ತಿವೆ. ಈ ದಶಕದಲ್ಲಿ ದೇಶದ ಯಾವ ನಗರಗಳೂ ಸಾಟಿ ಆಗದ ರೀತಿಯಲ್ಲಿ ಶೇ 44.6 ರಷ್ಟು ಅಭಿವೃದ್ಧಿಯ ನೆಗೆತವನ್ನು ಈ ಮಹಾನಗರ ಸಾಧಿಸಿದೆ. ಈ ಬೆಳವಣಿಗೆ ವಿಶ್ವದ ಹೂಡಿಕೆದಾರರನ್ನು ಸೂಜಿಗಲ್ಲಿನಂತೆ ಸೆಳೆಯಲು ಶುರು ಮಾಡಿದೆ. ಹೂಡಿಕೆದಾರ ಕಂಪನಿಗಳಿಗೆ ಟಾಡಾಗಳನ್ನು ಸಂಗ್ರಹಿಸಿ ನೀಡುವಲ್ಲಿ ಹಲವು ಐಟಿ ಕಂಪನಿಗಳು ಸದ್ದಿಲ್ಲದೆ ಕೆಲಸ ಮಾಡುತ್ತಿವೆ. ಹೀಗಾಗಿಯೇ ನಗರದ ಅಷ್ಟ ದಿಕ್ಕುಗಳಲ್ಲೂ ಬೃಹತ್ ಪ್ರಮಾಣದ ಸಾವಿರಾರು ವಸತಿ ಸಂಕೀರ್ಣಗಳು ತಲೆ ಎತ್ತುತ್ತಿವೆ.

ಬೆಳವಣಿಗೆಯನ್ನು ನಿಯಂತ್ರಿಸುವುದು ಸಾಧ್ಯವಾಗದ ಮಾತು. ಆದರೆ ಈ ಬೆಳವಣಿಗೆ ವ್ಯವಸ್ಥಿತವಾಗಿ ಆಗಬೇಕಷ್ಟೆ. ನಗರ ಹಲವು ಜ್ವಲಂತ ಸಮಸ್ಯೆಗಳಿಂದ ಈಗಾಗಲೇ ಜರ್ಜರಿತಗೊಂಡಿದೆ. ಗಾರ್ಬೆಜ್ ಸಿಟಿ ನಾಮಕರಣವೂ ಆಗಿದೆ. ವಾರ್ಡ್ ರಚನೆಯಲ್ಲಿ ಅಸಮತೋಲನ, ಅನುದಾನ ನೀಡಿಕೆಯಲ್ಲಿ ತಾರತಮ್ಯ, ರಸ್ತೆ, ಕುಡಿಯುವ ನೀರು, ನೈರ್ಮಲ್ಯದಂತಹ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಇನ್ನೂ ಹೆಣಗಾಡುತ್ತಿದ್ದು, ಪದೇ ಪದೇ ನೆರೆಗೆ ಸಿಲುಕುವುದನ್ನು ತಡೆಯಲಾಗುತ್ತಿಲ್ಲ. ಮಿತಿಮೀರಿದ ಮಾಲಿನ್ಯ ಹಾಗು ಸಂಚಾರ ದಟ್ಟಣೆ ಸಮಸ್ಯೆ ಕಗ್ಗಾಂಟಾಗಿದೆ. ಹೀಗೆ ಇಡೀ ಬಿಬಿಎಂಪಿ ಆಡಳಿತ ಸರಿಪಡಿಸಲು ಸಾಧ್ಯವಿಲ್ಲ ಎನ್ನುವಷ್ಟು ಹದಗೆಟ್ಟಿದೆ. ಬಿಬಿಎಂಪಿ ಜಡತ್ವ ಹೇಗಿದೆ ಎಂಬುದಕ್ಕೆ, ಹೈಕೋರ್ಟು ಮುಂದೆ ನಿಂತು ರಸ್ತೆ ಗುಂಡಿ ಮುಚ್ಚಿಸಬೇಕಾಯ್ತು! 'ಎಮ್ಮೆಯ ಮೇಲೆ ಮಳೆ ಹ್ಯುಯ್ದಂತೆ' ಪಾಲಿಕೆ ಆಡಳಿತ ಇರುವಾಗ, ಹೆಮ್ಮರವಾಗಿ ಬೆಳೆಯುತ್ತಿರುವ ಮಹಾನಗರಕ್ಕೆ ವೈಜ್ಞಾನಿಕವಾದ ಹಾಗು ದೂರದೃಷ್ಠಿಯ 'ನಗರ ಯೋಜನೆ' ಅಗತ್ಯತೆಯ ಜರೂರಿದೆ. ಒಬ್ಬ ಮೇಯರ್, ಒಬ್ಬ ಆಯುಕ್ತ, ಒಂದು ಕೋಟಿ ಜನಸಂಖ್ಯೆಯ ಈ ಮಹಾನಗರದ ಆಡಳಿತವನ್ನು ನಿಭಾಯಿಸಲು ಸಾಧ್ಯವಾಗದ ಈ ದುರ್ಬಲ ವ್ಯವಸ್ಥೆ ಬದಲಾಗುವ ಅವಶ್ಯಕತೆ ಇತ್ತು, ಇದೆ.

ಇದನ್ನು ಮನಗಂಡ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರವು 2014 ಅಕ್ಟೋಬರ್ ನಲ್ಲಿ, ನಿವೃತ್ತ ಮುಖ್ಯ ಕಾರ್ಯದರ್ಶಿ ಬಿ.ಎಸ್.ಪಾಟೀಲ್ ಅಧ್ಯಕ್ಷತೆಯ ಮೂರು ಜನರ ಸಮಿತಿಯನ್ನು ನೇಮಕ ಮಾಡಿ ವರದಿ ಸಿದ್ಧಪಡಿಸುವಂತೆ ಕೇಳಿತ್ತು. ಸಮಿತಿಯಲ್ಲಿದ್ದ ಬಿಬಿಎಂಪಿ ನಿವೃತ್ತ ಆಯುಕ್ತ ಸಿದ್ದಯ್ಯ ಹಾಗು ನಗರ ಯೋಜನೆ ತಜ್ಞ ವಿ.ರವಿಚಂದರ್ ಹಾಗು ಸದಸ್ಯ ಕಾರ್ಯದರ್ಶಿ ವಿ.ಯಶ್ವಂತ್ (ಐಎಎಸ್) ಇವರ ತಂಡ, ಬಹಳ ಆಸ್ಥೆ ವಹಿಸಿ 8 ತಿಂಗಳ ಸುಧೀರ್ಘ ಅಧ್ಯಯನ ನಡೆಸಿದೆ. ಜತೆಗೆ ಚುನಾಯಿತ ಪ್ರತಿನಿಧಿಗಳು, ರಾಜಕೀಯ ಪಕ್ಷಗಳು ಹಾಗು ನಾಗರಿಕ ಸಂಘ ಸಂಸ್ಥೆಗಳ ಅಭಿಪ್ರಾಯಗಳನ್ನು ಸಂಗ್ರಹಿಸಿದೆ. ಹಾಗೂ ಇದಕ್ಕಾಗಿ ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ, ಡಬ್ಲ್ಯುಆರ್‌ಐ ಇಂಡಿಯಾ, ಐಐಎಸ್‌ಸಿ, ಐಐಎಚ್‌ಸಿ, ಐಐಎಂಬಿ, ಐಸೆಕ್, ಜನಾಗ್ರಹ ಸೇರಿದಂತೆ ಇನ್ನು ಹಲವು ತಜ್ಞ ಸಂಸ್ಥೆಗಳ ನೆರವನ್ನು ಪಡೆದು ಕೊಂಡಿದೆ. ಮುಂದುವರಿದು ದೇಶದ ಪ್ರಮುಖ ನಗರಗಳು, ಹಾಗು ವಿಶ್ವದ ಹಲವು ಪ್ರತಿಷ್ಠಿತ ನಗರಗಳ ನಗರ ಯೋಜನೆಯನ್ನು ಅಧ್ಯಯನ ಮಾಡುವ ಜತೆಗೆ ಬೆಂಗಳೂರು ಬ್ರಾಂಡ್‌ಗೆ ದಕ್ಕೆಯಾಗದಂತೆ, ನಗರದ ಅನನ್ಯತೆ, ಹಾಗು ಜನರ ನಗರದೊಂದಿಗಿನ ಭಾವನಾತ್ಮಕ ಸಂಬಂಧಿತ ವಿಚಾರಗಳಿಗೆ ಕುಂದುಂಟಾಗದಂತೆ 2 ಸಾವಿರ ಪುಟಗಳ ತನ್ನ ವರದಿಯನ್ನು ಸಿದ್ಧಪಡಿಸಿ ಸರ್ಕಾರದ ಕೈಗೆ ನೀಡಿತ್ತು.

ಸರ್ಕಾರ ಈ ವರದಿಯನ್ನು ಚರ್ಚೆಗೆ ಕೈಗೆತ್ತಿಕೊಳ್ಳುವ ಮೊದಲೇ 'ಈ ವರದಿ ಬೆಂಗಳೂರನ್ನು ಇಬ್ಭಾಗ ಮಾಡಲು ಹೊರಟಿದೆ, ಕೆಂಪೇಗೌಡರು ಕಟ್ಟಿದ ಬೆಂಗಳೂರನ್ನು ಒಡೆಯಲಾಗುತ್ತಿದೆ' ಎಂಬ ಹುರುಳಿಲ್ಲದ ಹೊಣೆಗೇಡಿತನದ ಅಪಪ್ರಚಾರವನ್ನು ಕೂಗುಮಾರಿ ಮಾಧ್ಯಮಗಳೇ ಮಾಡಿದವು. ಮಾಧ್ಯಮಗಳು ವಿವೇಚನೆ ಪ್ರದರ್ಶಿಸಿದ್ದಲ್ಲಿ, ವರದಿ ಮೇಲೆ ಒಂದು ಆರೋಗ್ಯಕರ ಚರ್ಚೆ ಆಗುವಂತೆ ಮಾಡಬಹುದಿತ್ತು. ವರದಿಯಲ್ಲಿ ಕೆಲವೆಡೆ 'ವಿಭಜನೆ' ಎಂಬ ಶಬ್ಧ ಇರುವುದು ಜನರನ್ನು ನಂಬಿಸಲು ಸಹಾಯವನ್ನೂ ಮಾಡಿದೆ. ಇತ್ತ ವರದಿಯಲ್ಲೇನಿದೆ ಎಂಬುದನ್ನು ತಿಳಿಯುವ ಪ್ರಯತ್ನವನ್ನೂ ಮಾಡದೇ, ಬಿಜೆಪಿ, ಜೆಡಿಎಸ್ ಹಾಗು ಇತರ ಕೆಲ ಪಕ್ಷಗಳು ಹಾಗು ಸಂಘಟನೆಗಳು ಬೇಜವಾಬ್ದಾರಿತನದಿಂದ ನಡೆದುಕೊಂಡಿದ್ದು ದುರದೃಷ್ಟಕರ.

ಹಾಗಿದ್ದರೆ ವರದಿಯಲ್ಲೇನಿದೆ?

ಈ ವರದಿ ಆರಂಭದಲ್ಲಿ ಈಗಿರುವ ವ್ಯವಸ್ಥೆಯಲ್ಲಿನ ಲೋಪದೋಷಗಳ ಸಮಗ್ರೀಕರಿಸಿ ನಗರದ ಸಮಸ್ಯೆಗಳ ಮೂಲವನ್ನು ಕೆದಕಿದೆ.

1. ಒಂದು ವರ್ಷದ ನಾಮಕಾವಸ್ಥೆ ಮೇಯರ್, ಅನುದಾನ ಪ್ರಕ್ರಿಯೆ ಮೂಲಕ ಆಡಳಿತ ಕ್ರಮ ಹಾಗು ರಾಜ್ಯ ಸರ್ಕಾರದ ಆರ್ಥಿಕತೆ ನಿಯಂತ್ರಣ
2. ನಗರಾಡಳಿತದಲ್ಲಿ ಜನರ ಸಹಭಾಗಿತ್ವದ ಕೊರತೆ
3. ಬಿಎಂಟಿಸಿ, ಜಲಮಂಡಳಿ, ಬೆಸ್ಕಾಂ ಮುಂತಾದ ಸಂಸ್ಥೆಗಳ ಪ್ರತ್ಯೇಕ ಕಾರ್ಯನಿರ್ವಹಣೆ, ಸಮನ್ವಯದ ಕೊರತೆ
4. 260ಕ್ಕೂ ಹೆಚ್ಚು ಸದಸ್ಯರಿರುವ ದೊಡ್ಡ ಕೌನ್ಸಿಲ್: ಸ್ಥಳೀಯ ಅಭಿವೃದ್ಧಿ ವಿಷಯದಲ್ಲಿ ಸೀಮಿತ ಚರ್ಚೆಗಳು
5. ಯಾರು ಯಾವ ಪಾತ್ರ ವಹಿಸಬೇಕು ಹಾಗು ಅವರ ಹೊಣೆಗಾರಿಕೆ ಬಗ್ಗೆ ಸ್ಪಷ್ಟವಾದ ವ್ಯಾಖ್ಯಾನ ಇಲ್ಲದಿರುವುದು
6. ಲಂಚಗುಳಿತನ, ಕಾಮಗಾರಿಗಳಲ್ಲಿ ಸೋರಿಕೆ, ಆರ್ಥಿಕ ಅಶಿಸ್ತು, ಹಾಗು ಆಸ್ತಿ ತೆರಿಗೆ ಸಂಗ್ರಹದಲ್ಲಿ ಪಾರದರ್ಶಕತೆ ಇಲ್ಲದಿರುವುದು
7. ಸಿಬ್ಬಂದಿ ಕೊರತೆ, ಸಿಬ್ಬಂದಿ ಕಾರ್ಯಕ್ಷಮತೆ ಹೆಚ್ಚಿಸುವ ಕಾರ್ಯಕ್ರಮಗಳು ಇಲ್ಲದಿರುವುದು, ಅಧಿಕಾರಿ ವರ್ಗದಲ್ಲಿ ವೃತ್ತಿಪರತೆ ಮತ್ತು ನಗರ ಜ್ಞಾನದ ಕೊರತೆ ಇತ್ಯಾದಿ.

ಹೀಗೆ ಈಗಿರುವ ವ್ಯವಸ್ಥೆಯಲ್ಲಿನ ಲೋಪಗಳನ್ನು ತೆರೆದು ತೋರಿಸುತ್ತದೆ ಈ ವರದಿ. ಒಂದೆರಡನ್ನು ಉದಾಹರಿಸುವುದಾದರೆ ಒಟ್ಟು ಸಿಬ್ಬಂದಿಯಲ್ಲಿ ಶೇ.35 ಕೊರತೆ ಇದೆ. (ಒಟ್ಟು ಮಂಜೂರಾದ ಹುದ್ದೆಗಳ ಸಂಖ್ಯೆ – 17,943. ಇವುಗಳಲ್ಲಿ 8700 ಹುದ್ದೆಗಳು ಮಾತ್ರ ಭರ್ತಿ ಆಗಿವೆ) ನಗರದಲ್ಲಿರುವ 23 ಲಕ್ಷ ಆಸ್ತಿಗಳಲ್ಲಿ ಶೇ. 50 ರಷ್ಟು ಮಾತ್ರವೇ ತೆರಿಗೆ ಸಂಗ್ರಹ ಆಗುತ್ತಿದೆ. ಹೆಚ್ಚಿನ ಅಧಿಕಾರಿಗಳು ಬೇರೆ ಇಲಾಖೆಗಳಿಂದ ನಿಯೋಜನೆಗೊಂಡವರು **(Deputation)** ಈಗಲೂ ಬಿಬಿಎಂಪಿ ಪೂರ್ಣಪ್ರಮಾಣದಲ್ಲಿ ಗಣಕೀಕರಣ ಆಗದಿರುವ ಬಗ್ಗೆ ಹಾಗು ನಾಲ್ಕು ವರ್ಷಗಳಿಂದ ಲೆಕ್ಕ ಪರಿಶೋಧನೆ ಆಗದಿರುವ ಬಗ್ಗೆ 'ಇದು ಆಘಾತಕಾರಿಯಾದುದು' ಎಂದು ತನ್ನ ಅಭಿಪ್ರಾಯ ವ್ಯಕ್ತಪಡಿಸಿದೆ. ಹಾಗೆಯೇ ಮುಂದುವರೆದು 'ನಗರದ ಭವಿಷ್ಯವನ್ನು ನಿರ್ಧರಿಸುವ ಸಮಗ್ರ ಅಭಿವೃದ್ಧಿ ಯೋಜನೆ (ಸಿಡಿಪಿ) ರೂಪಿಸುವ ವ್ಯವಸ್ಥೆಯು ಜಡತ್ವದಿಂದ ಕೂಡಿದ್ದು, ನಗರದ ವೇಗಕ್ಕೆ ತಕ್ಕನಾಗಿ ಸ್ಪಂದಿಸದೇ ತನ್ನ ಮೌಲ್ಯ ಕಳೆದುಕೊಂಡಿದೆ ಹಾಗು ಜಡ ಭೂ ಬಳಕೆಯ ನಕ್ಷೆಗಳನ್ನು ಮತ್ತು ನಿಯಮಗಳನ್ನು ಮಾತ್ರವೇ ಉತ್ಪಾದಿಸುತ್ತಿದೆ' ಎಂದು ಕಟುವಾದ ಶಬ್ದಗಳಲ್ಲಿ ಜಾಡಿಸಿದೆ.

ಇದಕ್ಕೆ ಪರಿಹಾರವೇನು?

ವರದಿಯು ಮೂರು ಹಂತದ ಆಡಳಿತ ವ್ಯವಸ್ಥೆಯನ್ನು ಪ್ರಸ್ತಾಪಿಸಿದೆ.

1. ಗ್ರೇಟರ್ ಬೆಂಗಳೂರು ಅಥಾರಿಟಿ
2. ಮುನ್ಸಿಪಲ್ ಕಾರ್ಪೋರೇಶನ್
3. ವಾರ್ಡ್

ಇದರ ಜೊತೆಗೆ ಸ್ಥಳೀಯ ಹಂತದ ಯೋಜನಾ ಪ್ರಾಧಿಕಾರ ಹಾಗು ಮೆಟ್ರೋಪಾಲಿಟನ್ ಯೋಜನಾ ಸಮಿತಿಗಳನ್ನು ನೇಮಕ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ. ಮೇಲಿನ ಮೂರು ಹಂತದಲ್ಲಿ ಕೈಗೊಳ್ಳುವ ಯೋಜನೆಗಳು ನಾಗರಿಕರ ಹಿತದೃಷ್ಟಿಯಿಂದ ಆಯಾ ಹಂತದಲ್ಲೇ ತೀರ್ಮಾನವಾಗಬೇಕು ಎಂಬುದನ್ನು ಹೇಳಲಾಗಿದೆ. ಒಟ್ಟು ಆಡಳಿತದಲ್ಲಿ ಪಾರದರ್ಶಕತೆ ತರಲು 'ಕಾವಲು ವ್ಯವಸ್ಥೆ' ರೂಪಿಸಬೇಕು ಎಂದಿದೆ.

ಬೆಂಗಳೂರು ನಗರಕ್ಕೆ ಪ್ರತ್ಯೇಕ ಕಾಯ್ದೆ!

ಈಗಿರುವ ಕೆಎಂಸಿ ಕಾಯ್ದೆ 200 ವಾರ್ಡ್‌ಗಳ ಗರಿಷ್ಠ ಮಿತಿ ಹೇರಿದೆ. ಈ ಮಿತಿಯಲ್ಲಿ ಈ ಮಹಾನಗರದ ಸುಗಮ ಆಡಳಿತವನ್ನು ನಡೆಸುವುದು ಕಾರ್ಯಸಾಧುವಲ್ಲ, ಭವಿಷ್ಯದ ಹಿತದೃಷ್ಟಿಯಿಂದ ಪ್ರತ್ಯೇಕ ಕಾಯ್ದೆಯ ಶಿಫಾರಸ್ಸು ಮಾಡಿದೆ. ಇದಕ್ಕೆ ಮುಖ್ಯ ಕಾರಣ, ಆಡಳಿತದ ಎರಡನೇ ಹಂತದಲ್ಲಿ 5 ಮುನ್ಸಿಪಲ್ ಕಾರ್ಪೋರೇಶನ್‌ಗಳನ್ನು ರಚಿಸುವುದು, ಇದಕ್ಕೆ ಪೂರಕವಾಗಿ ಆಡಳಿತದ ಅನುಕೂಲತೆ ದೃಷ್ಠಿಯಿಂದ 35 ರಿಂದ 40 ವಾರ್ಡ್‌ಗಳಿಗೆ ಒಂದು ವಲಯವನ್ನಾಗಿ ವಿಭಾಗಿಸುವುದು. ಮೂರನೇ ಹಂತದಲ್ಲಿ 20 ಸಾವಿರ ಜನಸಂಖ್ಯೆ ಮೀರದಂತೆ ವಾರ್ಡ್ ಮರು ವಿಂಗಡಣೆ ಮಾಡಿ ಇದರ ಸಂಖ್ಯೆಯನ್ನು 400ಕ್ಕೆ ಏರಿಸುವ ಪ್ರಸ್ತಾಪ ಮಾಡಿದೆ. ಹೀಗಾಗಿ ಈ ಪ್ರಸ್ತಾವನೆ ಕೆಎಂಸಿ ಕಾಯ್ದೆ ಅಡ್ಡಿ ಆಗುವುದರಿಂದ 'ಗ್ರೇಟರ್ ಬೆಂಗಳೂರು ಗೌರ್ನೆನ್ಸ್ ಮಸೂದೆ' ಎಂಬ ಪ್ರತ್ಯೇಕ ಕಾಯ್ದೆ ತರಬೇಕೆಂದು ಹೇಳುತ್ತದೆ.

ಆಸ್ತಿ ತೆರಿಗೆಯಲ್ಲಿ ವಾರ್ಡಿನ ಪಾಲು!

ಈಗ ಜಾರಿಯಲ್ಲಿ 3 ಕೋಟಿ ರೂಪಾಯಿ ವಾರ್ಡ್ ಅನುದಾನ ನೀಡುವ ಪದ್ಧತಿಗೆ ಬದಲಾಗಿ, ಸಂಬಂಧಪಟ್ಟ ವಾರ್ಡಿನಲ್ಲಿ ಸಂಗ್ರಹವಾಗುವ ಒಟ್ಟು ಆಸ್ತಿ ತೆರಿಗೆಯಲ್ಲಿ ಒಂದು ನಿರ್ದಿಷ್ಟ ಮಟ್ಟದ ಪಾಲನ್ನು ವಾರ್ಡ್‌ಗೆ ನೀಡಬೇಕೆನ್ನುತ್ತದೆ. ಜತೆಗೆ ಕೆಲವು ವಾರ್ಡ್‌ಗಳಲ್ಲಿ ಮೂಲಭೂತ ಅವಶ್ಯಕತೆಗಳ ಕೊರತೆಯಿದ್ದಲ್ಲಿ ಅದರ ಆಧಾರದ ಮೇಲೆ ಹೆಚ್ಚುವರಿ ಅನುದಾನವನ್ನು ನೀಡಬೇಕೆಂದು ಹೇಳುತ್ತದೆ.

ಮೇಯರ್‌ಗೆ ನೇರ ಚುನಾವಣೆ? ವಾರ್ಡ್ ಸಮಿತಿಗೆ ಅನುಪಾತದ ಪ್ರಾತಿನಿದ್ಯ!

ಆಡಳಿತದ ವಿಕೇಂದ್ರೀಕರಣಕ್ಕೆ ಒತ್ತು ನೀಡಿರುವ ಈ ವರದಿ, ಮೇಯರ್ ಆಯ್ಕೆಗೆ ಮಾತ್ರ ನೇರ ಚುನಾವಣೆಯ ಶಿಫಾರಸ್ಸು ಮಾಡಿದೆ. ಈ ಪ್ರಸ್ತಾಪ ಚರ್ಚಾಸ್ಪದ. ನೇರ ಚುನಾವಣೆಯಾದಲ್ಲಿ ಮುಖ್ಯಮಂತ್ರಿಗೆ ಸಮನಾದ ಮತ್ತೊಂದು ಸ್ಥಾನ ಸೃಷ್ಠಿಯಾದಂತಾಗುತ್ತದೆ, ಇದು ಸರಿಯಾದುದಲ್ಲ ಎಂಬ ಅಭಿಪ್ರಾಯಗಳು ವ್ಯಕ್ತವಾಗಿವೆ. ಈ ವಾದದಲ್ಲಿ ಸತ್ಯಾಂಶ ಇದೆ ಎಂಬುದೂ ಹೌದು. ಆದರೆ ಮೇಯರ್ ಅಧಿಕಾರಾವಧಿಯನ್ನು ಒಂದು ವರ್ಷದ ಬದಲಿಗೆ ಐದು ವರ್ಷಕ್ಕೆ ಹೆಚ್ಚಿಸಿದೆ.

ವಾರ್ಡ್ ಸಮಿತಿ ನೇಮಕಕ್ಕೆ ಈಗಿರುವ ಪದ್ಧತಿಗೆ ಬದಲಾಗಿ ಅನುಪಾತದ ಪ್ರಾತಿನಿಧ್ಯವನ್ನು ಪ್ರಸ್ತಾಪಿಸಿದೆ. ಅಂದರೆ ಒಂದು ವಾರ್ಡಿನ ಚುನಾವಣೆಯಲ್ಲಿ ಸೋತ ಅಷ್ಟೂ ಅಭ್ಯರ್ಥಿಗಳಲ್ಲಿ, ಪ್ರತಿ ಅಭ್ಯರ್ಥಿ ತೆಗೆದುಕೊಳ್ಳುವ ಮತಗಳ ಪ್ರಮಾಣ ಆಧರಿಸಿ, ಆತ ಪ್ರತಿನಿಧಿಸಿದ ಪಕ್ಷದಿಂದ ನಿರ್ಧಿಷ್ಟ ಸಂಖ್ಯೆಯ ಸದಸ್ಯರು ವಾರ್ಡ್ ಸಮಿತಿಗೆ ಆಯ್ಕೆ ಆಗಬೇಕೆಂಬ ಬಹಳ ಆಸಕ್ತಿದಾಯಕ ಪ್ರಸ್ತಾಪ ಮುಂದಿಟ್ಟಿದೆ. ಈ ಪ್ರಸ್ತಾಪ ನಿಜವಾದ ಪ್ರಜಾಪ್ರಭುತ್ವವನ್ನು ಖಾತ್ರಿಪಡಿಸುವ ವೈಜ್ಞಾನಿಕ ವಿಧಾನವೂ ಹೌದು.

ಸಿಬ್ಬಂದಿಯ ಶಾಶ್ವತ ನೇಮಕಾತಿ

ಸಿಬ್ಬಂದಿ ಕೊರತೆಯ ಜತೆಗೆ, ಈಗಿರುವ ಬಹುಪಾಲು ಅಧಿಕಾರಿಗಳು ಮತ್ತು ಸಿಬ್ಬಂದಿ ನಿಯೋಜನೆ ಮೇಲೆ ಬಂದವರು. ಇವರಲ್ಲಿ ಹೆಚ್ಚಿನವರು ನಗರಾಡಳಿತದ ಅನುಭವ ಇಲ್ಲದವರು. ಇಂತಹವರಲ್ಲಿ ಕೆಲವರ ಮೇಲೆ ಭ್ರಷ್ಟಾಚಾರ ಆರೋಪ ಬಂದಿದ್ದಾಗಿಯೂ ಕ್ರಮ ಕೈಗೊಳ್ಳಲಾಗದ ಅಸಹಾಯಕತೆ ಬಿಬಿಎಂಪಿ ಆಡಳಿತದ್ದು. ಏಕೆಂದರೆ ಬಹಳ ಮಂದಿ ಭ್ರಷ್ಟಾಚಾರ ಆರೋಪ ಬಂದೊಡನೆ ತಮ್ಮ ಮಾತೃ ಇಲಾಖೆಗೆ ವರ್ಗವಾಗಿ ಹೋಗುತ್ತಾರೆ. ಅಂತಹ ಹಲವು ಪ್ರಕರಣಗಳು ಇಂದಿಗೂ ಇವೆ. ಹೀಗಾಗಿ ಬಿಬಿಎಂಪಿಗೆ ಮಾತ್ರವೇ ಸಿಬ್ಬಂದಿ ಅಧಿಕಾರಿಗಳ ಶಾಶ್ವತ ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾಪವೂ ಇದರಲ್ಲಿದೆ.

ಬಿಎಸ್ ಪಾಟೀಲ್ ಸಮಿತಿಯ ಈ ವರದಿ ಆಡಳಿತದ ಎಲ್ಲ ವಿಭಾಗಗಳನ್ನು ಸಮಗ್ರವಾಗಿ ಅಭ್ಯಸಿಸಿ ಅದರಲ್ಲಿನ ನ್ಯೂನ್ಯತೆಗಳನ್ನು ಹೋಗಲಾಡಿಸಲು ಒಟ್ಟು

ಪುಟ 11 ಕ್ಕೆ

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**